ಶೂದ್ರ

ಈ ಸಂಚಿಕೆಯಲ್ಲಿ

ಗಿರೀಶ್ ವಿ. ವಾಘ್–ಜಿ. ಕೆ. ರವೀಂದ್ರಕುಮಾರ್–ಚಿನುವ ಅಛೀಬೆ
ಕೃಷ್ಣಮೂರ್ತಿ ಚಂದರ್ – ಸ್ವಾಮಿನಾಥ – ವೀಣಾ ಬನ್ನಂಜೆ
ಬಿ. ಎಸ್. ನಾಗರತ್ನಕುಮಾರಿ – ಮೀ. ಚಿಕ್ಕವೀರಯ್ಯ – ಮಾಧವ
ಐತಾಳ್ – ಮೊರ್ದ್ಧಾ ಶಾ ವಾನುನು – ಮ್ಯಾಕ್ಸಿನ್ ಕಾಫ್‌ಮನ್ ನೆನ್
ಜಿಯಾ ಮೀರ್ – ಎಂ. ವಿಠೋಬಶೆಟ್ಟಿ – ಡಿ. ಆರ್. ನಾಗರಾಜ್
ಹಾ. ಮಾ. ಕನಕ–ಉತ್ತನೂರು ರಾಜಮ್ಮ ವಿ. ಶೆಟ್ಟಿ–ಎಚ್. ಎಸ್.
ನವೀನಕುಮಾರ್–ಎಲ್. ಎನ್. ಗೋಪಾಲಕೃಷ್ಣ–ವಿ. ಎಸ್. ಶ್ರೀಧರ
ಕೆ. ಎಸ್. ನಾರಾಯಣಸ್ವಾಮಿ – ಕನಸಿಗೊಂದು ಕಣ್ಣು – ಇತ್ಯಾದಿ.

ಕನ್ನಡ ಕಥಾ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತ ಬಂದಿರುವ ಯಶವಂತ ಚಿತ್ತಾಲರಿಗೆ ಮಾಸ್ತಿಯವರ ಪ್ರಶಸ್ತಿ ಬಂದಿದೆ. ಇದಕ್ಕಾಗಿ ಶೂದ್ರ ಚಿತ್ತಾಲರನ್ನು ಅಭಿನಂದಿಸಲು ಸಂತೋಷ ಪಡುತ್ತದೆ.

* * * *

ದೇವಿಪ್ರಸಾದ ಚಟ್ಟೋಪಾಧ್ಯಾಯರು ಭಾರತದ ಕೆಲವೇ ಮಹೋನ್ನತ ವಿದ್ವಾಂಸರಲ್ಲಿ ಒಬ್ಬರು. ತಮ್ಮ 'ಲೋಕಾಯತ' ಮತ್ತು 'ಎಥೀಯಿಸಂ' ಅಂಥ ಕೃತಿಗಳ ಮೂಲಕ ಭಾಷೆ ಮತ್ತು ಪ್ರಾಂತೀಯಗಡಿಗಳನ್ನು ಮೀರಿ ಪ್ರಭಾವ ಬೀರಿದವರು. ಇಂಥವರು ಇತ್ತೀಚೆಗೆ ಕಲಕತ್ತೆಯಲ್ಲಿ ನಿಧನ ಹೊಂದಿದರು. ಆದಕ್ಕಾಗಿ ಶೂದ್ರ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಲು ಬಯಸುತ್ತದೆ.

* * * *

'ಶೂದ್ರ'ದ 'ಬೋಧಿವೃಕ್ಷ'ವು ಬೆಂಗಳೂರಿನ ಪ್ರಸಿದ್ಧ ವಿದ್ಯಾವಂತ ಕುಟುಂಬವಾದ ಪಾಲ್ ಚಿನ್ನಪ್ಪ ಕುಟುಂಬದವರಿಂದ 'ಬೋಧಿವೃಕ್ಷ'ವನ್ನು ದಾನವನ್ನಾಗಿ ಪಡೆದಿದೆ. ಸುಮಾರು ಐವತ್ತು ವರ್ಷಗಳ ಈ ಸುಂದರ ಮರವು 25 × 30 ಸ್ಥಳವನ್ನು ಪಡೆದಿದೆ. ಅಲ್ಲಿ ಒಂದಷ್ಟು ಸಾಹಿತ್ಯ, ಪರಿಸರ ಮತ್ತು ಸಾಂಸ್ಕೃತಿಕ ಸಂಬಂಧಗಳಿಗೆ ಸಂಬಂಧಿಸಿದಂತೆ ವೇದಿಕೆಯನ್ನಾಗಿ ರೂಪಿಸುವ ಆಸೆ ಇದೆ. ಇದರ ಉದ್ಘಾಟನೆಯನ್ನು ನಮ್ಮ ನಡುವಿನ ಪ್ರಜ್ಞಾವಂತ ನ್ಯಾಯಮೂರ್ತಿಗಳಾದ ಎನ್.ಡಿ. ವೆಂಕಟೇಶ್ ಅವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಬಿ.ಸಿ. ರಾಮಚಂದ್ರಶರ್ಮ, ಪಿ. ಲಂಕೇಶ್ ಮೈಸೂರ್‌ಮಠ್, ಡಿ. ಆರ್. ನಾಗರಾಜ್, ಕೆ. ಮರುಳಸಿದ್ದಪ್ಪ, ಭರತಾದ್ರಿ, ಕೊಣಂದೂರು ವೆಂಕಪ್ಪ, ಡಾ|| ಲಕ್ಷ್ಮೀಪತಿ ಬಾಬು, ಡಾ|| ಕೆ.ಎಂ. ಶ್ರೀನಿವಾಸಗೌಡ ಜರಗನಹಳ್ಳಿ ಶಿವಶಂಕರ್, ಹಾಗೂ ಪಾಲ್ ಚಿನ್ನಪ್ಪ ಅವರ ಕುಟುಂಬದವರು ಭಾಗವಹಿಸಿದ್ದರು. ಈ ವೃಕ್ಷವು ಇಸ್ರೋ ಬಡಾವಣೆಯಲ್ಲಿದೆ.

* * * *

ನಮ್ಮ ಅಭಿಮಾನದ ಕವಿ ಎ.ಕೆ. ರಾಮಾನುಜನ್ ಅವರು ನಿಧನ ಹೊಂದಿದ್ದಾರೆ. ಭಾಷೆಯ ನಾನಾ ಮುಖಗಳನ್ನು ವಿಸ್ತರಿಸಿದವರು. ಹಾಗೆಯೇ ಕನ್ನಡ ಮತ್ತು ತಮಿಳಿನ ಹೆಚ್ಚುಗಾರಿಕೆಯನ್ನು ವಿದೇಶಿಯರಿಗೆ ಪರಿಚಯ ಮಾಡಿಕೊಟ್ಟವರು. ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯವರು ಎ. ಕೆ. ರಾಮಾನುಜನ್ ಅವರ ಬಗ್ಗೆ ಗಂಭೀರವಾದ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಇದರಲ್ಲಿ ಗೆಳೆಯ ಡಿ.ಆರ್. ಅವರು ತುಂಬಾ ವಿಚಾರಪೂರ್ಣವಾದ ಪ್ರಬಂಧವನ್ನು ಮಂಡಿಸಿದರು. ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ರಾಮಾನುಜನ್ ಅವರಿಗೆ ಶೂದ್ರ ಶ್ರದ್ಧಾಂಜಲಿಯನ್ನು ಅರ್ಪಿಸುವುದು.

— ಸಿದ್ಧಾರ್ಥ

ಮುಕ್ತಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 2–3 ಆಗಸ್ಟ್ – ಸೆಪ್ಟಂಬರ್ 1993 ಸಂಪುಟ : 20

ಸಹಾಯಕ ಸಂಪಾದಕರು : ಜರಗನಹಳ್ಳಿ ಶಿವಶಂಕರ್ – ಸರ್ವಮಂಗಳಾ ಶ್ರೀಧರ್
ಕೆ. ಎನ್. ಅರುಣ್ – ಎಲ್. ಎನ್. ಮುಕುಂದರಾಜ್
ಕರೀಗೌಡ ಬೀಚನಹಳ್ಳಿ – ಚಂದ್ರಶೇಖರ ಉಪಾಲ

ವಾರ್ಷಿಕ ಚಂದಾ : 65-00 ರೂ. ಪುಸ್ತಕ ಭಂಡಾರಗಳಿಗೆ 70–00 ರೂ.
ಆಜೀವ ಚಂದಾ : 500-00 ರೂ. (ನಾಲ್ಕು ಕಂತುಗಳಲ್ಲಿ) 550–00 ರೂ.

ಬೆಲೆ : 5-00 ರೂ. ದೂರವಾಣಿ : 643337

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾವನ್ನು ಎಂ. ಓ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 10 ರೂ. ಹೆಚ್ಚುವರಿ ತುಂಬಿ.

'ಶೂದ್ರ'ದ ವಿಳಾಸ :

ಶೂದ್ರ ಶ್ರೀನಿವಾಸ್, ನಂ. 824, 7ನೇ ಮೈನ್, ಇಸ್ರೋ ಲೇಔಟ್
ಬೆಂಗಳೂರು–560 078

ಈ ಸಂಚಿಕೆಯ ಪುಟಗಳಲ್ಲಿ

	ಪುಟ
ಮಲೆಗಳಲ್ಲಿ ಮದುಮಗಳು	3
ಹೇ ಸುಳ್ಳೇ ನಮ್ಮನ್ನು ಸುಳ್ಳರನ್ನಾಗಿಸಬೇಡ	9
ಶಿಕ್ಷಕನಾಗಿ ಕಾದಂಬರಿಕಾರ	11
ಕ್ರೂಸೋ ಕನಸು	16
ಶೌಚ ಆಶೌಚ ಮತ್ತು ಶೋಷಣೆಯ ಪರಿಕಲ್ಪನೆ	19
'0' ಯಾದಳು	25
ಅಡಿಗರ ಕಾವ್ಯದ ಪರಿಭಾವನೆ	26
ನಾನು ನಿಮ್ಮ ಗೂಢಚಾರಿ	32
ಉಳಿವೋ ಬದುಕಿನ ಅಂತ್ಯವೋ?	35
ಪ್ರಳಯದ ನಡುವಿನ ವಸಂತ	38
ಎಚ್ಚರಿಕೆ	48
ಜೀವಕ್ರಿಯೆ	49
ಆಳದ ಆಳಲು	51
ಹೆಸರಿಲ್ಲದ ಕವಿತೆ	51
ಒಳನೋಟ	52
ಕನಸಿಗೊಂದು ಕಣ್ಣು	61

ಮುಖಪುಟದ ಕಲೆ : ನಂದಲಾಲ್ ಬೋಸ್

ಮಲೆಗಳಲ್ಲಿ ಮದುಮಗಳು

— ಗಿರೀಶ್ ವಿ. ವಾಘ್

(ಈ ಕಾದಂಬರಿಯಲ್ಲಿನ ಘಟನೆಗಳ ಕಾಲಾನುಕ್ರಮಣಿಕೆಯ ಒಂದು ಅಭ್ಯಾಸ)

ಕುವೆಂಪು ಅವರ "ಮಲೆಗಳಲ್ಲಿ ಮದುಮಗಳು" ಕಾದಂಬರಿ ನಮ್ಮ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು ಎಂದು ಈಗಾಗಲೇ ಮನ್ನಣೆ ಪಡೆದಿದೆ. ಈ ಕಾದಂಬರಿಯ ಬಗ್ಗೆ ಬಂದಿರುವ ವಿಮರ್ಶೆಗಳಲ್ಲಿ ಡಾ॥ ವಿ.ಎಂ. ಇನಾಂದಾರರ "ಕುವೆಂಪು ಕಾದಂಬರಿಗಳು" ಎಂಬ ಕೃತಿ ಓದುಗರ ದೃಷ್ಟಿಯಿಂದ ಬಹಳ ಉಪಯುಕ್ತವಾಗಿದೆ. ಇನಾಂದಾರರು ಕೃತಿಯ ಆಶಯವನ್ನು ಸ್ಪಷ್ಟವಾಗಿ ಗುರುತಿಸಿ ಅದನ್ನು ಸಾಧಿಸಲು ಲೇಖಕರು ಉಪಯೋಗಿಸಿರುವ ತಂತ್ರಗಳನ್ನು ವಿವರವಾಗಿ ವಿಶ್ಲೇಷಿಸಿ, ಕೃತಿಯ ಸಾಫಲ್ಯ ಮತ್ತು ವೈಫಲ್ಯಗಳ ಕಡೆಗೆ ಓದುಗರ ಗಮನ ಸೆಳೆದಿದ್ದಾರೆ. ಆದರೆ ಇನಾಂದಾರರು ಕೃತಿಯ ಒಂದು ಮುಖ್ಯ ತಂತ್ರದ ಕಡೆಗೆ ಗಮನ ಹರಿಸಿಲ್ಲ. ಕಾದಂಬರಿಯ ಈ ತಂತ್ರದ ಕಡೆಗೆ ಗಮನ ಸೆಳೆಯುವುದೇ ಈ ಲೇಖನದ ಉದ್ದೇಶ.

ಕಾದಂಬರಿಯ ಆಶಯವನ್ನು ಇನಾಂದಾರರು ಹೀಗೆ ಗುರುತಿಸಿದ್ದಾರೆ: "ಮಲೆನಾಡಿನ ಒಂದು ಮೂಲೆಯಲ್ಲಿ ನಡೆಯುವ ಘಟನಾವಳಿಗಳ ನಿರೂಪಣೆಯ ಮೂಲಕ ಲೋಕವ್ಯವಹಾರದ ಜಟಿಲ ಸ್ವರೂಪವನ್ನು, ನೂರಾರು ಸಂಬಂಧಗಳು ನೂರಾರು ಬಗೆಯಲ್ಲಿ ಒಂದನ್ನೊಂದು ಪ್ರಭಾವಿಸಿ ತೊಡಕು ತೊಡಕಾಗಿ ಬೆಳೆಯುವ ಕ್ರಮವನ್ನು, ಸಾಮಾನ್ಯ ದೃಷ್ಟಿಗೆ ಸಂಬಂಧವಿಲ್ಲದ್ದೆಂದು ಕಂಡರೂ ಎಲ್ಲಿಯೋ ನಡೆದ ಒಂದು ಸಂಗತಿ ಇನ್ನೆಲ್ಲಿಯದೋ ಒಂದು ಸಂಗತಿಯೊಡನೆ ಅನಿರೀಕ್ಷಿತವಾಗಿ ಸಂಬಂಧ ಪಡೆಯುವ ವಿಚಿತ್ರಗತಿಯನ್ನು, ವಿಶದಪಡಿಸಿ, ಮನುಷ್ಯ ಜೀವನದ ವಿವಿಧ ವ್ಯಾಪಾರಗಳು ನಡೆಯುವ, ಏರ್ಪಡುವ, ತಮ್ಮ ತಮ್ಮ ಪರಿಣಾಮಗಳನ್ನು ಬೀರಿ ಪ್ರವಾಹ ಮುಂದುವರಿಸುತ್ತಲೇ ಇರುವಂತೆ ಮಾಡುವ...... ಲೋಕವ್ಯವಹಾರಗಳ ಹಿಂದಿನ ಕ್ರಮದ ಮೇಲೆ ಬೆಳಕನ್ನು ಬೀರುವ ಒಂದು ಸಮರ್ಥ ಪ್ರಯತ್ನ ಇಲ್ಲಿ ನಡೆದಿದೆ ಎಂದು ನನಗೆನ್ನಿಸುತ್ತದೆ". [ಕುವೆಂಪು ಕಾದಂಬರಿಗಳು–ಮೈಸೂರು(1979) ಪುಟ 62].

ಗಿರೀಶ್ ವಿ. ವಾಘ್, 923, ಕೆಂಗೇರಿ ಉಪನಗರ, ಬೆಂಗಳೂರು–560 060

ಈ ಆಶಯಕ್ಕೆ ಪೂರಕವಾಗಿ ಕಾದಂಬರಿಕಾರರು ಒಂದು ಸೀಮಿತ ಪ್ರದೇಶದಲ್ಲಿ ವಾಸಿಸುವ ನಾಲ್ಕಾರು ಹಳ್ಳಿಗಳಲ್ಲಿನ ಜನರ ಜೀವನದಲ್ಲಿ ಸುಮಾರು ಎರಡೂವರೆ ವಾರಗಳ ಸಮಯದಲ್ಲಿ ನಡೆಯುವ ಘಟನೆಗಳನ್ನು ರಸವತ್ತಾಗಿ ವಿವರಿಸಿರುವುದನ್ನು ಇನಾಂದಾರರು ನಮ್ಮ ಗಮನಕ್ಕೆ ತರುತ್ತಾರೆ. ಆದರೆ ಕಾದಂಬರಿಕಾರರು ಇದೇ ಉದ್ದೇಶಕ್ಕಾಗಿ ಉಪಯೋಗಿಸಿರುವ ಇನ್ನೊಂದು ಮುಖ್ಯ ತಂತ್ರವೆಂದರೆ ಕಾದಂಬರಿಯ ಹಲವಾರು ಘಟನೆಗಳನ್ನು ಹಿಂದು ಮುಂದಾಗಿ ನಿರೂಪಿಸಿರುವುದು. ಇನಾಂದಾರರು ಯಾಕೋ ಇದನ್ನು ಗಮನಿಸಿಲ್ಲ. ಆದರೆ ಒಂದು ಅಡಿಟಿಪ್ಪಣಿಯಲ್ಲಿ ಹೀಗೆ ಹೇಳಿದ್ದಾರೆ: "ಕಾದಂಬರಿಯಲ್ಲಿಯ ಕಾಲಾನುಕ್ರಮದ ಮಾತು ಬಂದಾಗ ಓದುಗನನ್ನು ಕೆಲಮಟ್ಟಿಗೆ ಗೊಂದಲಕ್ಕೀಡುಮಾಡುವ ಇನ್ನೆರಡು ಸನ್ನಿವೇಶಗಳನ್ನು ನೆನೆಯಬಹುದು. ಹದಿನೈದನೆಯ ಅಧ್ಯಾಯದಲ್ಲಿ ವಿವರಿಸಲಾದ (ಐತ-ಪೀಂಚಲುಗಳೊಡನೆ ಮುಕುಂದಯ್ಯ ಎಡೆ ಹಿಡಿಯುವುದಕ್ಕೆಂದು ಹೋದ) ಘಟನೆ ಹದಿನಾರನೆಯ ಅಧ್ಯಾಯದಲ್ಲಿಯ (ಚಿನ್ನಮ್ಮನ ಮದುವೆ ಹೆಗ್ಗಡೆಯೊಂದಿಗೆ ಗೊತ್ತಾದ ವರ್ತಮಾನವನ್ನು ಗುತ್ತಿ ಮುಕುಂದಯ್ಯನಿಗೆ ತಿಳಿಸುವ) ಸನ್ನಿವೇಶದ ನಂತರ ನಡೆದದ್ದು. ಹಾಗೆಯೇ, ನಲವತ್ತಾರನೆಯ ಅಧ್ಯಾಯದಲ್ಲಿಯ (ಪೋಲಿಸರನ್ನು ತಪ್ಪಿಸಿ ಗುತ್ತಿ ಓಡಿಹೋಗುತ್ತಿದ್ದ) ಸನ್ನಿವೇಶ ನಲವತ್ತನಾಲ್ಕರಲ್ಲಿ ಬರುವ (ದೊಡ್ಡಣ್ಣನ ಶವ ಸಂಸ್ಕಾರದ) ಸನ್ನಿವೇಶಕ್ಕೆ ಮೊದಲಿನದು. ಈ ಸನ್ನಿವೇಶಗಳನ್ನು ಹಿಂದೆ ಮುಂದಾಗಿ ವಿವರಿಸಿರುವುದರಲ್ಲಿ ಯಾವ ಪ್ರಯೋಜನ ಅಥವಾ ಔಚಿತ್ಯ ಕಂಡುಬರುವುದಿಲ್ಲ". (ಕು. ಕಾ. ಪು-111).

ಇನಾಂದಾರರು ಹೆಸರಿಸಿರುವ ಮೊದಲನೆ ಘಟನೆಯನ್ನು ಹಿಂದೆ ಮುಂದಾಗಿ ನಿರೂಪಿಸಿ ಕಾದಂಬರಿಕಾರರು ಏನನ್ನು ಸಾಧಿಸಲು ಪ್ರಯತ್ನಿಸಿದ್ದಾರೆ ಎಂದು ನೋಡೋಣ. ಕಾದಂಬರಿಯ ಉದ್ದಕ್ಕೂ ಘಟನೆಗಳನ್ನು ಹಿಂದೆ ಮುಂದಾಗಿ ನಿರೂಪಿಸಿರುವ ಹಲವಾರು ಘಟನೆಗಳಿವೆ. ಆದ್ದರಿಂದ ಈ ತಂತ್ರದ ಔಚಿತ್ಯವನ್ನು ತಿಳಿಯುವುದು ಉಪಯುಕ್ತವಾಗಬಹುದು.

ಈ ಘಟನಾವಳಿ ಗುತ್ತಿ ಬೆಳಗ್ಗೆ ಮೇಗರವಳ್ಳಿಯನ್ನು ಬಿಟ್ಟು ಹುಲಿಕಲ್ಲು ಗುಡ್ಡವನ್ನು ಹತ್ತಿ, ಅಲ್ಲಿ ನಾಗಕ್ಕ ಮತ್ತು ನಾಗತ್ತೆಯರನ್ನು ಸಂಧಿಸಿ ಅವರನ್ನು ಗುಡ್ಡದ ಕೆಳಗೆ ಬೀಳ್ಕೊಟ್ಟು ಹಳೆಮನೆ ಕಡೆಗೆ ಹೋಗುವ ಸುಮಾರಿನಲ್ಲಿ ಪ್ರಾರಂಭವಾಗಿ ನಾಗಕ್ಕ ಮತ್ತು ನಾಗತ್ತೆಯರು ಕೋಣೂರು ರಂಗಪ್ಪಗೌಡರ ಮನೆಯನ್ನು ಪ್ರವೇಶಿಸುವ ಸಮಯದ ಒಳಗೆ ನಡೆಯುತ್ತವೆ. ಈ ಸಮಯದ ಒಳಗೆ ನಡೆಯುವ ಘಟನೆಗಳೇ ಹದಿನೈದು, ಹದಿನಾರು ಮತ್ತು ಹದಿನೇಳನೆ ಅಧ್ಯಾಯಗಳಲ್ಲಿ ಹಿಂದೆ ಮುಂದಾಗಿ ನಿರೂಪಿತವಾಗಿರುವುದು. ಈಗ ಮೊದಲಿಗೆ ಪ್ರತಿಯೊಂದು ಅಧ್ಯಾಯದಲ್ಲಿನ ಮುಖ್ಯವಾದ ಘಟನೆಗಳ ಸಾರಾಂಶವನ್ನು ನೋಡೋಣ.

ಹದಿನೈದನೆಯ ಅಧ್ಯಾಯದ ಘಟನೆಗಳು:

ಕೋಣೂರು ರಂಗಪ್ಪಗೌಡರು ತಮ್ಮ ಮುಕುಂದಯ್ಯ ತಮ್ಮ ತೋಟದಲ್ಲಿ ಇತರ ಗಟ್ಟದಾಳುಗಳೊಡನೆ ಕೆಲಸದಲ್ಲಿ ತೊಡಗಿದ್ದ ಐತನನ್ನು ತನ್ನೊಡನೆ ಹಳ್ಳದಲ್ಲಿ ಏಡಿಗಳನ್ನು ಹಿಡಿಯಲು ಬರಬೇಕೆಂದು ಕೇಳುತ್ತಾನೆ. ಐತನು ತನ್ನೊಡನೆ ತನ್ನ ಹೆಂಡತಿ ಪೀಂಚಲುವನ್ನು ಕರೆದುಕೊಂಡು ಬರುತ್ತೇನೆಂದು ಹೇಳುತ್ತಾನೆ. ತಾನು ಯೋಜಿಸಿದ ಒಂದು ಕಾರ್ಯಕ್ಕಾಗಿ ಪೀಂಚಲುವನ್ನು ಕರೆದುಕೊಂಡು ಹೋಗುವುದಕ್ಕಾಗಿಯೆ ಮುಕುಂದಯ್ಯ ಐತನನ್ನು ಕರೆದಿರುತ್ತಾನಾದ್ದರಿಂದ ಅವನು ಐತನ ಮಾತಿಗೆ ಒಪ್ಪುತ್ತಾನೆ. ಅವರು ಮೂವರು ಹಳ್ಳಕ್ಕೆ ಹೋದ ಸ್ವಲ್ಪ ಹೊತ್ತಿನ ನಂತರ ತೋಟಕ್ಕೆ ರಂಗಪ್ಪಗೌಡರು ಜಗಲಾದ ಅನಂತಯ್ಯನವರೊಡನೆ ಬಂದು ಆಳುಗಳೊಡನೆ ವ್ಯವಹರಿಸುತ್ತಾರೆ. ಹೀಗಿದ್ದಾಗ ತೋಟಕ್ಕೆ ಅವಸರದಲ್ಲಿ ಓಡಿ ಬಂದ ಐತನು ಹಳ್ಳದ ಕಡೆ ಒಂದು ಹಂದಿ ಬಂದಿರುವುದಾಗಿಯೂ ಅದನ್ನು ಬೇಟೆಯಾಡಲು ಬರ ಬೇಕೆಂದು ಮುಕುಂದಯ್ಯ ಜಗಳಿಗೆ ಹೇಳಿಕಳಿಸಿರುವುದಾಗಿ ರಂಗಪ್ಪಗೌಡರಿಗೆ ಹೇಳುತ್ತಾನೆ. ಇದನ್ನು ಕೇಳಿದ ರಂಗಪ್ಪಗೌಡರು ತಮ್ಮ ಮನಸ್ಸಿನಲ್ಲೇ ಇದು ಐತನನ್ನು ದೂರ ಕಳಿಸಿ ಮುಕುಂದಯ್ಯ ಪೀಂಚಲುವಿನೊಡನೆ ಸರಸವಾಡಲು ನಡೆಸಿರುವ ಹೂಟ ಎಂದು ಯೋಚಿಸಿ ಐತನನ್ನು ಬೇಗನೆ ವಾಪಸ್ಸು ಹೋಗಲು ಆಜ್ಞಾಪಿಸುತ್ತಾರೆ. ಅವನು ವಾಪಸ್ಸು ಹೋಗುತ್ತಾನೆ. ಅದೇ ಸಮಯದಲ್ಲಿ ನಾಗಕ್ಕ ಮತ್ತು ನಾಗತ್ತೆಯರು ತಮ್ಮ ಮನೆಯ ಕಡೆ ಹೋಗುತ್ತಿರುವುದನ್ನು ರಂಗಪ್ಪಗೌಡರು ನೋಡುತ್ತಾರೆ.

ಹದಿನಾರನೆಯ ಅಧ್ಯಾಯದಲ್ಲಿ ನಿರೂಪಿಸಿರುವ ಘಟನೆಗಳು!

ಮೇಲಿನ ಘಟನೆಗಳು ನಡೆಯುವ ಮುಂಚೆ ಬೆಳಿಗ್ಗೆ ಮುಕುಂದಯ್ಯ ತಾನು ಹಕ್ಕಿ ಗಳನ್ನು ಹಿಡಿಯಲು ಬೀಸಿದ್ದ ಬಲೆಗೆ ಯಾವುದಾದರು ಹಕ್ಕಿ ಬಿದ್ದಿದೆಯೆ ಎಂದು ನೋಡಲು ಗುಡ್ಡಕ್ಕೆ ಬರುತ್ತಾನೆ. ಅಲ್ಲಿ ಅವನಿಗೆ ಹಳೆ ಮನೆಗೆ ಹೋಗುತಿದ್ದ ಗುತ್ತಿ ಸಿಕ್ಕಿ ಮಾತಿನ ಮಧ್ಯೆ ಹೂವಳ್ಳಿಯ ಚಿನ್ನಮ್ಮನನ್ನು ಮದುವೆಯಾಗಲು ಸಿಂಬಾವಿ ಭರಮೈ ಹೆಗ್ಗಡೆಯವರು ಯೋಚಿಸುತ್ತಿರುವ ವಿಷಯವನ್ನು ತಿಳಿಸುತ್ತಾನೆ. ಈ ವಾರ್ತೆಯನ್ನು ಕೇಳಿ ಮುಕುಂದಯ್ಯನಿಗೆ ಆಘಾತವಾಗುತ್ತದೆ.

ಹದಿನೇಳನೆ ಅಧ್ಯಾಯದಲ್ಲಿ ನಿರೂಪಿಸಿರುವ ಘಟನೆಗಳು:

ಮುಕುಂದಯ್ಯ ತನ್ನ ಮತ್ತು ಚಿನ್ನಮ್ಮನ ಮದುವೆಗೆ ಬಂದಿರುವ ಅಡಚಣೆಯ ಬಗ್ಗೆ ಚಿನ್ನಮ್ಮನಿಗೆ ಎಚ್ಚರಿಸಲು ಪೀಂಚಲುವಿನ ಸಹಾಯ ಪಡೆಯಲು ಅವಳನ್ನು ಏಕಾಂತದಲ್ಲಿ ಸಂಧಿಸುವುದಕ್ಕಾಗಿ ಐತನನ್ನು ಹಳ್ಳದಲ್ಲಿ ಏಡಿಹಿಡಿಯಲು ಕರೆಯುತ್ತಾನೆ.

ಐತನು ತನ್ನೊಡನೆ ಎಂದಿನಂತೆ ಪೀಂಚಲುವನ್ನೂ ಅಲ್ಲಿಗೆ ಕರೆದುಕೊಂಡು ಬರುತ್ತಾನೆ. ಮುಕುಂದಯ್ಯ ಪೀಂಚಲುವನ್ನು ಏಕಾಂತದಲ್ಲಿ ಮಾತನಾಡಿಸುವುದಕ್ಕಾಗಿ ಐತನನ್ನು ಹಂದಿ ಬಂದಿದೆಯೆಂದು ನಂಬಿಸಿ ಅದರ ಬೇಟೆಗೆ ಬೇರೆಯವರನ್ನು ಕರೆದುಕೊಂಡು ಬರಲು ತೋಟಕ್ಕೆ ಕಳಿಸುತ್ತಾನೆ. ಐತ ಹೋದ ಸಮಯ ಸಾಧಿಸಿ ಮುಕುಂದಯ್ಯ ಪೀಂಚಲುವಿಗೆ ಚಿನ್ನಮ್ಮನಿಗೆ ಬಂದಿರುವ ಕಷ್ಟವನ್ನು ವಿವರಿಸಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ತನ್ನನ್ನು ಮತ್ತೆ ಸಾಯಂಕಾಲ ಕಾಣಬೇಕೆಂದು ತಿಳಿಸುತ್ತಾನೆ. ಐತ ವಾಪಸ್ಸು ಬಂದು ಪೀಂಚಲು ಮತ್ತು ಮುಕುಂದಯ್ಯ ಚಿಂತಾಕ್ರಾಂತರಾಗಿರುವುದನ್ನು ಕಾಣುತ್ತಾನೆ. ನಂತರ ಅವರು ಮೂವರು ಮನೆಗೆ ವಾಪಸ್ಸಾಗುತ್ತಾರೆ.

ಕಾದಂಬರಿಕಾರರು ಈ ಘಟನಾವಳಿಯನ್ನು ನೇರ ಕಾಲಾನುಕ್ರಮಣಿಕೆಯಲ್ಲಿ ಅಂದರೆ–ಗುತ್ತಿಯಿಂದ ಮುಕುಂದಯ್ಯನಿಗೆ ಚಿನ್ನಮ್ಮನ ಮದುವೆಯ ಬಗ್ಗೆ ತಿಳಿಯುವ ವಾರ್ತೆ; ಈ ವಾರ್ತೆಯನ್ನು ತಿಳಿದ ಮುಕುಂದಯ್ಯ ಚಿನ್ನಮ್ಮನಿಗೆ ಅದರ ಬಗ್ಗೆ ಎಚ್ಚರಿಸಲು ಪೀಂಚಲುವಿನ ಸಹಾಯ ಪಡೆಯಲು ಅವಳನ್ನು ಏಕಾಂತದಲ್ಲಿ ಸಂಧಿಸಲು ನಡೆಸುವ ಹುನ್ನಾರಗಳು ಮತ್ತು ಮುಕುಂದಯ್ಯನ ನಡೆವಳಿಕೆ ಆತನ ಅಣ್ಣ ರಂಗಪ್ಪ ಗೌಡರು, ಚೀಂಕ್ರ ಮತ್ತು ಪೀಂಚಲು ಇವರಲ್ಲಿ ತಕ್ಷಣಕ್ಕೆ ಹುಟ್ಟಿಸುವ ಭಾವನೆಗಳು ಹೀಗೆ ನಿರೂಪಿಸಬಹುದಿತ್ತು.

ಆದರೆ ಕಾದಂಬರಿಕಾರರು ಅನುಸರಿಸಿರುವ 'ಹಿಂದೆ ಮುಂದಾದ' ಈಗಿನ ನಿರೂಪಣೆಯಿಂದಾಗಿ ನಮಗೆ ಹದಿನೈದನೆ ಅಧ್ಯಾಯದಲ್ಲಿ ನಡೆಯುವ ಘಟನೆಗಳಿಂದ ಮುಕುಂದಯ್ಯ ಪೀಂಚಲುವನ್ನು ಏಕಾಂತದಲ್ಲಿ ಇಟ್ಟುಕೊಳ್ಳಲು ಹವಣಿಸಿರುವುದು ರಂಗಪ್ಪಗೌಡರು ಯೋಚಿಸುವಂತೆ ಅನೈತಿಕ ಉದ್ದೇಶಗಳಿಗಾಗಿಯೇ ಎಂದು ಅನುಮಾನಿಸುವಂತಾಗುತ್ತದೆ. ಆದರೆ ಹದಿನಾರನೆ ಅಧ್ಯಾಯದಲ್ಲಿ ಈ ತೋಟದ ಘಟನೆ ನಡೆಯುವ ಮುಂಚೆ ಬೆಳಗ್ಗೆ ಗುತ್ತಿಯನ್ನು ಆಕಸ್ಮಿಕವಾಗಿ ಸಂಧಿಸಿದ ಮುಕುಂದಯ್ಯ ಚಿನ್ನಮ್ಮನೊಡನೆ ತನ್ನ ಮದುವೆಗೆ ಅಡ್ಡಿ ಬಂದಿರುವ ವಾರ್ತೆಯನ್ನು ತಿಳಿದ ಪ್ರಸಂಗ ಬರುತ್ತದೆ. ಈಗ ಓದುಗರಾದ ನಮಗೆ ಮುಕುಂದಯ್ಯ ಪೀಂಚಲುವನ್ನು ಏಕಾಂತದಲ್ಲಿ ಕಾಣಲು ಮಾಡಿರುವ ಪ್ರಯತ್ನಕ್ಕೆ ಬೇರೆ ಕಾರಣ ಇರಬಹುದು ಎನಿಸುತ್ತದೆ. ಹಾಗೆಯೆ ಹದಿನೇಳನೆ ಅಧ್ಯಾಯದಲ್ಲಿ ನಾವು ಈ ಮೊದಲೆ ಹದಿನೈದನೆ ಅಧ್ಯಾಯದಲ್ಲಿ ತೋಟದಿಂದ ಹಳ್ಳದ ಕಡೆಗೆ ಹೋದ ಮುಕುಂದಯ್ಯ, ಐತ ಮತ್ತು ಪೀಂಚಲು ಅವರು ಅಲ್ಲಿ ಮೂವರೇ ಇದ್ದಾಗ ಮತ್ತು ಐತ ತೋಟದ ಕಡೆಗೆ ಒಬ್ಬನೆ ಹೋದಾಗ ನಡೆದ ವ್ಯವಹಾರಗಳು ತಿಳಿಯುತ್ತವೆ. ಈ ಘಟನೆಗಳಿಂದ ಮುಕುಂದಯ್ಯ ತಾನು ಪ್ರೀತಿಸಿದ ಚಿನ್ನಮ್ಮನಲ್ಲೇ ನಿಷ್ಠೆ ಇಟ್ಟಿರುವುದು ಸಾಧಿತವಾಗುತ್ತದೆ. ಹಾಗೆಯೆ ಐತ ಮತ್ತು ಪೀಂಚಲು ಅವರಿಗೆ ಮುಕುಂದಯ್ಯನ ಬಗ್ಗೆ ಇರುವ ಸ್ನೇಹ ಹಾಗೂ ಪೂಜ್ಯ ಭಾವನೆ

ಶೂದ್ರ

ಗಳು ಓದುಗನ ಮನಸ್ಸಿಗೆ ನಾಟುತ್ತವೆ. ಅಷ್ಟೇ ಅಲ್ಲದೆ ಮುಕುಂದಯ್ಯನಿಗೆ ಕೂಡ ಈ ಇಬ್ಬರು ಕೆಳ ಜಾತಿಯ ದಂಪತಿಗಳ ಬಗ್ಗೆ ಬಾಲ್ಯ ಕಾಲದಿಂದ ಬೆಳೆದಿದ್ದ ಸ್ನೇಹದ ಜೊತೆಗೆ ಈಗ ಅವರ ಅನ್ಯೋನ್ಯ ದಾಂಪತ್ಯವನ್ನು ನೋಡಿ ಒಂದು ರೀತಿಯ ಪೂಜ್ಯ ಭಾವನೆಯೂ ಬೆಳೆಯುವುದು ಓದುಗನ ಅನುಭವಕ್ಕೆ ಪರಿಣಾಮಕಾರಿಯಾಗಿ ತರಲಾಗಿದೆ.

ಈ ಘಟನಾವಳಿಗಳನ್ನು ಈಗಿನ ರೀತಿಯಲ್ಲಿ ಜೋಡಿಸಿರುವುದರಿಂದ ರಂಗಪ್ಪ ಗೌಡರು ಮತ್ತು ಅವರ ತಮ್ಮ ಮುಕುಂದಯ್ಯ ಇವರಿಬ್ಬರ ವ್ಯಕ್ತಿತ್ವದಲ್ಲಿನ ವೈದೃಶ್ಯವೂ ನಮಗೆ ಮನದಟ್ಟಾಗುತ್ತದೆ. ಅದು ಹೀಗೆ:

ರಂಗಪ್ಪಗೌಡರು ತೋಟದಲ್ಲಿ ಆಳುಗಳೊಡನೆ ಮಾತನಾಡುತ್ತಾ, ಕುಳಿತಿರುವ ಜಾಗದಿಂದಲೇ ನಾಗಕ್ಕ ಮತ್ತು ನಾಗತ್ತೆಯರು ಕೋಣೂರಿನ ಮನೆಗೆ ಹೋಗುತ್ತಿರುವುದನ್ನು ನೋಡುತ್ತಾರೆ (ಹದಿನೈದನೆ ಅಧ್ಯಾಯ). ಆಗ ಅವರಿಗೆ ನಾಗಕ್ಕನನ್ನು ತಾವು ಕೂಡಿಕೆ ಮಾಡಿಕೊಳ್ಳಬಹುದೆ ಎಂಬ ಲಹರಿ ಬಂದು ಹೋಗುತ್ತದೆ. ಆದರೆ ತಮ್ಮಂತಹ ಮನೆತನಸ್ತರು ಹಾಗೆ ಮಾಡುವುದು ಸರಿಯಾಗದು ಎಂದೂ ಅಂದುಕೊಳ್ಳುತ್ತಾರೆ. ನಾಗಕ್ಕನ ಬಗ್ಗೆ ಈ ರೀತಿಯ ಕಾಮನೆಗಳು ಅವರ ಮನಸ್ಸಿನಲ್ಲಿ ಹಿಂದೆಯೂ ಬಂದು ಹೋಗಿವೆ. ಆದರೆ ಐಗಳೊಡನೆ ಧಾರ್ಮಿಕ ವಿಚಾರಗಳ ಬಗ್ಗೆ ಚರ್ಚಿಸಿದಾಗ ತಮ್ಮ ಈ ಕಾಮನೆಗಳ ಬಗ್ಗೆ ಬೇಸರಿಸಿದ್ದಾರೆ.

ಇದೇ ರೀತಿ (ಹದಿನೇಳನೆಯ ಅಧ್ಯಾಯದಲ್ಲಿ) ಮುಕುಂದಯ್ಯ ಹಳ್ಳದ ಕಡೆ ನಡೆದು ಬರುತ್ತಿದ್ದ ಐತ ಮತ್ತು ಪೀಂಚಲು ಅವರನ್ನು ಒಂದು ಮಟ್ಟಿನ ಹಿಂದೆ ಅವಿತು ನೋಡುವ ಸನ್ನಿವೇಶವನ್ನು ಗಮನಿಸಬಹುದು. ಈ ಸನ್ನಿವೇಶದಲ್ಲಿ ಲೇಖಕರು ಮುಕುಂದಯ್ಯನು ಅವನಿಗೆ ಐಗಳ ಶಿಕ್ಷಣದಿಂದ ದೊರೆತಿದ್ದ ಪೌರಾಣಿಕ ಕಲ್ಪನೆಯಿಂದ ಈ ದಂಪತಿಗಳನ್ನು ಬಿಲ್ಲವ ಶಿವ ಶಿವಾಣಿಯರಂತೆ ಕಂಡು ತನ್ಮಯನಾಗುವುದನ್ನು ತೋರಿಸುತ್ತಾರೆ. ಹಾಗೆಯೆ ಮುಕುಂದಯ್ಯನು ಪೀಂಚಲುವಿನ ಸೌಂದರ್ಯವನ್ನು ತನ್ನ ಪ್ರೀತಿಯ ಚಿನ್ನಮ್ಮನ ಸೌಂದರ್ಯಕ್ಕೆ ಸಮನಾದದ್ದೆಂದು ಕಂಡು ಮೆಚ್ಚುವುದನ್ನು ಕಾಣಿಸಲಾಗಿದೆ. ಹೀಗೆ ಪೀಂಚಲುವಿನ ಸೌಂದರ್ಯವನ್ನು ಮೆಚ್ಚಿಕೊಂಡವನಾದರೂ ಅವನು ಅವಳೊಡನೆ ಸ್ನೇಹ ಗೌರವದಿಂದಲೇ ವರ್ತಿಸುವುದನ್ನು ಕಾದಂಬರಿಯುದ್ದಕ್ಕೂ ಕಾಣುತ್ತೇವೆ. ಆದರೆ ರಂಗಪ್ಪಗೌಡರು ಕಾದಂಬರಿಯ ಕಡೆಗೆ ಅಸಹಾಯಕಳಾಗಿ ತಮ್ಮ ಆಶ್ರಯಕ್ಕೆ ಬಂದ ಅಕ್ಕಣಿಯೊಡನೆ ಸಂಬಂಧ ಬೆಳೆಸುತ್ತಾರೆ.

ಹೀಗೆ ಕಾದಂಬರಿಕಾರರು ಅನುಸರಿಸಿರುವ ವಿಶಿಷ್ಟ ರೀತಿಯ ಕಥಾನಿರೂಪಣೆಯಿಂದ ಇಷ್ಟೆಲ್ಲಾ "ಪ್ರಯೋಜನ ಅಥವಾ ಔಚಿತ್ಯ"ವನ್ನು ಕಾಣಬಹುದಾಗಿದೆ.

ಟಿಪ್ಪಣಿಗಳು

1. 'ಮಲೆಗಳಲ್ಲಿ ಮದುಮಗಳು' ಕಾದಂಬರಿ "ವಿವರಗಳಿಂದ ಸೊಕ್ಕಿದೆ" ಎಂಬ ಪ್ರೊ॥ ಯು. ಆರ್. ಅನಂತಮೂರ್ತಿಯವರ ಹೇಳಿಕೆಗೆ ಇನಾಂದಾರರ ಲೇಖನ "ಪ್ರಾಯೋಗಿಕ ಸಾಕ್ಷ"ವನ್ನು ಒದಗಿಸುತ್ತದೆ. ಮಾನವ ಜೀವನವು ರಾಗದ್ವೇಷಮಯ ಜಟಿಲ ಜೀವಜಾಲ ಎಂಬುದನ್ನು ತೋರಿಸಿ ಕೊಡಲು ಕಾದಂಬರಿಕಾರರು ಉಪಯೋಗಿಸಿರುವ ಒಂದು ಮುಖ್ಯ ತಂತ್ರವನ್ನು, ಈ ಕಾದಂಬರಿ ಪ್ರಕಟವಾದ ನಂತರದ ಎರಡು ದಶಕಗಳಲ್ಲಿ ಬಂದ ಯಾವ ವ್ಯಾಖ್ಯಾನವೂ ವಿವರವಾಗಿ ಗುರುತಿಸದೆ ಇರುವುದು ಆಶ್ಚರ್ಯಕರವಾಗಿದೆ.

2. ಇನಾಂದಾರರು ತಮ್ಮ ಗ್ರಂಥದಲ್ಲಿ ಕಾದಂಬರಿಯ ಮುಖ್ಯ ಘಟನೆಗಳು ನಡೆದ ಕಾಲ ಕಳೆದ ಶತಮಾನದ ತೊಂಬತ್ತಮೂರನೆ ಇಸವಿಯ ಮಳೆಗಾಲದಲ್ಲಿ ಎಂದು ತಪ್ಪಾಗಿ ನಿರ್ಣಯಿಸಿದ್ದಾರೆ (ಕು. ಕಾ. ಪುಟ 110). ಕಾದಂಬರಿಯ ನಲ್ವತ್ತೊಂದನೆಯ ಅಧ್ಯಾಯದಲ್ಲಿ ಮುಕುಂದಯ್ಯ ಮತ್ತು ದೇವಯ್ಯ ಗಡ್ಡದಯ್ಯನನ್ನು ಮೊದಲನೆ ಸಾರಿ ಸಂಧಿಸಿದಾಗ ಅವನು ಅವರಿಗೆ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ "ಅಂದಿಗೆ ಮೂರೇ ವರ್ಷಗಳ ಹಿಂದೆ" ಸ್ವಾಮಿ ವಿವೇಕಾನಂದ ಎಂಬ ಸನ್ಯಾಸಿ ಮಾಡಿದ ಭಾಷಣದ ಬಗ್ಗೆ ತಿಳಿಸುತ್ತಾನೆ. ಇದರಿಂದ ಕಾದಂಬರಿಯ ಘಟನೆಗಳು ತೊಂಬತ್ತಾರನೆ ಇಸವಿಯಲ್ಲೇ ನಡೆದದ್ದು ಎಂಬುದು ಖಚಿತವಾಗುತ್ತದೆ. ಆದ್ದರಿಂದ ಇನಾಂದಾರರು ತಮ್ಮ ಗ್ರಂಥದ ಪುಟ 110ರ ಅಡಿಟಿಪ್ಪಣಿಯಲ್ಲಿ ಕಾದಂಬರಿಯ ಒಂದು ಘಟನಾವಳಿಯ ಕಾಲಾವಧಿಯ ಬಗ್ಗೆ ಎತ್ತಿರುವ ಸಂದೇಹ ಅಪ್ರಸ್ತುತವಾಗುತ್ತದೆ. ಆದರೆ ಇನಾಂದಾರರ ಗೊಂದಲಕ್ಕೆ ಕಾದಂಬರಿಯ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಕಾದಂಬರಿಕಾರರು ಕತೆಯ ಮುಖ್ಯ ಘಟನೆಗಳಿಂದ ದೂರ ಹೋಗಿ ಮೂರು ವರ್ಷಗಳ ಹಿಂದೆ ನಡೆದ ಎರಡು ಘಟನೆಗಳನ್ನು ಕಾದಂಬರಿಯ ವರ್ತಮಾನ ಕಾಲದ ಘಟನೆಗಳನ್ನು ವಿವರಿಸಿದ ರೀತಿಯಲ್ಲೇ ವಿವರಿಸಿರುವುದು ಕಾರಣವಾಗಿರಬಹುದು.

3. ಎಚ್. ಎಂ. ಚೆನ್ನಯ್ಯನವರು 'ಜಿಜ್ಞಾಸೆ' ಎಂಬ ತಮ್ಮ ವಿಮರ್ಶಾ ಲೇಖನಗಳ ಸಂಗ್ರಹದಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬಗ್ಗೆ ಬರೆದಿರುವ ಲೇಖನದಲ್ಲಿ "ಬ್ರಾಹ್ಮಣ ವರ್ಗದ ಉತ್ತಮಾಂಶಗಳಿಗೆ ಅನಂತಯ್ಯನವರು ಉದಾಹರಣೆಯಂತಿದ್ದರೆ...." ಎಂದು ಬರೆದಿದ್ದಾರೆ. ('ಜಿಜ್ಞಾಸೆ'-ಮೈಸೂರು (1974) ಪುಟ 131 ಇದೇ ಲೇಖನವನ್ನು ಕೆಲವು ಬದಲಾವಣೆಗಳೊಂದಿಗೆ 'ಸ್ವಸ್ತಿ' (ತ. ಸು. ಶಾಮರಾಯರ ಅಭಿನಂದನಾ ಗ್ರಂಥ ಮೈಸೂರು. 1983) ಗ್ರಂಥದಲ್ಲೂ ಪ್ರಕಟಿಸಲಾಗಿದೆ. ಅಲ್ಲಿಯೂ ಇದೇ ಉಲ್ಲೇಖವಿದೆ). ಕಾದಂಬರಿಕಾರರು ಅನಂತಯ್ಯನವರ ಜಾತಿಯ ಬಗ್ಗೆ

ಶೂದ್ರ

ಹೇಳಿಲ್ಲವಾದರೂ ಅವರು ಬ್ರಾಹ್ಮಣರಲ್ಲ ಎಂಬುದನ್ನು ಕಾದಂಬರಿಯ ಹಲವು ಘಟನೆಗಳಿಂದ ತಿಳಿಯಬಹುದಾಗಿದೆ. ಐಗಳು ಸುಬ್ಬಣ್ಣ ಹೆಗಡೆಯವರೊಂದಿಗೆ ಹುಲಿಕಲ್ಲು ಗುಡ್ಡವನ್ನು ಹತ್ತುತ್ತಿರುವಾಗ ಎದುರಾಗುವ ಹಳೆಪೈಕದವರು ಕೊಡುವ ಕಳ್ಳನ್ನು ಇಬ್ಬರೂ ಸೇವಿಸುವುದು (ಇಪ್ಪತೊಂಬತ್ತನೆಯ ಅಧ್ಯಾಯ). ಐಗಳು ತಾವು ದೊಡ್ಡಣ್ಣನೊಡನೆ ಬೇಟೆಗೆ ಹೋಗುತ್ತಿದ್ದುದನ್ನು ಮುಕುಂದಯ್ಯನಿಗೆ ನೆನಪಿಸುವುದು (ಅಧ್ಯಾಯ ಇಪ್ಪತ್ತಾರು) ಇತ್ಯಾದಿ. ಡಾ॥ ಗುರುಪಾದ ಮರಿಗುದ್ದಿ ಅವರು ತಮ್ಮ "ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ" (ಮೈಸೂರು: 1989) ಎಂಬ ಗ್ರಂಥದಲ್ಲಿ "ಅನಂತ ಐಗಳು ದ.ಕ. ಜಿಲ್ಲೆಗೆ ಸೇರಿದ ಸೆಟ್ಟರ ಜಾತಿಯವರಾಗಿದ್ದರು" ಎಂದು ಸರಿಯಾಗಿ ಗುರುತಿಸಿದ್ದಾರೆ.

4. 'ಮ.ಮ' ಕಾದಂಬರಿಯಲ್ಲಿ ಲೇಖಕರ ಒಂದು ತಪ್ಪು ಉಲ್ಲೇಖದಿಂದಾಗಿ ಓದುಗನಿಗೆ ಗೊಂದಲವುಂಟಾಗುತ್ತದೆ. ಇದು ಕಾವೇರಿ ಕಳೆದುಕೊಳ್ಳುವ ದೇವಯ್ಯನ ಉಂಗುರದ ಪ್ರಕರಣಕ್ಕೆ ಸಂಬಂಧಿಸಿದೆ. ಕಾವೇರಿ ಕಳೆದುಕೊಂಡ ಉಂಗುರ ಚೀಂಕ್ರನಿಗೆ ಸಿಕ್ಕಿ ಅವನು ಅದನ್ನು ಕರ್ಮೀನು ಸಾಬಿಯ ಹತ್ತಿರ ತೆಗೆದುಕೊಂಡು ಹೋದಾಗ ಅವರಿಗೆ ಅದನ್ನು ತಾವು ದರೋಡೆ ಮಾಡಿ ಪಡೆದ ಪ್ರಸಂಗ ಜ್ಞಾಪಕಕ್ಕೆ ಬರುತ್ತದೆ. ಅದನ್ನು ತಾವು ಕಲ್ಲೂರ ಸಾಹುಕಾರರಾದ ಮಂಜ ಭಟ್ಟರಿಗೆ ದಾಟಿಸಿದ್ದಾಗಿ ನೆನಪಿಸಿಕೊಳ್ಳುತ್ತಾರೆ (ಅಧ್ಯಾಯ ನಲವತ್ತೊಂಬತ್ತು, ಎರಡನೇ ಮುದ್ರಣದಲ್ಲಿ ಈ ಉಲ್ಲೇಖ 506ನೆ ಪುಟದಲ್ಲಿದೆ). ಮುಂದೆ ಕಾದಂಬರಿಯ ಅರವತ್ತೊಂದನೆ ಅಧ್ಯಾಯದ ಪ್ರಾರಂಭದಲ್ಲಿ ಮತ್ತೆ ಕರ್ಮೀನ್ ಸಾಬಿಯ ಸ್ವಗತದಲ್ಲಿ "ಆ ಉಂಗುರ ತಾನ ಬೆಟ್ಟಳ್ಳಿಯ ಕಲ್ಲಯ್ಯಗೌಡರಿಗೆ ಮಾರಿದ್ದು...." ಎಂದು ಉಲ್ಲೇಖಿಸಲಾಗಿದೆ (ಎರಡನೆ ಮುದ್ರಣದಲ್ಲಿ ಪುಟ 641).

ಹೇ ಸುಳ್ಳೇ ನಮ್ಮನ್ನು ಸುಳ್ಳರನ್ನಾಗಿಸಬೇಡ

–1–

ಕೆಲ ಮಾತುಗಳನ್ನು
ಹಿಂದೆಯೋ ಹೇಳಬೇಕೆಂದಿದ್ದೆವು
ಹೃದಯದ ಸಂಕೋಚ ಹೊರಬಿಡಲಿಲ್ಲ
ಮಾತುಗಳ ಕೇಳಿ
ನಿಮ್ಮೆದೆಗೆ ನಿಷ್ಠುರದ ಬಾಣ ಬಡಿಯಬೇಕಿತ್ತು
ನಮ್ಮೆದೆಯ ಅಳುಕು ಕೈಬಿಡಲಿಲ್ಲ

ಜಿ. ಕೆ. ರವೀಂದ್ರಕುಮಾರ್, ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಧಾರವಾಡ-580 008

ನಮ್ಮ ಮಾತಿನ ಸತ್ಯ
ನಿಮ್ಮಲ್ಲಿ ಕರುಣೆಯ ಬೀಜ ಬಿತ್ತಬೇಕಿತ್ತು
ನಿಮ್ಮ ಕರುಣೆ ನಮಗಿಷ್ಟವಿರಲಿಲ್ಲ

ನಮ್ಮ ಅದುಮಿದ್ದ ಭಾವಗಳು
ನಿಮ್ಮ ಹೆದರಿಸಬೇಕಿದ್ದವು
ನಿಮ್ಮನೆದುರಿಸುವ ತಾಕತ್ತು ನಮಗಿರಲಿಲ್ಲ

ನಮ್ಮೊಡನಿದ್ದ ಗುಟ್ಟುಗಳು
ನಿಮ್ಮ ಬಯಲು ಮಾಡಬೇಕಿದ್ದವು
ಬರುವ ಕಾಲವ ಕಾಯದೇ ವಿಧಿಯಿರಲಿಲ್ಲ

ನಿಮ್ಮೊಳಗಿದ್ದ ರಾಕ್ಷಸರ
ಎಳೆದು ತರಬೇಕಿತ್ತು
ಆಹುತಿಯಾಗಲು ಮನಸಿರಲಿಲ್ಲ

ಕೊನೆಗೊಮ್ಮೆ
ಎಲ್ಲ ಹೊರಕಕ್ಕಬೇಕೆಂದಿದ್ದೆವು
ಕೆಟ್ಟವರಾಗಲೂ ಬಯಸಲಿಲ್ಲ

–2–

ಉಳಿದೇ ಹೋದವು ಹೀಗೆ
ಅಳಿದೇ ಬಿಟ್ಟವು ಕೊನೆಗೆ
ಕಾಲ ಉರುಳಿದ ಹಾಗೆ
ಸತ್ಯದ ಅಸ್ಥಿಪಂಜರದ ಮೇಲೆ
ನಮ್ಮ ಇಂದಿನ ಹೊದಿಗೆ

ಸತ್ಯವನು ಮೆಲುದನಿಯಲಿ ಉಲಿದ
ಧರ್ಮರಾಯನ ಧರ್ಮದ ನಾಡಲಿ
ಅಧರ್ಮದ ಮಾತೆಲ್ಲಿ ?

ತುಟಿಯಾಚೆಗಿನ ಸುಳ್ಳು
ಹಲ್ಲೊಳಗಿನ ನಿಜವು
ನಮ್ಮನಾಳುವುದಿಲ್ಲ

ಸುಳ್ಳು ಕಟ್ಟಿದ ಬೇಲಿಯಲ್ಲಿ
ಶತಮಾನದ ಸತ್ಯಗಳು
ಮಗ್ಗುಲು ಮುರಿಸಿಕೊಳ್ಳುವಾಗ
ಸತ್ಯವೇ
ನೀ ಗೆಲ್ಲುವುದು ಎಲ್ಲಿ ?

— ಜಿ. ಕೆ. ರವೀಂದ್ರಕುಮಾರ್

ಶಿಕ್ಷಕನಾಗಿ ಕಾದಂಬರಿಕಾರ

— ಚಿನುವ ಅಛೀಬೆ

ನನ್ನ ಭಾಗದ ಪ್ರಪಂಚದಲ್ಲಿ ನನ್ನ ರೀತಿಯ ಬರವಣಿಗೆ ಸುಮಾರಾಗಿ ಹೊಸ ಬಗೆಯದಾದ್ದರಿಂದ ನಮ್ಮ ಓದುಗರಿಗೂ ನಮಗೂ ಇರುವ ಸಂಕೀರ್ಣ ಸಂಬಂಧಗಳನ್ನು ವಿಶದವಾಗಿ ವಿವರಿಸಲು ಕಾಲ ಪಕ್ವವಾಗಿಲ್ಲ. ಈ ಸಂಕಿರಣ ಸಂಬಂಧಗಳಲ್ಲಿ ಬಹಳ ಅಪರೂಪವಾಗಿ ಸಂಭೋಧಿಸಲ್ಪಡುವ ಒಂದು ಅಂಶದ ಬಗ್ಗೆ ನಾನು ಸ್ಥಿರವಾಗಿ ಮಾತನಾಡಬಹುದು ಎಂದು ಅನಿಸುತ್ತದೆ. ನಮ್ಮ ಬಹುತೇಕ ಐರೋಪ್ಯ ರೀತೀ ವಿದ್ಯಾಭ್ಯಾಸದಿಂದ ಐರೋಪ್ಯ ಲೇಖಕರಿಗೂ ಅವರ ಓದುಗರಿಗೂ ಇರುವ ಸಂಬಂಧ ಆಫ್ರಿಕಾದಲ್ಲೂ ತುಕಾನೇ ಪುನರಾವರ್ತನೆ ಆಗಿಬಿಡುತ್ತದೆಂದು ನಮ್ಮ ಲೇಖಕರು ಅಂದುಕೊಂಡರೆ ಅವರಿಗೆ ಕ್ಷಮೆ ಇರಲಿ. ನಾವು ಯುರೋಪಿನಿಂದ ಕಲಿತಿರುವುದು ಇಷ್ಟು: ಲೇಖಕನಾಗಲೀ, ಕಲಾವಿದನಾಗಲೀ, ಸಮಾಜದ ಹೊರ ಅಂಚಿನಲ್ಲಿರುವ ವ್ಯಕ್ತಿ-ಗಡ್ಡ ಬೆಳೆಸಿಕೊಂಡು, ವಿಚಿತ್ರವಾದ ಉಡುಪು ಧರಿಸಿ, ಸಾಮಾನ್ಯವಾಗಿ ವಿಚಿತ್ರವಾದ, ಹೇಳಲಾಗದಂತಹ ರೀತಿಯಲ್ಲಿ ಇರುವವ ಎಂದು; ಸಮಾಜದ ವಿರುದ್ಧ ಸಿಡಿದೆದ್ದಿರುವ ಆತನನ್ನು ಸಮಾಜ ಸಂಶಯಾತ್ಮಕ ದೃಷ್ಟಿಯಿಂದ ಅಥವಾ ಕೋಪಗ್ರಸ್ತವಾಗಿ ನೋಡುತ್ತಿರುತ್ತದೆ ಎಂದು. ಆತನಿಗೆ ಯಾವುದೇ ರೀತಿಯ ಜವಾಬ್ದಾರಿಯನ್ನು ಕೊಡಲು ಸಮಾಜ ಇಚ್ಛಿಸದೇ ಇರುವುದು-ಇತ್ಯಾದಿ!

ಇದು ಎಲ್ಲರಿಗೂ ಚಿರಪರಿಚಿತ ಆದ್ದರಿಂದಲೇ ನಮ್ಮ ಸಮಾಜವೂ ನಮ್ಮನ್ನು ಅದೇ ರೀತಿಯ ವ್ಯಗ್ರ ದೃಷ್ಟಿಯಿಂದ ಕಾಣಲಿ ಅಥವಾ ಕಾಣುತ್ತಿರುತ್ತದೆ ಎನ್ನುವಂತೆ ನಡೆದುಕೊಳ್ಳುತ್ತಿರುವುದಕ್ಕೆ ನಮ್ಮಲ್ಲಿ ಕೆಲವರು ಕಾತುರರಾಗಿರುವುದು. ಆದರೆ ಲೇಖಕರು ಸಮಾಜದಿಂದ ಏನನ್ನು ನಿರೀಕ್ಷಿಸುತ್ತಾರೆ ಎಂಬುದರಲ್ಲಿ ನನಗೆ ಆಸಕ್ತಿಯಿಲ್ಲ— ಅದು ಸಾಮಾನ್ಯವಾಗಿ ಅವರು ಬರೆದ ಪುಸ್ತಕಗಳಲ್ಲಿ ಇರುತ್ತದೆ ಅಥವಾ ಇರಬೇಕು,

ಇಂಗ್ಲೀಷ್ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-570 006

ಸಮಾಜ ತನ್ನ ಲೇಖಕರಿಂದ ಏನನ್ನು ಅಪೇಕ್ಷಿಸುತ್ತದೆ ಎಂಬುದರ ಬಗ್ಗೆ ಹೆಚ್ಚು ಅವಲೋಕನೆ ನಡೆದಿಲ್ಲ.

ನಾನು ನಮ್ಮ ಲೇಖಕನದ್ದೂ, ಆತನ ಸಮಾಜದ್ದೂ ಒಂದೇ ತಾಣ ಎಂದು ತಿಳಿದಿದ್ದೇನೆ. ಅಂದರೆ ನಮ್ಮ ಲೇಖಕ ಆತನ ಸಮಾಜದ ಅವಿಭಾಜ್ಯ ಅಂಗ. ಆಫ್ರಿಕಾದಲ್ಲಿ ಓದುಗರು ಬರೀ ಪತ್ರಪುಸ್ತಕಗಳನ್ನು ಓದುತ್ತಾರೆಂದೂ, ಆಫ್ರಿಕಾದ ಲೇಖಕರು ಯುರೋಪ್ಯ ಹಾಗೂ ಅಮೇರಿಕಾದ ಓದುಗರಿಗೋಸ್ಕರವೇ ಬರೆಯುತ್ತಾರೆಂಬ ಅಪವಾದ ನನಗೆ ತಿಳಿದಿದೆ. ಆಫ್ರಿಕಾದ ಲೇಖಕರು ವಿದೇಶಿ ಓದುಗರನ್ನೇ ಮನಸ್ಸಿನಲ್ಲಿರು ಬಗ್ಗೆ ನನಗೆ ತಿಳಿಯದು; ಅವರು ಆ ರೀತಿ ತಿಳಿಯಬೇಕಾಗಿಲ್ಲ ಎಂಬುದರ ಅರಿವಿದೆ ಕಡೆಯ ಪಕ್ಷ ನಾನಂತೂ ಆ ರೀತಿ ತಿಳಿಯಬೇಕಾಗಿಲ್ಲ. ಹೋದ ವರ್ಷ ಥಿಂಗ್ಸ್ ಫಾಲ್ ಅಪಾರ್ಟ್‌ನ ಕಡಿಮೆ ಬೆಲೆಯ ಪ್ರತಿಗಳ ಮಾರಾಟ ಈ ರೀತಿ ಇತ್ತು :

ಬ್ರಿಟಿಷ್‌ನಲ್ಲಿ	800	ಪ್ರತಿಗಳು
ನೈಜೀರಿಯಾದಲ್ಲಿ	20,000	ಪ್ರತಿಗಳು
ಇತರೆಡೆ	2,500	ಪ್ರತಿಗಳು

ಇದೇ ರೀತಿಯಲ್ಲೇ ನೋ ಲಾಂಗರ್ ಅಟ್ ಈಸ್ ಮಾರಾಟವಾಗಿತ್ತು.

ನನ್ನ ಮುಕ್ಕಾಲು ಪಾಲು ಓದುಗರೆಲ್ಲ ಚಿಕ್ಕವರು. ಶಾಲೆಯಲ್ಲೋ, ಕಾಲೇಜಿನಲ್ಲೋ ಇರುವರು ಅಥವಾ ಇತ್ತೀಚೆಗೆ ತಾನೇ ಕಾಲೇಜು ಬಿಟ್ಟವರು, ಇವರಲ್ಲಿ ಬಹಳಷ್ಟು ಜನ ನನ್ನನ್ನು ಒಂದು ರೀತಿಯಲ್ಲಿ ಗುರುವಿನ ಸ್ಥಾನದಲ್ಲಿಟ್ಟು ನೋಡುತ್ತಾರೆ. ಉತ್ತರ ನೈಜೀರಿಯಾದಿಂದ ಇತ್ತೀಚೆಗೆ ನನಗೊಂದು ಪತ್ರ ಬಂತು :

ಪ್ರಿಯ ಅಚೀಬೆಯವರೇ,

ಬರವಣಿಗೆ ಎಷ್ಟೇ ಆಸಕ್ತಿಕರವಾಗಿದ್ದರೂ ನಾನು ಲೇಖಕರಿಗೆ ಪತ್ರ ಸಾಮಾನ್ಯವಾಗಿ ಬರೆಯುವುದಿಲ್ಲ; ಆದರೂ ನಿಮ್ಮ ಥಿಂಗ್ಸ್ ಫಾಲ್ ಅಪಾರ್ಟ್ ಹಾಗೂ ನೋ ಲಾಂಗರ್ ಅಟ್ ಈಸ್ ಓದಿ ಸಂತೋಷಪಟ್ಟೆ ಎಂಬುದನ್ನು ನಿಮಗೆ ತಿಳಿಸಲು ಇಚ್ಛಿಸುತ್ತೇನೆ. ನಿಮ್ಮ ಆರ್ರೋ ಆಫ್ ಗಾಡ್ ಓದಲು ಎದುರು ನೋಡುತ್ತೇನೆ. ನಿಮ್ಮ ಕಾದಂಬರಿಗಳು ನಮ್ಮಂಥ ಯುವಕರಿಗೆ ಬುದ್ಧಿವಾದ ಹೇಳುತ್ತವೆ. ನೀವು ಇದೇ ರೀತಿಯ ಪುಸ್ತಕಗಳನ್ನು ಬರೆಯಲಿ ಎಂದು ಆಶಿಸುತ್ತೇನೆ. ಸ್ನೇಹಪೂರ್ವಕ ಶುಭಾಶಯಗಳೊಂದಿಗೆ,

ನಿಮ್ಮವ

— ಐ. ಬೂಬ ಏರೇ ಮಾಫಿಯಾಡಿ

ಈ ಓದುಗ ನನ್ನಿಂದ ಏನನ್ನು ಅಪೇಕ್ಷಿಸುತ್ತಾನೆ ಎಂಬುದು ಸ್ಪಷ್ಟ. ಘಾನಾಯಿಂದ ಮತ್ತೊಬ್ಬ ಓದುಗ ನನಗೆ ಬರೆದ ಹೃದಯ ಕಲುಕುವ ಪತ್ರದಲ್ಲಂತೂ ಸಂದೇಹಕ್ಕೆ

ಕೂದ್ರ

ಎಡೆಯೋ ಇರಲಿಲ್ಲ. ನಾನು ಥಿಂಗ್ಸ್ ಫಾಲ್ ಅಪಾರ್ಟ್‌ನ ಕಡೆಯಲ್ಲಿ ಪ್ರಶ್ನೆಗಳನ್ನೂ, ಅವುಗಳಿಗೆ ಉತ್ತರಗಳನ್ನೂ ಸೇರಿಸಲು ಮರೆತಿದ್ದು, ಅವನ್ನು ದೊರಕಿಸಿ ಕೊಟ್ಟು ಆತನು ಶಾಲೆಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ಸಹಕರಿಸಬೇಕೆಂದಿತ್ತು ಆತನ ಕೋರಿಕೆ. ನೈಜೀರಿಯಾದ ಆಡು ಅವಿಯಲ್ಲಿ ನಾನು ಕರೆಯುವ "ಹೆ-ಫಾಡ್-ಡು" ಓದುಗನಾದ ಈತನಂತೆ ಹೆಚ್ಚು ಓದುಗರು ಇಲ್ಲ ಎಂದು ನಾನು ಆಶಿಸುತ್ತೇನೆ. ಮತ್ತೆ ಘಾನಾದಲ್ಲಿ ಚಿಕ್ಕವಯಸ್ಸಿನ ಅಧ್ಯಾಪಕಿಯು ಭೇಟಿಯಾಯಿತು, ಆಕೆ ತಕ್ಷಣವೇ ನಾನು ನೋ ಲಾಂಗರ್ ಅಟ್ ಈಸ್‌ನ ನಾಯಕ ತಾನು ಪ್ರೀತಿಸುತ್ತಿದ್ದ ಹುಡುಗಿಯನ್ನು ಮದುವೆ ಆಗದಂತೆ ಮಾಡಿದ್ದಕ್ಕೆ ನನ್ನನ್ನು ತರಾಟೆಗೆ ತೆಗೆದುಕೊಂಡಳು. ನಾನು ಜಾಣರಾದ ವಿಮರ್ಶಕರು ನಾನು ಬರೆದಿರುವ ಪುಸ್ತಕದ ಬದಲಾಗಿ ಬೇರೆ ಪುಸ್ತಕ ಬರೆಯಬೇಕಾಗಿತ್ತೆಂದು ಹೇಳಿದಾಗಲೆಲ್ಲ ಮಾಡುವ ಸದ್ದುಗಳನ್ನು ಹೊರಡಿಸಿದೆ. ಆದರೆ ಆಕೆಯನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವಂತಿರಲಿಲ್ಲ. ಆ ಕಾದಂಬರಿಯಲ್ಲಿ ನಾನು ಚಿತ್ರಿಸುವ ಸನ್ನಿವೇಶದಲ್ಲಿ ಸಾಕಷ್ಟು ಹೆಂಗಸರು ಇರುವುದು ನನಗೆ ತಿಳಿದಿದೆಯೋ ಎಂದೂ ನಾನು ಸಾಮಾಜಿಕ ಕಟ್ಟಳೆಗಳ ಎದುರಾಗಿ ನಿಲ್ಲಬಲ್ಲ ಚೈತನ್ಯವಿರುವ ಒಬ್ಬನಾದರೂ ಇರಲಿಲ್ಲ ಎಂದು ತೋರಿಸಿದ್ದರೆ ಆ ಹೆಂಗಸರಿಗೆ ಸಾಕಷ್ಟು ಸಹಾಯ ಒದಗುತ್ತಿತ್ತು ಎಂದು ಹೇಳಿದಳು.

ನಾನದನ್ನು ಸಹಜವಾಗಿಯೇ ಒಪ್ಪಲಾರೆ. ಆದರೆ ಈ ಯುವತಿ ಎಷ್ಟು ಭಾವನಾತ್ಮಕವಾಗಿ ಮಾತನಾಡಿದಳೆಂದರೆ ಆ ಅಪಾದನೆಯಿಂದ ನನಗೆ ಕೊಂಚ ಮುಜುಗರ ಉಂಟಾಯಿತು (ಏಕೆಂದರೆ ಅದು ನಿಜವಾಗಲೂ ಅಪಾದನೆಯೋ—ನಾನು ಯಾಕಶ್ಚಿತ್ ಕಾರಣದಿಂದಾಗಿ ಅಮೂಲ್ಯವಾದ ಕಲಿಕೆಯ ಅವಕಾಶವನ್ನು ಕಳೆದುಕೊಂಡೆನಲ್ಲ ಎಂದು, ಆದರೆ ಆತ್ಮಗೌರವವುಳ್ಳ ಯಾವುದೇ ಬರಹಗಾರ ಓದುಗರು ಹೇಳಿದಂತೆ ಕೇಳಲಾರ ಎಂಬುದನ್ನು ಈ ಗಳಿಗೆಯಲ್ಲಿ ಹೇಳಬೇಕಾಗಿದೆ. ತನ್ನ ಸಮಾಜದ ಜೊತೆ ಭಿನ್ನಾಭಿಪ್ರಾಯ ಹೊಂದಲು ಅವನಿಗೆ ಸ್ವಾತಂತ್ರ್ಯವಿರಬೇಕು ಹಾಗೂ ಅಗತ್ಯಬಿದ್ದಾಗ ಅದರ ಎದುರುಬೀಳಲೂಬೇಕಾಗಬಹುದು. ಆದರೆ ಕಾರಣಗಳನ್ನು ಜಾಗರೂಕತೆಯಿಂದ ಆರಿಸಬೇಕು ಎಂದು ನನ್ನ ಅನಿಸಿಕೆ. ನನ್ನ ಸಮಾಜಕ್ಕೀಗ ಅಗತ್ಯವಾಗಿ ಬೇಕಾಗಿರುವುದು ಕೊಂಚವಾದರೂ ತಾಂತ್ರಿಕ ನಿಪುಣತೆ ಆದಾಗ ಇತ್ತೀಚೆಗೆ ನೈಜೀರಿಯಾದ ದಿನ ಪತ್ರಿಕೆಯ ಸಂಪಾದಕನಂತೆ ಯುರೋಪಿನ ಸಂಸ್ಕೃತಿಯನ್ನು ತಾಂತ್ರಿಕ ಹಾಗೂ ಯಾಂತ್ರಿಕ ಸಮಾಜದ ನಿಃಸತ್ವ ವಿವೇಕ ಅಲ್ಲಗಳೆಯಬೇಕು ?

ಬೇರೆ ಬೇರೆ ಸಮಾಜಗಳ ವೈವಿಧ್ಯ ಬೇಡಿಕೆಗಳ ಬಗೆಗಿನ ನನ್ನ ಚಿಂತನೆಗೆ ಹರಿತ ಗೊಂಡಿದ್ದು ನಾನು ಆಂಗ್ಲಭಾಷೆಯಲ್ಲಿನ ಜನಪ್ರಿಯ (ಪದ) ಹಾಡೊಂದನ್ನು ಕೇಳಿದಾಗ; ನನಗೆ, ನೆನಪಿದ್ದಂತೆ ಆ ಹಾಡಿನ ಶೀರ್ಷಿಕೆ 'ನಾನೊಂದು ವಾರ ಮೈತೊಳೆಯುವುದಿಲ್ಲ'

ಎಂದು. ಮೊದಮೊದಲು ನನಗೆ ಈ ರೀತಿಯ ಪ್ರತಿಜ್ಞೆಗಿಂತ ಬೇಕಾದಷ್ಟು ಮಹತ್ವವುಳ್ಳ ಪ್ರತಿಜ್ಞೆ ಮಾಡಬಹುದಿತ್ತಲ್ಲ ಎಂದು! ನಂತರ ಇಲ್ಲಿ ಈ ನಾಯಕನ ಸಂಸ್ಕೃತಿ (ಸ್ವಯಂಸಮಾಧಾನದಲ್ಲಿ) ಶಂಭುಕ ದೇವತ್ವದ ನಂತರದ್ದು ಎಂದು ಸಾರಿದ ಸಂಸ್ಕೃತಿ ಎಂದು ಅರಿವಾಯಿತು. ಆದ್ದರಿಂದ ಆತನನ್ನು ಬೇರೊಂದು ರೀತಿಯಲ್ಲೇ ಬೆಳಕಲ್ಲೇ ನಾನು ಕಂಡೆ. ಒಂದು ರೀತಿಯ ಪ್ರತೀಕಾರದ ದೈವೀ ಆಡಳಿತಕಾರ ಎಂದು. ಈತನಂತವರ ಸೇವೆ ನನ್ನ ಸಮಾಜದಲ್ಲಿ ಬೇಕಾಗಲಾರದು ಏಕೆಂದರೆ ನಾವು ಶಂಭುಕ ಯನ್ನು ದೈವತ್ವಕ್ಕೆ ಏರಿಸುವ ಪಾಪಕೃತ್ಯವನ್ನು ಮಾಡಿಲ್ಲ.

ನಮ್ಮಿಂದಲೇ ಆದ ಪಾಪಕೃತ್ಯಗಳು, ಪಾಖಂಡಿತನಗಳೂ ನಮ್ಮ ಹೆಸರ ವಿರುದ್ಧವಾಗಿ ದಾಖಲಾಗಿವೆ ಎಂಬುದನ್ನು ಇಲ್ಲಿ ಹೇಳುವ ಅವಶ್ಯಕತೆಯಿಲ್ಲ. ನಾನೇ ದೇವನಾದ ಪಕ್ಷದಲ್ಲಿ ನಾವು ಜನಾಂಗದ ಕೀಳರಿಮೆಯನ್ನು ಒಪ್ಪಿಕೊಂಡಿದ್ದುದು ಅತ್ಯಂತ ಕೆಟ್ಟದ್ದು ಎಂದು-ಅದು ಯಾವ ಕಾರಣದಿಂದಾದರೂ ಆಗಿರಲಿ-ಪರಿಗಣಿಸುತ್ತೇನೆ. ತುಂಬ ಕಾಲ ನವೆದಿರುವುದರಿಂದ ಈಗ ಅವರ ಬಗ್ಗೆ ವ್ಯಗ್ರವಾಗುವುದಾಗಲೀ ಅಥವಾ ಸಕೀರ್ಣವಾಗಿಯೂ ಬೇರೆಯವರನ್ನು ಇವರ ಕಾರಣೀಭೂತವನ್ನಾಗಿ ಮಾಡುವುದು ಸರಿಯಲ್ಲ. ಆದರ ನಾವೀಗ ಮಾಡಬೇಕಾದ ಕೆಲಸವೇನೆಂದರೆ ನಾವು ತಪ್ಪು ಮಾಡಿದ್ದು ಎಲ್ಲಿ, ಎಡವಿದ್ದು ಎಲ್ಲಿ, ಮಳೆನೀರು ನಮ್ಮನ್ನು ತೋಯ್ದಿದ್ದು ಎಲ್ಲಿ ಎಂದು ತಿಳಿಯಲು ಪ್ರಯತ್ನಿಸುವುದು.

ಆಫ್ರಿಕಾದ ಪ್ರಜ್ಞೆಗೆ ಪರಕೀಯರ ಆಡಳಿತ ಕಾಲದಲ್ಲಿ ಆದ ದುರಂತಗಳಿಗೆ ಒಂದೆರಡು ನಿದರ್ಶನ ಕೊಡುತ್ತೇನೆ. ನಲವತ್ತರ ದಶಕದಲ್ಲಿ ಸ್ಥಳೀಯ ಹೆಣ್ಣುಮಕ್ಕಳ ಶಾಲೆಯ ವಾರ್ಷಿಕೋತ್ಸವದಲ್ಲಿ ನೈಜೀರಿಯಾದ ನೃತ್ಯಗಳನ್ನು ಮೊದಲಬಾರಿ ಮಾಡಿದಾಗ ನನ್ನ ತಂದೆಯ ಪೀಳಿಗೆಯವರಿಗೆ ಆದ ಆಘಾತ ನನಗಿನ್ನೂ ನೆನಪಿದೆ. ಅಲ್ಲಿಯವರೆಗೂ ಅವರು ಕ್ರೈಸ್ತಮಂತದ ಹಾಗೂ ನಾಗರೀಕವಾದದ್ದನ್ನೇ ಮಾಡುತ್ತಿದ್ದುದು. ಮೇ ಪೋಲ್ ನೃತ್ಯ ಎಂದು ನನ್ನ ನಂಬಿಕೆ. ನನ್ನ ಬೆಳವಣಿಗೆಯ ಆ ದಿನಗಳಲ್ಲಿ ನಮ್ಮ ಸ್ಥಳೀಯ ಕರಕುಶಲತೆಯ ಉಪಯೋಗವಿದ್ದುದು ನಮ್ಮ ಬಡ, ಅಜ್ಞಾನದಲ್ಲಿ ತೊಳಲುತ್ತಿದ್ದ ಕ್ರೈಸ್ತಮಂತಕ್ಕೆ ಸೇರದೇ ಇದ್ದವರಿಗೆ ಮಾತ್ರ (ಉದಾ : ನಮ್ಮ ಮಣ್ಣಿನ ಮಡಿಕೆ, ಮಾಡಿಕೆಗಳು) ಸಿರಿವಂತರೂ ಹಾಗೂ ಕ್ರೈಸ್ತರು (ಸಾಮಾನ್ಯವಾಗಿ ಅದೇ ಜನ) ತಮ್ಮ ತಗಡಿನ ಡಬ್ಬಗಳನ್ನು ಇತರೆ ಲೋಹದ ಸಾಮಾಗ್ರಿಗಳನ್ನು ತೋರುತ್ತಿದ್ದರು. ನಾವು ಹೊಳೆಯ ನೀರಿಗೆ ನೀರ ಕುಡಿಕೆಗಳನ್ನು ತೆಗೆದುಕೊಂಡು ಹೋದದ್ದೇ ಇಲ್ಲ. ನನ್ನದು ನನ್ನ ವಯಸ್ಸಿಗೆ ತಕ್ಕಂತಹ ಚಿಕ್ಕ ಬಿಸ್ಕತ್ತಿನ ಡಬ್ಬವಾದರೆ, ದೊಡ್ಡವರು ನಾಲ್ಕು ಗ್ಯಾಲನ್ನಿನ ಸೀಮೆಎಣ್ಣೆಯ ಡಬ್ಬಗಳನ್ನು ಹೊರುತ್ತಿದ್ದರು.

ಈಗ ಪರಿಸ್ಥಿತಿ ಸಾಕಷ್ಟು ಬದಲಾಗಿವೆ ನಿಜ ಆದರೂ ನಾವು ಯೂರೋಪಿನ

ಜೊತೆಗಿನ ಮೊದಲ ಆಘಾತಕಾರಿ ಸಂಘರ್ಷದಿಂದ ಪೂರ್ಣವಾಗಿ ಚೇತರಿಸಿಕೊಂಡಿದ್ದೇವೆಂದು ನಟಿಸಿದರೆ ಮೂರ್ಖತನವಾದೀತು. ಹುಡುಗರ ಶಾಲೆಯಲ್ಲಿ ಇಂಗ್ಲೀಷ್ ಕಲಿಸುವ ನನ್ನ ಹೆಂಡತಿ ಮೂರ್ನಾಲ್ಕು ವಾರಗಳ ಹಿಂದೆ ವಿದ್ಯಾರ್ಥಿಯೊಬ್ಬನನ್ನು ಹರ್‌ಮ್ಯಾಟನ್ ಬದಲು ವಿಂಟರ್ (ಛಳಿಗಾಲ) ಎಂದೇಕೆ ಬರೆದಿರುವೆ ಎಂದು ಕೇಳಿದಾಗ ಆತ ತಾನು ಆ ರೀತಿ ಬರೆದರೆ ಬೇರೆ ಹುಡುಗರು ತನ್ನನ್ನು ಕಾಡುಪಂಗಡದ (ಬುಶ್ ಮ್ಯಾನ್) ಎಂದು ಛೇಡಿಸುತ್ತಾರೆಂದು ಉತ್ತರವಿತ್ತ. ನೋಡಿ, ನಿಮ್ಮಲ್ಲಿನ ಮಾಸಗಳ ಬಗ್ಗೆ ಅವಮಾನಪಟ್ಟುಕೊಳ್ಳುವಂತಹದ್ದು ಇದೇ ಎಂದು ನೀವು ಯಾವಾಗಲಾದರೂ ಯೋಚಿಸಿದ್ದೀರಾ? ನಾವು ಹಾಗೆ ಪ್ರಾಯಶಃ ಯೋಚಿಸುತ್ತೇವೆ. ಈ ಮಹಾನ್ ಪಾಷಂಡಿತನವನ್ನು ತೊಲಗಿಸುವುದಾದರೂ ಹೇಗೆ? ಲೇಖಕನಾಗಿ ನಾನು ಮಾಡಬೇಕಾದ ಕೆಲಸವೇನೆಂದರೆ ಆಫ್ರಿಕಾದ ಋತುಗಳ ಬಗ್ಗೆ ಅವಮಾನ ಪಟ್ಟುಕೊಳ್ಳುವಂತಹದ್ದೇನೂ ಇಲ್ಲ ಹಾಗೂ ಕಾವ್ಯ ರಚನೆಗೆ ಪಾಮ್ ಮರ ಕೂಡ ಯೋಗ್ಯವಾದ ವಿಷಯವಾದೀತು ಎಂದು ಆ ಹುಡುಗನಿಗೆ ಕಲಿಸುವುದು.

ಹಾಗಾದರೆ ನಾನು ಕೈಕೊಳ್ಳಬಹುದಾದ ಕ್ರಾಂತಿಯಿದು-ನನ್ನ ಸಮಾಜ ತನ್ನಲ್ಲಿ ನಂಬಿಕೆಯನ್ನು ಮತ್ತೆ ಪಡೆದುಕೊಳ್ಳುವುದು ಹಾಗೂ ಯುಗಗಳ ಕಳಂಕತರುವಿಕೆಯನ್ನೂ ಸ್ವಹೀನೈಸುವಿಕೆಯನ್ನು ಕಿತ್ತೊಗೆಯಲು ಸಹಕರಿಸುವುದು. ಮೂಲತಃ ಇದು ವಿದ್ಯಾಭ್ಯಾಸ ಶಿಕ್ಷಣದ ಪ್ರಶ್ನೆಯೇ. ನನ್ನ ಪ್ರಕಾರ ನನ್ನ ಗುರಿಗಳೂ, ನನ್ನ ಸಮಾಜದ ಅತ್ಯಂತ ಅಂತರಾಳದ ಅಭಿಲಾಷೆಗಳೂ ಸೇರುವುದು ಅಲ್ಲೇ. ಏಕೆಂದರೆ ವಿವೇಚನೆಯುಳ್ಳ ಯಾವುದೇ ಆಫ್ರಿಕಾದ ಪ್ರಜೆ ನಮ್ಮ ಆತ್ಮಕ್ಕೆ ಉಂಟಾಗಿರುವ ಗಾಯದ ನೋವನ್ನು ಅನುಭವಿಸದೆ ಇರಲಾರ. ನೀವೆಲ್ಲ ಆಫ್ರಿಕಾದ ವ್ಯಕ್ತಿತ್ವದ ಬಗ್ಗೆ ಕೇಳಿದ್ದೀರಿ; ಆಫ್ರಿಕಾದ ಪ್ರಜಾಪ್ರಭುತ್ವ, ಆಫ್ರಿಕಾದ ಸಮಾಜವಾದಿತ್ವ, ಆಫ್ರಿಕಾದ ನಡಿಗೆ, ನೆಗ್ರಿಟ್ಯೂಡ್, ಇತ್ಯಾದಿ. ಇವೆಲ್ಲ ನಾವು ನಮ್ಮ ಕಾಲ ಮೇಲೆ ನಿಲ್ಲಲು ಬೇರೆ ಬೇರೆ ಹೊತ್ತಿನಲ್ಲಿ ಮಾಡಿಕೊಂಡ ಊರುಗೋಲುಗಳು. ನೆಟ್ಟನೆ ನಿಂತೊಡನೆ ಇದ್ಯಾವುದರ ಅವಶ್ಯಕತೆಯೂ ನಮಗೆ ಇರಲಾರದು. ಆದರೆ ಸದ್ಯಕ್ಕೆ ನಾವು ರೇಸಿಸಂ ಅನ್ನು ಜಾನ್‌ಪಾಲ್ ಸಾರ್ತ್ರ್ ಹೇಳುವ ಆಂಟಿ-ರೇಸಿಸ್ಟ್ ರೇಸಿಸಂನ ಸಹಾಯದಿಂದ ಎದುರಿಸಬೇಕಾಗಿದೆ-ನಾವು ಮತ್ತೊಬ್ಬನಷ್ಟೇ ಅಲ್ಲ, ಅವನಿಗಿಂತ ಮಿಗಿಲು ಎಂದು ತೋರಲಿಕ್ಕಾಗಿ!

ಲೇಖಕ ಈ ಮಾಡಲೇಬೇಕಾದ ಮರುವಿದ್ಯಾಭ್ಯಾಸದ, ಮರುಕಳಿಕೆಯ ಕೆಲಸದಿಂದ ಹೊರಗುಳಿಯಲು ಬಯಸಬಾರದು. ಬದಲಾಗಿ ಇದರ ಮುಂಚೂಣಿಯಲ್ಲಿ ನಡೆಯಬೇಕು. ಎಜಕೀಲ್ ಮ್ಫಹ್ಲೇಲೆ ತನ್ನ 'ಆಫ್ರಿಕನ್ ಇಮೇಜ್'ನಲ್ಲಿ ಹೇಳುವಂತೆ

ಲೇಖಕ ತನ್ನ ಪಂಗಡದ, ಸಮಾಜದ ಸೂಕ್ಷ್ಮ ಪರಿಜ್ಞತೆಯು ತಂಟ್ಟುತಂದಿ ಘಾನಾದ ತತ್ವಶಾಸ್ತ್ರ ಪ್ರಾಧ್ಯಾಪಕ ವಿಲಿಯಮ್ ಅಬ್ರಹಾಮ್'ನ ಮಾತುಗಳಲ್ಲಿ:

> ಆಫ್ರಿಕಾದ ವಿಜ್ಞಾನಿಗಳು ಆಫ್ರಿಕಾದ ವೈಜ್ಞಾನಿಕ ಸಮಸ್ಯೆಗಳ ಪರಿಹಾರ ಹೂಡುವಂತೆ, ಆಫ್ರಿಕಾದ ಚರಿತ್ರಕಾರರು ಆಫ್ರಿಕಾದ ಚರಿತ್ರೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ, ಆಫ್ರಿಕಾದ ರಾಜ್ಯಶಾಸ್ತ್ರಜ್ಞರು ಆಫ್ರಿಕಾದ ರಾಜಕಾರಣದಲ್ಲಿಗೆ ಚಿಂತಿಸುವಂತಿದ್ದಾಗ ಆಫ್ರಿಕಾದ ಲೇಖಕರೇಕೆ ತಾವುಗಳೇ ಅನಿವಾರ್ಯವೆಂದು ಮನಗಂಡ ಸೇವಾಕಾರ್ಯಗಳಿಂದ ಹಿಂಜರಿಯಬೇಕು ?

ನಾನಂತೂ ಹಿಂಜರಿಯಲಾರೆ. ನನ್ನ ಕಾದಂಬರಿಗಳು-ಅದರಲ್ಲೂ ನಾನು ಹಿಂದಿನ ಕಾಲವನ್ನು ಮೂಲವಾಗಿಟ್ಟು ಬರೆದಿರುವವು-ನನ್ನ ಓದುಗರಿಗೆ ಅವರ ಗತಕಾಲ ಅದರ ಎಲ್ಲ ನ್ಯೂನತೆಗಳು ಇದ್ದಾಗ್ಯೂ ಯುರೋಪಿಯನ್ನರು ದೇವರ ಪರವಾಗಿ ಬಂದು ನಮ್ಮನ್ನು ಬಿಡುಗಡೆ ಮಾಡಿದ ಒಂದು ದೀರ್ಘ, ಕರಾಳ ರಾತ್ರಿಯಲ್ಲ ಎಂದು ಮನವರಿಸಿದರೆ ನನಗೆ ಸಾಕಷ್ಟು ಸಮಾಧಾನವಾದೀತು. ಪ್ರಾಯಶಃ ನಾನು ಬರೆಯುವುದು ಶಿಷ್ಟ ಕಲೆಯಾಗಿರದೆ ಅನ್ವಿತ ಕಲೆ ಎನ್ನಿಸಬಹುದು. ಆದರೆ ಅದರ ಬಗ್ಗೆ ನಾನಂತೂ ತಲೆಕೆಡಿಸಿಕೊಳ್ಳಲಾರೆ. ಕಲೆ ಮುಖ್ಯವಾದದ್ದು ನಿಜ ಆದರೆ ನನ್ನ ಮನಸ್ಸಿನಲ್ಲಿರುವ ವಿದ್ಯಾಭ್ಯಾಸವೂ ಶಿಕ್ಷಣವೂ ಮುಖ್ಯವಾದದ್ದೆ. ಇವೆರಡೂ ಭಿನ್ನವಾಗಿರುವಂತೆ ನಾನು ಯೋಚಿಸಲಾರೆ. ಹೊಸ ಜಾನಪದದ ಇತ್ತೀಚಿನ ಸಂಗ್ರಹವೊಂದರಲ್ಲಿ ಯಥಾಪ್ರಕಾರದ ಕೌತುಕಕಾರೀ ಘಟನೆಗಳ ನಂತರ ಕಥೆ ಈ ರೀತಿ ಮುಕ್ತಾಯಗೊಳ್ಳುತ್ತದೆ:

> ಅವರೆಲ್ಲ ಬಂದು ಸಂತೋಷದಿಂದ ಜೀವನ ಸಾಗಿಸಿದರು. ಆತನಿಗೆ ಬೇಕಾದಷ್ಟು ಗಂಡುಮಕ್ಕಳೂ, ಹೆಣ್ಣುಮಕ್ಕಳೂ ಆಗಿ, ಅವರೆಲ್ಲ ಬೆಳೆದು, ದೇಶದ ಮಟ್ಟವನ್ನು ಏರಿಸಲು ಸಹಕರಿಸಿದರು. ನಾನು ಬೇರೆಲ್ಲೋ ಹೇಳಿದಂತೆ, ನೀವು ಕಥೆಯ ಈ ಮುಕ್ತಾಯ ಅಂದುಕೊಂಡಲ್ಲಿ ಆಫ್ರಿಕಾದ ಬಗ್ಗೆ ನಿಮಗೆ ಸಾಕಷ್ಟು ತಿಳಿದಿರಲಾರದು.

ಕನ್ನಡಕ್ಕೆ : ಡಾ|| ಕೃಷ್ಣಮೂರ್ತಿ ಚಂದರ್

ಕ್ರೂಸೋ ಕನಸು

—೧—

ಹೆಗಲಲ್ಲಿ ಕೋವಿ, ಬಗಲಲ್ಲಿ ಸಂಚಿ
ಭುಜದ ಮೇಲೆ ಚೀರಾಡುತ್ತಿದೆ ಗಿಳಿ
ಹಿಂದೆ ಮೇಕೆಯು ಮುಂದೆಯನ್ನೇ ದಿಟ್ಟಿಸಿ

ಸ್ವಾಮಿನಾಥ, C/o. ಎಂ.ಎಸ್. ಸೂರ್ಯನಾರಾಯಣ, ನಂ. 22/33, ಸರ್ವೇಯರ್ ರಸ್ತೆ
ಬಸವನಗುಡಿ, ಬೆಂಗಳೂರು-560 004

ಕಳೆದ ದಿನಗಳ ಲೆಕ್ಕ ಗೋಡೆಯಲ್ಲಿ
ಲೆಕ್ಕ ಹಾಕುತ್ತಾನೆ ಇಪ್ಪತ್ತೇಳು!
ಎಷ್ಟು ಒಪ್ಪತ್ತಾಗಿರಬಹುದು ಇಪ್ಪತ್ತೇಳಾಗಲು?

ಕಡಲ ತಡಿಯ ಬಂಡೆಗಳಡಿ
ಅವುಚಿಟ್ಟುಕೊಂಡ ಏಡಿ
ಹೇಡಿ ನಿಯಮಂಗಳ ನಿಶ್ಚಿತ ಜರಡಿಯಲ್ಲಿ
ಸೋರಿ ಹೋಯಿತೆ ಕಾಲ?
ಇದ್ದಕ್ಕಿದ್ದಂತೆ ಭೂಗಗನವನ್ನಾವರಿಸಿದ
ತ್ರಿವಿಕ್ರಮ ಪಾದದ ಭಾರ
ತಟಕ್ಕನೆ ನೆತ್ತಿಮೇಲಿಟ್ಟು
ಅತಳ, ವಿತಳ, ಸುತಳ,
ತಳಾತಳ, ರಸಾತಳಕ್ಕಿಳಿಸುತ್ತ
ಗವ್ವೆನಿಸುವ ಕತ್ತಲೆಯುನ್ನಳಿಯುತ್ತ
ಮೆಲ್ಲನೆ ಪಾತಾಳಕ್ಕಿಳಿವೆ
ಒಬ್ಬಂಟಿತನದ ಅಂಕಣದಲ್ಲಿ
ಸಿಕ್ಕು ಸಿಕ್ಕಾಗಿ ಸೇರಿ
ಸುಟ್ಟ ಭೂಮಿಯಲ್ಲೇ ಕಾಮನ ಕೆಣಕುತ್ತಾ
ಬೆಟ್ಟದ ಕಿಚ್ಚನ್ನು ತಲೆಗೆ ಹಚ್ಚಿ
ದಟ್ಟ ಕಾಡಿನ ಎಲೆಗಳನ್ನೆಣಿಸುತ್ತಾನೆ
ಕ್ರೂಸೋ............

–೨–

ಶವದಷ್ಟೇ ನಿಶ್ಚಲ ಮೋಡ
ಪ್ರವಾಹದಲ್ಲಿಳಿದ ಒಂಟಿ ಮಾವಿನಮರ
ಅಳುವ ಎಕ್ಕಮಾದಂತೆ ಸುರಿವ ಝರಿ
ಚಿಗುರಲ್ಲೇ ಬಳಲಿ ಬಳಲಿ ಚೀತ್ಕರಿಸುವ ಗಿಳಿ
ಸುತ್ತಿಸುತ್ತಿ ಸಾಗರದ ತಳಕ್ಕೊತ್ತುವ ಸುಳಿ
ಹೀಗೆ............
ಪಕ್ಷಪಕ್ಷಕ್ಕೂ ಹಿಡಿವ ಪಕ್ಷಪಾತಕ್ಕಿಲ್ಲದೆ ಔಷಧ?

ಏನು ಹೇಳುತ್ತದ ಆಯುರ್ವೇದ
ಚರಕ, ಸುಶ್ರುತ?

ಕೊಂಚತಾಳಿ, ಸುಡುಸುಡು ಸುಡುವ
ಕುಂಪಟಿಯೊಳಗೆ ಬೇಯುತ್ತಿದೆ ಏದುಳು
ಅರಗಿಸೇ, ಹದವಾಗಿ ಬೆಂದ ಮೇಕೆ ಕರುಳು?
'ವಾತಾಪಿ', ಹೊರಗೆ ಬಾ
ಇವನಿಲ್ಲಿ ಏಕಾಕಿ!

—೩—

ಅಗೋ ಅಲ್ಲಿ, ಕನಸಲ್ಲಿ
ನರಳುತ್ತಿದ್ದಾನೆ ಚಂದ್ರ ಬಾನಲ್ಲಿ
ಕಾಮನಬಿಲ್ಲಿನ ಹೆದೆಯೆಳೆದು
ಸೆಳೆದು ಬಿಟ್ಟಿದ್ದಾರೆ ಬಾಣ
ಸತ್ತು ಬಿದ್ದಿದ್ದಾನೆ ಶಿಶಿರ
ಮತ್ತೆ ಸರಸರನೆ ಚಿಗುರಿದಮೃತ ಬಳ್ಳಿಗಳ ಹಿಂಡಿ
ಕುಂದಿಸಿ, ಕುಂದಿಸಿ ಕುಡಿಸಿದ್ದಾರೆ ಕಷಾಯ
ಎದ್ದು ಕುಳಿತನೇ ರೋಗಗ್ರಸ್ತ ವಸಂತ?
ಇದೀಗ ಗಂಧರ್ವರು ಸಿದ್ಧ
ಹಾಡುತ್ತಾರೆ ಕಾಡಲ್ಲಿ ವೀಣೆ, ಕಿನ್ನರಿ ಹಿಡಿದು
ಜೋಡಿಸುತ್ತಾರೆ ಸಿಡಿದ ಚೂರುಗಳೆಲ್ಲ ಲಯದಲ್ಲಿ
ಸಿದ್ಧವಾಯಿತೇ ಹಡಗು?
ಮತ್ತೆ ಎಲ್ಲಿಯದೀ ಗುಡುಗು
ಬೆಚ್ಚಿ ನಡುಗುತ್ತಾನೆ ಕ್ರೂಸೋ
ಮತ್ತೆಲ್ಲಿ ನಾಡಿನ ಕನಸು?

ಬೆಟ್ಟದ ಕಿಚ್ಚನ್ನು ತಲೆಗೆ ಹಚ್ಚಿ
ಗಾಳಿಗೆ ಮೈಯೊಡ್ಡಿ
ಧಗಧಗ ಉರಿಯುತ್ತಿದ್ದಾನೆ ಕ್ರೂಸೋ
ಕಾದು ಬೇಡುತ್ತಿದ್ದಾನೆ ಕೇಳಲು
ತೇ ಲಾಲಿ ಲೇಸೋ,

— ಸ್ವಾಮಿನಾಥ

ಕುವ್ರ

ಶೌಚ ಆಶೌಚ ಮತ್ತು ಶೋಷಣೆಯ ಪರಿಕಲ್ಪನೆ

— ವೀಣಾ ಬನ್ನಂಜೆ

ಭಾರತೀಯ ಸಾಮಾಜಿಕ ರಚನೆಯ ಒಳಗೆ "ಕಾಣುವ" (visible) ಮತ್ತು "ಕಾಣದ" (invisible) ಜಗತ್ತುಗಳಿರುವುದಕ್ಕೂ, ನಾವು ಒಪ್ಪಿಕೊಂಡಿರುವ ಮೌಲ್ಯಗಳಿಗೂ ಕಾರ್ಯಕಾರಣ ಸಂಬಂಧವಿದೆ. "ಕಾಣುವ" ಜಗತ್ತಿನ ವ್ಯಕ್ತಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಮುಂತಾದ ಕಾರಣಗಳಿಗಾಗಿ ಬಲಿಷ್ಠ (powerful) ಎಂದೂ, ಕಾಣದ ಜಗತ್ತಿನ ವ್ಯಕ್ತಿಗಳು ಅದೇ ಕಾರಣಗಳಿಂದಾಗಿ ದುರ್ಬಲ (powerless) ಎಂದೂ ಪರಿಗಣಿತರಾಗಿದ್ದಾರೆ. ಆದರೆ "ಕಾಣುವ" ಮತ್ತು "ಕಾಣದ" ಜಗತ್ತುಗಳ ವ್ಯತ್ಯಾಸವನ್ನು ಆರ್ಥಿಕ ಸ್ಥಿತಿಯು ನಿರ್ಧರಿಸುವುದರಿಂದ ಮತ್ತು 'ಶಕ್ತಿಯುತ' ಹಾಗೂ 'ಶಕ್ತಿಹೀನ'ವೆಂಬ ಪರಿಕಲ್ಪನೆಗಳಿಗೂ ಇಂತಹ ಆರ್ಥಿಕ ಸ್ಥಿತಿಯು ನಿರ್ಧಾರಿತ ಮಾನದಂಡವಾಗುವುದರಿಂದ ಈ 'ಮೌಲ್ಯ'ಗಳನ್ನು ಪುನರ್ವ್ಯಾಖ್ಯಾನಕ್ಕೆ ಒಡ್ಡಬೇಕಾಗಿದೆ.

ಆದ್ದರಿಂದಲೇ ಒಂದು "ಸಾಮಾಜಿಕ" ಬದುಕಿನಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಯ ಕೆಲಸಗಳಿಗೆ ಸಿಕ್ಕುವ ಪ್ರಾಮುಖ್ಯ, 'ಖಾಸಗಿ' ಬದುಕಿನಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಯ ಕೆಲಸಗಳಿಗೆ ಸಿಕ್ಕುವ ಪ್ರಾಮುಖ್ಯ 'ಖಾಸಗಿ' ಬದುಕಿನ ಕೆಲಸಗಳ ಸಂದರ್ಭದಲ್ಲಿ ಸಗಣ್ಯವಾಗುವುದನ್ನು ಮರು ವಿಮರ್ಶಿಸಬೇಕಾಗಿದೆ. ಯಾಕೆಂದರೆ "ಸಾಮಾಜಿಕ" ಮತ್ತು "ಖಾಸಗಿ" ಬದುಕುಗಳ ವ್ಯಾಖ್ಯಾನವನ್ನು ಸಮಾಜದ ಆರ್ಥಿಕ ಸ್ಥಿತಿಯು ನಿರ್ಧರಿಸುತ್ತದೆ. ಆದ್ದರಿಂದಲೇ ತಿಂಗಳ ಸಂಬಳವನ್ನು 'ಆರ್ಥಿಕ' ಸ್ವರೂಪದಲ್ಲಿ ಪಡೆಯುವ ವ್ಯಕ್ತಿಯ ಕೆಲಸವು ಒಂದು ವೃತ್ತಿಯಾಗಿ, ಸಾಮಾಜಿಕ ನೆಲೆಯಲ್ಲಿ ಒಂದು designation ಗೆ ಕಾರಣವಾಗುತ್ತದೆ. ಮನೆಯೊಳಗೆ ಮಾಡುವ ದಿನನಿತ್ಯದ ಕೆಲಸಗಳು, 'ವಿರಾಮ'ದ ಸಮಯ ಕೊಲ್ಲುವ ಸಂಗತಿಗಳಾಗಿ, ಆ ವ್ಯಕ್ತಿ ಕೆಲಸವಿಲ್ಲದ ಸಾಮಾಜಿಕ designation ಇಲ್ಲದ "ಶಕ್ತಿಹೀನ" ಮತ್ತು "ಕಾಣದ" ಜಗತ್ತಿನ ಪ್ರತಿನಿಧಿಗಳಾಗುತ್ತಾರೆ. ಈ ಪ್ರಕ್ರಿಯೆಗೂ ಆರ್ಥಿಕ ಉತ್ಪನ್ನಕ್ಕೂ ನೇರ ಸಂಬಂಧವಿದೆ.

ಇಂತಹ ಸಾಮಾಜಿಕ ಮತ್ತು ಕೌಟುಂಬಿಕ ರಚನೆಯ ಒಳಗೆ ಆರ್ಥಿಕ ಉತ್ಪನ್ನಗಳ ಮೇಲೆ ಸಂಗತಿಯನ್ನು ಮರೆಮಾಚಿ, ಅದನ್ನು ಮೀರಿ ಬೆಳೆಯುವ ಸಾಮಾಜಿಕ ಮೌಲ್ಯಗಳೆಂಬ ನೆಲೆಯಲ್ಲಿ ನಾವು ಒಪ್ಪಿಕೊಂಡ ಅನೇಕ ನಂಬಿಕೆಗಳಿವೆ. ಈ ಮೌಲ್ಯಗಳು ಮೂಲಭೂತವಾಗಿ ಆರ್ಥಿಕ ಉತ್ಪನ್ನಗಳ ಜೊತೆ ಸಂಬಂಧಪಟ್ಟು, ಕೆಲಸಗಳ ಕುರಿತು ಆರ್ಥಿಕ ಸ್ಥಾನಮಾನದ ಜೊತೆಗೆ ತಾಳೆಯಾಗುವ ಉತ್ಕೃಷ್ಟ ಮತ್ತು ನಿಕೃಷ್ಟ ಎಂಬ

ವೀಣಾ ಬನ್ನಂಜೆ ಈಶಾವಾಸ್ಯಂ, ಅಂಬಲಪಾಡಿ, ಉಡುಪಿ-576 103

ನಮ್ಮ ಯೋಚನಾ ಕ್ರಮದೊಡನೆ ನೇರ ಸಂಬಂಧವನ್ನು ಹೊಂದಿದೆ. ಆರ್ಥಿಕ ಉತ್ಪನ್ನದ ಮೂಲ ಸತ್ವಕ್ಕೆ ತೀರ ವ್ಯತಿರಿಕ್ತವೆಂಬಂತೆ ಭಾಸವಾಗಿ ಬೆಳೆಯುವ ಈ ಮೌಲ್ಯಗಳು ಶೋಷಣೆಗೂ ಕಾರಣವಾಗಿವೆ. ಇಂತಹ ಎಲ್ಲಾ ಮೌಲ್ಯಗಳನ್ನೂ ಚರ್ಚಿಸದೆ, ಶೌಚ ಮತ್ತು ಅಶೌಚಕ್ಕೆ ಸಂಬಂಧಿಸಿದ ಮೌಲ್ಯಗಳು ಹೇಗೆ ಶೋಷಣೆಗೂ ಕಾರಣವಾಗಿವೆ ಎಂಬುದನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

ಸ್ಪೃಶ್ಯ, ಶುಭ, ಶುದ್ಧವಾದದ್ದು ಬದುಕಿನ ಉತ್ಕೃಷ್ಟ ಮೌಲ್ಯಗಳಾಗಿಯೂ, ಅಸ್ಪೃಶ್ಯ, ಅಶುಭ ಮತ್ತು ಅಶುದ್ಧವಾದದ್ದು ನಿಕೃಷ್ಟ ಮೌಲ್ಯಗಳಾಗಿಯೂ ಚಾಲ್ತಿಯಲ್ಲಿವೆ. ಹಾಗೆ ನೋಡಿದರೆ ಸ್ಪೃಶ್ಯ, ಶುಭ, ಶುದ್ಧದ ಪರಿಕಲ್ಪನೆಗಳು ಕೇವಲ ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳ ಫಲವಲ್ಲ, ಬದಲಿಗೆ ಇವುಗಳ ಪರಸ್ಪರ ವಿರುದ್ಧ ಮೌಲ್ಯಗಳೂ ಕೂಡ ಒಂದು ಆರ್ಥಿಕ ಸ್ಥಿತ್ಯಂತರದ ಉತ್ಪನ್ನಗಳು ಆದ್ದರಿಂದ ವ್ಯಕ್ತಿಯು ನಿರ್ವಹಿಸುವ ಕೆಲಸಗಳು ಸ್ಪೃಶ್ಯ, ಶುಭ, ಅಶುದ್ಧ, ಶುದ್ಧ, ಅಸ್ಪೃಶ್ಯ, ಅಶುಭ ಮುಂತಾದ ತಥಾಕಥಿತ ಮೌಲ್ಯಗಳನ್ನು ನಿರ್ಧರಿಸುತ್ತವೆ. ಒಂದು ಕೆಲಸದ ಆರ್ಥಿಕ ಉತ್ಪನ್ನದ ಏರಿಳಿತಗಳು ಉತ್ಕೃಷ್ಟ ಮತ್ತು ನಿಕೃಷ್ಟದ ಭೇದಕ್ಕೂ ಕಾರಣವಾಗುತ್ತವೆ. ಆದ್ದರಿಂದ ಹೆಚ್ಚು ಉತ್ಪನ್ನಕ್ಕೆ ಕಾರಣವಾದ (ಅದು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ) ಕೆಲಸ ಶ್ರೇಷ್ಠವೆಂದೂ, ಕಡಿಮೆ ಉತ್ಪನ್ನಕ್ಕೆ ಕಾರಣವಾದ ಕೆಲಸ ನಿಕೃಷ್ಟವೆಂದೂ, ಉತ್ಪನ್ನವನ್ನು ಭೌತಿಕವಾಗಿ ಪಡೆಯದ ಕೆಲಸ ಕೆಲಸವಲ್ಲವೆಂದೂ ತೀರ್ಮಾನಿತವಾಗುತ್ತದೆ.

ಈ ನೆಲೆಯಲ್ಲಿಯೇ ಗಮನಿಸಿದರೆ ಶುಚಿಯಾಗಿ ಇರುವುದು ಶುಚಿತ್ವ, ಎಂಬ ಚಿಂತನೆ ಬೆಳೆದಿದೆ. ಆದರೆ ಶುಚಿತ್ವಕ್ಕೆ ಕಾರಣವಾದ ಸಂಗತಿಗಳು ಅಮುಖ್ಯವಾಗುತ್ತವೆ. ಯಾಕೆಂದರೆ ಶುಚಿಯಾಗಿ ಕಾಣುವುದು "ದೃಶ್ಯ"ವಾದರೆ ಶುಚಿತ್ವಕ್ಕೆ ಕಾರಣವಾದ ವಿಷಯಗಳು "ಅದೃಶ್ಯ"ವಾಗಿರುತ್ತವೆ. ಭೌತಿಕ ಫಲಿತಾಂಶದ ನೆಲೆಯಲ್ಲೂ ಈ ಅಂಶ ಸ್ಪಷ್ಟ. ಹೀಗಾಗಿ ಇಂತಹ ಯೋಚನಾ ಕ್ರಮದ ಹಿಂದೆ ಸಾಮಾಜಿಕ ಬದುಕಿನ ಶಕ್ತಿಯುತ ಮತ್ತು ಶಕ್ತಿಹೀನ ದೃಶ್ಯ ಮತ್ತು ಅದೃಶ್ಯ, ಉತ್ಕೃಷ್ಟ ಮತ್ತು ನಿಕೃಷ್ಟ ಜಗತ್ತುಗಳ ಪೂರ್ವಗ್ರಹಗಳೂ ವಿಶೇಷವಾಗಿ ಪ್ರಭಾವ ಬೀರಿದೆ. ಈ ಪೂರ್ವಗ್ರಹವು ಶುಚಿಯಾಗಿ ಇರುವುದನ್ನು ಶುಚಿಯೆಂದೂ, ಶುಚಿತ್ವಕ್ಕೆ ಕಾರಣವಾದ ವ್ಯಕ್ತಿ, ವಸ್ತು ಅಂಗ ಇವುಗಳನ್ನು ಅಶುಚಿಯೆಂದೂ ಪರಿಗಣಿಸುವಂತೆ ಒತ್ತಾಯಿಸುತ್ತದೆ. ಇದು ಒಂದು ದೃಷ್ಟಿಯಿಂದ ನಾವು ಬದುಕಿನಲ್ಲಿ ಮಾಡಿಕೊಂಡ "ದೈಹಿಕ ಭ್ರಷ್ಟಾಚಾರ."

ಅತ್ಯಂತ ಬಹಿಃಸ್ತರದಲ್ಲಿ ಕಾಣಿಸುವ ಹೊಲೆಯನ ಬದುಕು ಇಂಥದೇ ಚಿಂತನೆಗಳ ಪ್ರತಿಫಲವಾಗಿವೆ. ಸರಕಾರಿ ತೊಟ್ಟಿಗಳಲ್ಲಿ ನಾವು ಎಸೆಯುವ ಅನೇಕ ಹೊಲಸುಗಳನ್ನು "ಹೊಲೆಯರು" ಬುಟ್ಟಿಯಲ್ಲಿಟ್ಟು, ತಲೆಯ ಮೇಲೆ ಹೊತ್ತು ಲಾರಿಗೆ ತುಂಬಿಸುತ್ತಾರೆ.

ನಾವು "ಖಾಸಗಿ" (ನಮ್ಮ ಮನೆಯ) ಶುಚಿತ್ವವನ್ನು ಕಾಪಾಡಿದರೆ ಅವರು 'ಸಾರ್ವಜನಿಕ' ಶುಚಿತ್ವವನ್ನು ಕಾಪಾಡುತ್ತಾರೆ. ಆದರೆ ಸಾರ್ವಜನಿಕ ಅಶುಚಿತ್ವವನ್ನು "ಶುಚಿ" ಮಾಡುವ ಹೊಲೆಯರು ಅಸ್ಪೃಶ್ಯರಾಗಿಯೂ, ನಿಕೃಷ್ಟರಾಗಿಯೂ ಪರಿಗಣಿತರಾಗುತ್ತಾರೆ. ಶೌಚಾಲಯಗಳು ಭರ್ತಿಯಾಗಿ ಉಕ್ಕಿಬಂದಾಗ ನಮ್ಮ ಶೌಚಾಲಯಗಳನ್ನು ಶುಚಿಗೊಳಿಸುವ (ನಮಗಾಗಿ.) ಹೊಲೆಯರು ಅಸ್ಪೃಶ್ಯರಾಗುತ್ತಾರೆ. ನಿಕೃಷ್ಟರಾಗುತ್ತಾರೆ!

ಕೆದರಿ ಬೆಳೆದ ಕೂದಲನ್ನು, ಕುರುಚಲು ಗಡ್ಡವನ್ನೂ ಶುಚಿಮಾಡುವ ಕ್ಷೌರಿಕನು ಅಶುಚಿಯ ಕಾರಣಕ್ಕಾಗಿ ಅಸ್ಪೃಶ್ಯನಾಗುವುದೂ, ನಮ್ಮ ಯೋಚನಾ ಕ್ರಮದ ಭ್ರಷ್ಟಾಚಾರದಿಂದಲೇ. ಅಂದರೆ ನಮ್ಮನ್ನು ಶುಚಿ ಮಾಡಿದ ಅಪರಾಧಕ್ಕೆ ಅವನು "ಪಾಪ" ಅನುಭವಿಸುತ್ತಾನೆ. ತಲೆ ಕೂದಲು ಬೋಳಿಸಿಕೊಂಡು, ಗಡ್ಡವನ್ನು ನೀಟಾಗಿ ಶೇವ್ ಮಾಡಿದ ಮಂದಿ ಸ್ನಾನ ಮಾಡಿ "ಶುಚಿಗಳಾಗುತ್ತಾರೆ".

ಮನೆಯ ಸುತ್ತಮುತ್ತಲಿನ ಎಲ್ಲಾ ಹೊಲಸನ್ನೂ ತಿಂದು ಸುಖ ಪಡುವ ಕಾಗೆಯ ಕುರಿತು ನಮಗೆ ಉತ್ಕೃಷ್ಟ ಕಲ್ಪನೆಗಳಿಲ್ಲ. ಆದರೆ ಆ ಕಾಗೆಯ ಗೂಡಿನಲ್ಲೇ ಬೆಳೆದು ಹೊಲಸನ್ನು ಮುಟ್ಟದೆ ದೂರವೇ ಉಳಿದ ಕೋಗಿಲೆಯ ಕಂಠಕ್ಕೇ ಮೊದಲ ಸ್ಥಾನ: ಅದರ ವರ್ಣನೆಗೆ ಕವಿಗಳು ಹಾತೊರೆಯುತ್ತಾರೆ. ಯಾಕೆಂದರೆ ಹೊಲಸು ತಿನ್ನುವ ಕಾಗೆ ಬೇಕು ಬೇಡಗಳ ಲೆಕ್ಕಾಚಾರವಿಲ್ಲದೆ ಐಪಾರಾಮುವಾಗಿ ಮನೆಯ ಸುತ್ತು ತಿರುಗುವ "ನಿಕೃಷ್ಟ ಅತಿಥಿ" ಮತ್ತು ಕಾಗೆ ಸತ್ತ ವ್ಯಕ್ತಿಯ ಪಿಂಡ ತಿಂದು ಹೋಗುವುದಕ್ಕೆ ಅಗತ್ಯವಾದ ಪಕ್ಷಿ. ಈ ನೆಲೆಯಲ್ಲಿ ಸತ್ತ ವ್ಯಕ್ತಿಯ ಮಕ್ಕಳ ತರ್ಪಣವನ್ನು ಪಿತೃವಿಗೆ ಒಯ್ಯುವ ಪಾಪ ಪರಿಹಾರಕ. ಅಂದರೆ ಭಾರತೀಯ ಸಂಪ್ರದಾಯದ ಪ್ರಕಾರ ವ್ಯಕ್ತಿಯ ಅಂತರಂಗ ಶೌಚಕ್ಕೆ ಕಾರಣೀಭೂತ, ಆದರೆ ಆ ಕಾಗೆಗೆ ಪಕ್ಷಿಗಳಲ್ಲೆಲ್ಲಾ ಕೊನೆಯ ಸ್ಥಾನ:

ಅತ್ಯಂತ ಅಂತಃಸ್ತರದಲ್ಲಿ ಗಮನಿಸಬಹುದಾದ ಪ್ರತೀ ಮನೆಯ ಒಳಗಿನ ಪರಿಸ್ಥಿತಿಯನ್ನು ಈ ನೆಲೆಯಲ್ಲಿ ಅಭ್ಯಸಿಸಬೇಕಾಗಿದೆ. ಕುಡಿದ ಲೋಟ, ಉಂಡ ತಟ್ಟೆ, ತೊಟ್ಟ ಬಟ್ಟೆಗಳನ್ನು ತಾನಾಗಿ ಶುಚಿ ಮಾಡದೆ ಬೇರೆಯವರಿಂದ ಶುಚಿ ಮಾಡಿಸಿಕೊಳ್ಳುವ ವ್ಯಕ್ತಿಗಳು ಶ್ರೇಷ್ಠರೆಂದೂ, ಅವುಗಳನ್ನು ಶುಚಿ ಮಾಡುವವರು ನಿಕೃಷ್ಟರೆಂದೂ ತಾಕೀತಾಗಿದೆ. ಆದ್ದರಿಂದಲೇ ಬೆಳಗ್ಗೆ ಎದ್ದು "ಇತರರಿಗೆ" ಕಾಫಿ ಮಾಡುವ, ಪಾತ್ರೆ ತೊಳೆಯುವ, ಬಟ್ಟೆ ಒಗೆಯುವ, ಊಟ ಬಡಿಸುವ, ಮನೆಯ ಕಸ ಗುಡಿಸುವ, ನೆಲ ಉಜ್ಜುವ ಕೆಲಸಗಳನ್ನು ಮಾಡುವ ಹೆಣ್ಣು (ಅವಳು ಮನೆಯ ಒಡತಿ ಆಗಿರಲಿ ಅಥವಾ ಕೆಲಸದವಳೇ ಆಗಿರಲಿ) ನಿಕೃಷ್ಟಳಾಗುತ್ತಾಳೆ, ಮತ್ತು ಅಂತಹ ಯಾವುದೇ ಕೆಲಸಗಳನ್ನು ಮಾಡದೆ ಉಳಿಯುವ ಯಜಮಾನ ಹಾಗೂ ಮಗಂದಿರು ಶ್ರೇಷ್ಠರಾಗಿಯೇ

ಇರುತ್ತಾರೆ. ಅಶೌಚಕ್ಕೆ ಕಾರಣರಾದ ಮಂದಿ ಉತ್ತಮರು. ಶೌಚಕ್ಕೆ ಕಾರಣರಾದವರು ಹೀನರು!

ಈ ಕಾರಣಕ್ಕಾಗಿಯೇ ಬದುಕಿನಲ್ಲಿರುವ ಅನೇಕ ನಂಬಿಕೆಗಳನ್ನು ನಿಕಷಕ್ಕೆ ಒಡ್ಡಬೇಕಾಗಿದೆ. ಒಬ್ಬ ಗಂಡಸಿನ ದೇಹಕ್ಕೆ ಹಿಡಿಸೂಡಿಯ (ಕಸಬರಿಕೆಯ) ಕಡ್ಡಿ ತಾಗಿದರೆ ಆತನ ಆಯುಸ್ಸು ಕಡಿಮೆಯಾಗುತ್ತದೆ ಎಂಬ ನಂಬಿಕೆ ಅಂಥವುಗಳಲ್ಲಿ ಒಂದು. ದಿನ ಬಿಡದೆ ಹಿಡಿಸೂಡಿ ಹಿಡಿದು ಶುಚಿಗೊಳಿಸುವ ಹೆಣ್ಣು ನಿಕೃಷ್ಟಳಾಗಿಯೂ, ಅದರ ಸ್ಪರ್ಶಕ್ಕೂ ಆಯುಸ್ಸು ಕಳೆದುಕೊಳ್ಳುವ ಗಂಡು ಶ್ರೇಷ್ಠನಾಗಿಯೂ ಉಳಿಯುವಂತೆ ಈ ನಂಬಿಕೆ ಎಚ್ಚರಿಕೆ ವಹಿಸುತ್ತದೆ. ಜೊತೆಗೆ ನಿರ್ದಿಷ್ಟ ಕೆಲಸವನ್ನು ನಿರ್ದಿಷ್ಟ ವ್ಯಕ್ತಿಗಳಿಗೆ ಸೀಮಿತಗೊಳಿಸುವ ಪ್ರಜ್ಞಾಪೂರ್ವ ವ್ಯವಸ್ಥೆಯನ್ನು ಕೂಡಾ ಹೇಳುತ್ತದೆ. ಹಾಗೆ ನೋಡಿದರೆ ಹಿಡಿಸೂಡಿ ನಿಕೃಷ್ಟವಾಗುವುದು ಅದರ ಶೌಚಗುಣಕ್ಕಾಗಿಯೇ. (ಮೆಟ್ಟನ್ನು ಕೀಳಾಗಿ ಕಾಣುವುದರ ಹಿಂದೆ ಕೂಡ ಪಾದವನ್ನು ಶುಚಿಯಾಗಿ ಕಾಪಾಡಿಕೊಳ್ಳುವ ಇರಾದೆ ಇದೆ).

ಎಡ ಮತ್ತು ಬಲದ ಪರಿಕಲ್ಪನೆಗಳ ಹಿಂದೆ ಇರುವ ಉತ್ಕೃಷ್ಟಗಳ ತೀರ್ಮಾನಕ್ಕೂ ಶೌಚ ಮತ್ತು ಅಶೌಚ ಮೌಲ್ಯಗಳಿಗೂ ಇರುವ ಸಂಬಂಧ ಬಹಳ ಕುತೂಹಲಕಾರಿಯಾದದ್ದು. ಹೇಲು ಮಾಡಿದ ಮಲದ್ವಾರವನ್ನು ಶುಚಿಗೊಳಿಸುವ ಎಡಗೈ ಅಶೌಚವಾಗಿಯೂ, ಅದನ್ನು ಶುಚಿಮಾಡದೆ ಅಶೌಚಕ್ಕೆ "[illegible]"ವಾಗಿ, ಉಳಿದ ಬಲಗೈ ಶ್ರೇಷ್ಠವಾಗಿಯೂ ಉಳಿದಿದೆ. ಆದ್ದರಿಂದ ಬುದ್ಧಿ ತಿಳಿಯದ ಮಗು ಒಳ್ಳೆಯ ಕೆಲಸಗಳಿಗೆ ಎಡಗೈ ಬಳಸಿದರೆ ಮಗುವನ್ನು ಬಲದ ಕೈಯಲ್ಲಿ ಕೊಡುವಂತೆ ಬುದ್ಧಿ ಹೇಳಲಾಗುತ್ತದೆ. ಅಗತ್ಯ ವಸ್ತುವೊಂದನ್ನು ಇಟ್ಟಿರುವ ಸ್ಥಳ ನೆನಪಾಗದೆ ಇದ್ದಾಗ ಮನುಷ್ಯರು ಅದಕ್ಕೆ ಎಡಗೈಯನ್ನು ತೋರುತ್ತಾರೆ. (ತಲೆ ಮತ್ತು ಕಾಲುಗಳ ಕುರಿತ "ಉತ್ತಮಾಂಗ" ಮತ್ತು 'ಹೀನಾಂಗ'ದ ಯೋಚನಾಕ್ರಮ ಕೂಡ ಇಂಥದೇ ಪೂರ್ವಗ್ರಹದ ಮರಿ) ಈ ಕಾರಣಕ್ಕಾಗಿಯೇ ಭಾರತೀಯ ಹಸ್ತಸಾಮುದ್ರಿಕದಲ್ಲಿ ಹೆಣ್ಣಿನ ಭವಿಷ್ಯವನ್ನು ಅವಳ ಎಡಗೈಯಿಂದಲೂ ಅವಳ ಗಂಡನ ಭವಿಷ್ಯವನ್ನು ಅವಳದೇ ಬಲಗೈಯಿಂದಲೂ ಹೇಳಲಾಗುತ್ತದೆ. (ಪಾಶ್ಚಾತ್ಯ ಹಸ್ತಸಾಮುದ್ರಿಕೆಯಲ್ಲಿ ಈ ನಿಯಮವಿಲ್ಲ!) ಗಂಡನ "ಎಡದಲ್ಲಿ" ಹೆಂಡತಿಗೆ ಸ್ಥಾನ: ಅವಳ ಎಡಗಣ್ಣು ಹಾರಿದರೆ "ಶುಭ ಶಕುನ" ಎಡಗಾಲು ಎಡವಿದರೆ "ಒಳ್ಳೆಯದು". ಈ ಶುಭ ಮತ್ತು ಅಶುಭದ ಮೌಲ್ಯಗಳನ್ನು ನಿರ್ಧರಿಸುವುದು ಶೌಚ ಮತ್ತು ಅಶೌಚದ ಕುರಿತ ಪ್ರಜ್ಞೆಯೇ.

ಅತ್ಯಂತ ಪ್ರಧಾನವಾದ ಧರ್ಮಸಂಬಂಧಿ ಕೆಲಸಗಳನ್ನು ಈ ನೆಲೆಯಲ್ಲಿ ಗಮನಿಸಿದಾಗ ಬದುಕಿನ ಅನೇಕ "ಮಿಥ್"ಗಳು ಬಯಲಾಗುತ್ತವೆ. ಜಾತ್ಯಾಧಾರಿತ ನೆಲೆಯಲ್ಲಿ ಧರ್ಮವು "ಪೂಜಾವರ್ಗ" (ಬ್ರಾಹ್ಮಣರು) ಮತ್ತು ಇತರ ವರ್ಗ (ಬ್ರಾಹ್ಮಣೇ

ಶೂದ್ರ

ತರರು) ಎಂಬ ವಿಭಜನೆ ಪಡೆದಿದರೆ, ಲಿಂಗಾಧಾರಿತ ನೆಲೆಯಲ್ಲಿ ಅದರ ಪರಿಣಾಮ ಇನ್ನೂ ಸೂಕ್ಷ್ಮವಾದುದು. ಬ್ರಾಹ್ಮಣರು ಶ್ರೇಷ್ಠರೆಂದೂ ಇತರರು ನಿಕೃಷ್ಟರೆಂದೂ ನಿರ್ಧಾರಿತವಾಗುವುದು ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯ ಒಂದು ಮುಖವಾದರೆ, ಬ್ರಾಹ್ಮಣ ಪಂಗಡದ ಒಳಗೇ ಲಿಂಗಾಧಾರಿತ ನೆಲೆಯಲ್ಲಿ ಪೂಜಾವಿಧಿಯನ್ನು ನಡೆಸುವ ಗಂಡಸು ಶ್ರೇಷ್ಠನಾಗುತ್ತಾನೆ. ಆದರೆ ಆ ಪೂಜೆಯ ಪೂರ್ವವಿಧಿಗಳಿಗೆ ಕಾರಣಳಾದ ಹೆಂಗಸು ನಿಕೃಷ್ಟಳಾಗುತ್ತಾಳೆ: ಪೂಜೆಗೆ ಮೊದಲು ಸೆಗಣಿ ಬಳಿದು ಶುದ್ಧ ಮಾಡುವ, ಹೂ ಕಟ್ಟುವ, ಆರತಿ ಮುಂತಾದ "ದೇವರ" ಪಾತ್ರೆಗಳನ್ನು ತೊಳೆಯುವ ಮತ್ತು ಪೂಜೆಯ ಬಳಿಕ ಪುನಃ ಸೆಗಣಿ ಬಳಿದು ಶುದ್ಧ ಮಾಡುವ ಹೆಣ್ಣು ಸಕ್ರಿಯ ಪಾತ್ರ ವಹಿಸುವ ಗಂಡಿಗಿಂತ ನಿಕೃಷ್ಟಳಾಗುತ್ತಾಳೆ. ಬಾಹ್ಯ ಶೌಚಕ್ಕೆ ಕಾರಣಳಾದ ಹೆಣ್ಣು ನಿಕೃಷ್ಟಳಾದರೆ, ಲೌಕಿಕ ಲೋಕದಲ್ಲಿ—ಅಂದರೆ ದೇವರ ಕೋಣೆಯ ಒಳಗೆ—ಪೂಜೆ ಹೋಮಗಳ ಮೂಲಕ 'ಅಶುಚಿ' ಮಾಡುವ ಗಂಡಸು ಅಲೌಕಿಕ ಲೋಕದ ಅಥವಾ "ಅಂತರಂಗದ ಶೌಚಕ್ಕೆ" ಕಾರಣನಾಗುವುದರಿಂದ ಉತ್ಕೃಷ್ಟನಾಗುತ್ತಾನೆ. ಆದ್ದರಿಂದಲೇ ಹೆಣ್ಣು ತುಳಸಿಯ ಗಿಡಕ್ಕೆ ಸದಾ ನೀರೆರೆಯುತ್ತಾಳಾದರೂ ಅವಳು ದೇವರಿಗೆ ಅದರ ಕುಡಿಯನ್ನು ಕೊಯ್ಯಲು ಅನರ್ಹಳಾಗುತ್ತಾಳೆ. ಅವಳು ದೇವರ ಪಾತ್ರೆಗಳನ್ನು ತೊಳೆದಿಟ್ಟರೂ ಗಂಡಸು ಅವಕ್ಕೆ "ಶುದ್ಧ ನೀರು" ಪ್ರೋಕ್ಷಿಸಿ "ಶುದ್ಧೀಕರಿಸಿ" ಉಪಯೋಗಿಸುತ್ತಾನೆ.

ಇಂತಹ ಅನೇಕ ಸಂಗತಿಗಳು ಕೆಲಸ ಮತ್ತು ಅದರ ಆರ್ಥಿಕ ಉತ್ಪನ್ನದ ನೆಲೆಯಲ್ಲಿ ಸಾಮಾಜಿಕ ರಚನೆಯ ಒಳಗಿನ ಕೆಲವು ಕ್ಷೋಭೆಗಳನ್ನು ಪ್ರಕಟಿಸುತ್ತವೆ. ಮೇಲಿನ ಎಲ್ಲಾ ಉದಾಹರಣೆಗಳು ಆರ್ಥಿಕ ಉತ್ಪನ್ನವನ್ನು ಪಡೆಯದೆ ಇರುವ ಕಾರಣಕ್ಕಾಗಿ ಕೆಲಸವು ಸಾಮಾಜಿಕ ಸ್ತರದಲ್ಲಿ ಪಡೆಯುವ ಅರ್ಥ ವ್ಯತ್ಯಾಸಗಳನ್ನೂ ಸ್ಪಷ್ಟಪಡಿಸುತ್ತವೆ. ಆರ್ಥಿಕ ಉತ್ಪನ್ನವನ್ನು ಪಡೆಯದೆ ಇರುವ ಕೆಲಸಗಳ ಕುರಿತು ವ್ಯಕ್ತಿಗಳಿಗೆ ಇರುವ ಬೇಜವಾಬ್ದಾರಿ ಕಾಳಜಿ ಮತ್ತು ಆತ್ಮವಿಶ್ವಾಸದ ಕೊರತೆಗಳು ಈ ಕೆಲಸಗಳನ್ನು ಮತ್ತಷ್ಟು ಕ್ಷುಲ್ಲಕವಾಗಿಸಿವೆ. ಆದ್ದರಿಂದ ಒಂದು ಕೆಲಸವು "ವಿರಾಮ" ಅಥವಾ "ಸಮಯ ಕೊಲ್ಲುವ" ಚಟವಾಗುವುದಕ್ಕೂ, ಕೆಲಸ ಮಾಡುವ ವ್ಯಕ್ತಿಗೆ ಆ ಕೆಲಸದ ಕುರಿತು ಇರುವ ಅಪನಂಬಿಕೆಗಳಿಗೂ ಸಂಬಂಧವಿದೆ. ಪ್ರತೀ ವ್ಯಕ್ತಿಯು ತಾನು ಮಾಡುವ ಕೆಲಸದ ಕುರಿತು, ಅದರ ಆರ್ಥಿಕ ಪ್ರತಿಫಲದ ರೂಪರೇಷೆಗಳನ್ನು ಮೀರಿ, ಒಂದು ಅರ್ಥಪೂರ್ಣ ಕೆಲಸವೆಂಬ ನೆಲೆಯಲ್ಲಿ ವಿಶ್ಲೇಷಿಸದೆ ಇದ್ದರೆ ಅವು ಇಂತಹ ಅಪಾಯಕಾರಿ ತೀರ್ಮಾನಗಳಿಗೆ ಕಾರಣವಾಗುತ್ತವೆ. ಆದ್ದರಿಂದ ಒಂದು ಕೆಲಸವು ಶೌಚ ಮತ್ತು ಅಶೌಚದ ನೆಲೆಯಲ್ಲಿ ಶ್ರೇಷ್ಠ ಮತ್ತು ನಿಕೃಷ್ಟವೆಂಬ 'ಹಣೆಬರಹ'ವನ್ನು ಕಟ್ಟಿಕೊಳ್ಳುವುದಕ್ಕೆ ಎರಡೂ ಕಾರಣಗಳನ್ನು ಗುರುತಿಸಬಹುದು.

1. ಸಾಮಾಜಿಕ ರಚನೆಯ ಒಳಗೆ ಆರ್ಥಿಕ ಉತ್ಪನ್ನಕ್ಕೆ ನೀಡಿರುವ ಅಗತ್ಯಕ್ಕಿಂತ ಹೆಚ್ಚಿನ ಮಹತ್ವ ಮತ್ತು
2. ವೈಯಕ್ತಿಕ ನೆಲೆಯಲ್ಲಿ ವ್ಯಕ್ತಿಗೇ ತಾನು ಮಾಡುವ ಜವಾಬ್ದಾರಿಯಂತ ಕೆಲಸದ ಕುರಿತು ಇರುವ ಬೇಜವಾಬ್ದಾರೀ ಅಪನಂಬಿಕೆ.

ಎರಡನೆಯ ಕಾರಣವು ಒಂದನೆಯ ಕಾರಣಕ್ಕೆ ಅನುಗುಣವಾಗಿಯೇ ಹುಟ್ಟಿಕೊಂಡಿರುತ್ತದೆ. ಆದ್ದರಿಂದ ಆರ್ಥಿಕತೆಯನ್ನು ಮೀರಿದ ಮತ್ತು ಸಾಮಾಜಿಕ ಸಂದರ್ಭದಲ್ಲಿ ಮಹತ್ತರವಾಗಿರುವ ಕೆಲಸಗಳ ಕುರಿತ ನಮ್ಮ ಭಾವನೆಗಳನ್ನು ನಾವು ಮರುವಿಮರ್ಶಿಸಬೇಕಾಗಿದೆ. ಇಲ್ಲದೆ ಇದ್ದರೆ ರಾಷ್ಟ್ರ ಬಂದ್ ಕರೆಗಳು ಇದುವರೆಗೆ ಬೇರೆ ಯಾವುದೋ ಜಾಡನ್ನು ಹುಡುಕಬೇಕಾಗಿತ್ತು. ಜಗತ್ತಿನಾದ್ಯಂತದ 'ರಾಷ್ಟ್ರ ಬಂದ್' ಕರೆಗಳೆಲ್ಲವೂ ಒಂದು ಆರ್ಥಿಕ ಉತ್ಪನ್ನವನ್ನು ನೆಚ್ಚಿಕೊಂಡು ಬದುಕುತ್ತಿರುವ ರಾಷ್ಟ್ರೀಕರಣದ ಬಾಲಬಡುಕತನವೇ ಹೊರತು, ಜನಜೀವನದ ಮಹತ್ತರ ಕೆಲಸಗಳ ಬಂದ್ ಅಲ್ಲ. ಹಾಗೆ ನೋಡಿದರೆ ಅಂತಹ ಬಂದ್‌ಗಳು ಬದುಕಿನ ದಿನನಿತ್ಯದ ಕೆಲಸಗಳನ್ನು ಅಲ್ಪವೆಂದು ಭಾವಿಸುವ ಪುರುಷ ಪ್ರಧಾನ ಯೋಚನಾ ಕ್ರಮದ ಮೊಟ್ಟೆಗಳು. 'ಬಂದ್'ನ ನಿಜವಾದ ಅರ್ಥ ತಿಳಿಯಬೇಕಾದರೆ ಹಿಡಿಸೂಡಿಯಿಂದ ಹಿಡಿದು ಎಡಗೈಯ ವರೆಗಿನ ಕೆಲಸಗಳು ನಿಲ್ಲಬೇಕು. ಈ ವಾದವು ಒಂದು extreme ನಂತೆ ಭಾಸವಾದರೆ ಅದಕ್ಕೆ ಕಾರಣ ಆರ್ಥಿಕ ಉತ್ಪನ್ನದ ಆಚೆಗೆ ಕೆಲಸವಿದೆ ಎಂಬ ಪರಿಕಲ್ಪನೆಯನ್ನು ನಾವು ಒಪ್ಪಿಕೊಳ್ಳದೆ ಇರುವುದು. ಆದ್ದರಿಂದಲೇ ಶೌಚ ಮತ್ತು ಆಶೌಚ ಮೌಲ್ಯಗಳಿಗೇ ವ್ಯಕ್ತಿಗಿಂತ ಹೆಚ್ಚು ಮಹತ್ವವನ್ನು ಕೊಟ್ಟಿರುವುದು. ಆದ್ದರಿಂದ ಹೆಣ್ಣು–ಮನೆಯೊಳಗೆ, ಎಡಗೈ – ಶುಚಿಗೆ, ಪಾದ – ಸೇವೆಗೆ, ಹೊಲೆಯ–ಮನೆಯ ಹೊರಗೆ ಉಳಿಯುವುದು ಒಂದು ಸಾಮಾಜಿಕ ಪ್ರಕ್ರಿಯೆಯೇ ಹೊರತು ಪ್ರಾಕೃತಿಕ ಮತ್ತು ಜೈವಿಕ ಕಾರಣಕ್ಕಾಗಿ ಅಲ್ಲ. ಹಾಗಾಗಿ "ಶುಚಿಯಿರುವ ಮಂದಿ ಅಶುಚಿಗೆ ಕಾರಣರಾದವರನ್ನು ಶೋಷಿಸುತ್ತಾರೆ" ಎಂಬುದು ಒಂದು ಸಾಮಾಜಿಕ "ಮಿಥ್".

ಆದ್ದರಿಂದ ಶೋಷಣೆ ಎಂಬ ಪದವನ್ನು ಸಾಮಾಜಿಕ, ಆರ್ಥಿಕ, ಚಾರಿತ್ರಿಕ ಮತ್ತು ಜೈವಿಕ ಕಾರಣಗಳ ನೆಲೆಯಲ್ಲಿ ವಿಶ್ಲೇಷಿಸದೆ ಇದ್ದರೆ, ನಾವು ಬದುಕಿನಲ್ಲಿ ಒಪ್ಪಿಕೊಂಡಿರುವ ಶಕ್ತಿಯುತ–ಶಕ್ತಿಹೀನ, ದೃಶ್ಯ–ಅದೃಶ್ಯ ಮತ್ತು ಖಾಸಗಿ–ಸಾರ್ವಜನಿಕ ಜಗತ್ತುಗಳ ಮರು ವ್ಯಾಖ್ಯಾನವನ್ನು ಒತ್ತಾಯಿಸದೆ ಇದ್ದರೆ, ಜಾತಿಯೆಂಬುದಕ್ಕಿಂತಲೂ ಮುಖ್ಯವಾಗಿ ಲಿಂಗಾಧಾರಿತ ನೆಲೆಯಲ್ಲಿ ನಡೆಯುತ್ತಿರುವ ಅಸಮಾನತೆಗಳನ್ನು ಪ್ರಶ್ನಿಸದೆ ಇದ್ದರೆ, ಮೇಲೆ ಉದಾಹರಿಸಿದ ಅಪಭ್ರಂಶಗಳು ಸ್ಥಾಪಿತ ಮೌಲ್ಯಗಳಾಗಿ, "ಸಿದ್ಧ ಮಾದರಿ"ಗಳಾಗಿ ಉಳಿಯುತ್ತವೆ. ಆಗ ಶುಚಿತ್ವಕ್ಕೆ ಕಾರಣರಾದವರು ಸದಾ ಅಶುಚಿ

ಗಳಾಗಿಯೋ ಬಾಳುತ್ತಾರೆ ಮತ್ತು ಅದೊಂದು ಸಹಜ ಸಂಗತಿ ಎಂದು ಸ್ವೀಕೃತವಾಗುತ್ತದೆ. ಹಾಗಾಗಿ ಶೋಷಣೆ ಎಂದರೆ ಅದೊಂದು ಸಾಮಾಜಿಕ, ಆರ್ಥಿಕ, ರಾಜಕೀಯ, ಚಾರಿತ್ರಿಕ ಮತ್ತು ಜೈವಿಕ ಪರಿಕಲ್ಪನೆಗಳ ಒಟ್ಟು ಮೊತ್ತ ಎಂಬ ಎಚ್ಚರಿಕೆಯಿಂದ ನಾವೀಗ ಪ್ರಾರಂಭಿಸಬೇಕಾಗಿದೆ.

●

'0' ಯಾದಳು

ನಿನ್ನ ಪಂಚಾಂಗ ನನಗೆ ಗೊತ್ತಿಲ್ಲವೇ
ಅಂದುದಕ್ಕೆ ಅವಳ ಮುಖದಲ್ಲಿ
ಸಾವಿರ ಸಾವಿರ ಸಾಗರದ ಅಲೆಗಳೆದ್ದು
ಅಪ್ಪಳಿಸಿ
ತೆಪ್ಪಗಾದುವು, ಸತ್ತು ಹುಟ್ಟಿದವು,
ಮತ್ತೆ ನವ್ಯ ಚಿತ್ರದ ರೇಖಾ ವಿನ್ಯಾಸಗಳು.

ಮೂಡಿ ಮಾಯವಾದುವು
ಸೊನ್ನೆಯಾದಳು, ಮತ್ತೆ ಸಾವಿರ ಸೊನ್ನೆಗಳು
ಉರುಳಿಹೋದರೂ ಒಂದೂ ಪೂರ್ಣ ಅಂಕೆ ಬರದ
ಮೀಟರ್ ಬೋರ್ಡಿನ ಹಾಗೆ
ಮಂಜು ಆರದ ಮುನ್ನ ನೂರಾರು ಪಾರಿಜಾತದ ಹೂವು
ಅವಳ ಎದೆಯುಬ್ಬಿ ಮುದ್ದಿಸಿದುವು
ಗುದ್ದಲು ತಿಂದು ಮುದ್ದೆಯಾದುವು
ಘಾಟು ಸೀದು ಕರುಕಾಗಿ ಹೋದವು
ಎಳೆ ಬಸಿರಿ ಬಿಸಿಲ ಆಪ್ಯಾಯಮಾನದಲಿ
ನೊಂದು ನರಳಿದ ಹಾಗೆ
ಕಟ್ಟೆಯ ಪಕ್ಕ ಕಾದು ಕುಳಿತ ಕೊಕ್ಕರೆಗಳೆಲ್ಲ
ಬುರ್ರನೆ ಹಾರಿಹೋದುವು
ಮುಖದ ತುಂಬ ಕೆಂಪು ತ್ರಿಕೋನಗಳು
ಮೂಡಿ ನಗುತ್ತಿದ್ದುವು.

— ಬಿ. ಎಸ್. ನಾಗರತ್ನಕುಮಾರಿ

ಬಿ.ಎಸ್. ನಾಗರತ್ನಕುಮಾರಿ, ಎಲ್-65, ಕ್ವಾರ್ಟರ್ಸ್, ಮಾನಸಗಂಗೋತ್ರಿ, ಮೈಸೂರು-6

ಅಡಿಗರ ಕಾವ್ಯದ ಪರಿಭಾವನೆ

— ವೀ. ಚಿಕ್ಕವೀರಯ್ಯ

ಭಾಗ 1

ನಾನು ಹೈಸ್ಕೂಲಿನಲ್ಲಿ 1945–48 ರಲ್ಲಿ ಓದುವಾಗ ಎಸ್.ಎಸ್.ಎಲ್.ಸಿ. ಪಠ್ಯ ಪುಸ್ತಕದಲ್ಲಿ ಬೇಂದ್ರೆಯವರ 'ಯುಗಾದಿ,' ಪುತಿನ ಅವರ 'ಹೊನಲ ಹಾಡು' ಕವಿತೆಗಳನ್ನು ಇಟ್ಟಿದ್ದರು. ಆ ಎರಡು ಕವಿತೆಗಳೂ ನವೋದಯ ಕಾವ್ಯದಲ್ಲಿ ಬಂದ ಅತ್ಯಂತ ಚೆಲುವಾದ ಭಾವಗೀತಗಳೆಂದು ನಾನು ಈಗಲೂ ಭಾವಿಸುವೆ. ಅದಕ್ಕೂ ಮೊದಲು ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ 'ತುತ್ತೂರಿ ಹಾವೊಳು ಹೂವೆ, ಹುತ್ತರಿಯ ಹಾಡು, ತೆಂಕಣಗಾಳಿಯಾಟ, ಉದಯರಾಗ ಕವಿತೆಗಳನ್ನು ಎಳವೆಯಲ್ಲಿ ಓದಿದ್ದೆ. ಅವುಗಳ ಮೋಹಕತೆ ಇಂದಿಗೂ ಮಾಸಿಲ್ಲ. ಇಂಟರ್ ಮೀಡಿಯಟ್ ಹಂತಕ್ಕೆ ಹೋದಾಗ ಕನ್ನಡ ಸಾಹಿತ್ಯ ಹಾಗೂ ಕವಿತೆಯ ಹುಚ್ಚು ಹತ್ತಿ ಕೈಗೆ ಸಿಕ್ಕಿದ್ದನ್ನೆಲ್ಲ ಓದ ತೊಡಗಿದ್ದೆ. ಈ ವೇಳೆಗೆ ತುಮಕೂರಿನ ಜನರಲ್ ಏಜನ್ಸಿ ಪ್ರೆಸ್ಸಿನ ಜಿ. ಪ್ರಹ್ಲಾದ ರಾಯರ ಪರಿಚಯವಾಗಿ ಅಡಿಗರ ಭಾವತರಂಗ ತುಮಕೂರಿನ ಪಾಂಡುರಂಗ ಪ್ರೆಸ್ಸಿನಲ್ಲಿ ಅಚ್ಚಾದ ಸಂಗತಿ ತಿಳಿಯಿತು. ಆ ವೇಳೆಗೆ ಬಹುಶಃ ಅಡಿಗರು ಎಂಟು ತಿಂಗಳ ಕಾಲ ತುಮಕೂರಿನ ಆರ್ಯನ್ ಹೈಸ್ಕೂಲ್‌ನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಅವಧಿಯೆಂದು ಕಾಣುತ್ತದೆ, ಭಾವತರಂಗದ ಅಚ್ಚು ಕೆಲವು ಕರಡು ಪ್ರತಿಗಳನ್ನು ನನ್ನ ಕೈಗೆ ಪ್ರಹ್ಲಾದ ರಾಯರು ಕೊಟ್ಟರು. ನನ್ನ ಕಲ್ಲಾಗು ಕಲ್ಲಾಗು, ನಿನಗೆ ನೀನೇ ಗೆಳೆಯ ಮುಂತಾದ ಕವಿತೆಗಳನ್ನು ಮೊದಲ ಬಾರಿಗೆ ನಾನು ಓದಿದೆನು. ಅನಂತರ ಅವರ ಭಾವತರಂಗ, ಕಟ್ಟುವೆವು ನಾವು, ಸಂಕಲನಗಳು ನನಗೆ ಸಿಕ್ಕಿ ಅವುಗಳನ್ನು ಕೆಲವು ಸಲ ತಿರುಗಿ ಹಾಕಿದ್ದೆ. ಹೀಗಾಗಿ ಅಡಿಗರ ಕಾವ್ಯ ನನ್ನ ಹೃದಯದ ಆಳಕ್ಕೆ ಇಳಿಯಲು ಶುರುವಾಯಿತು. ಮೋಹನ ಮುರಲಿ ಎಂಬ ಕವಿತೆಯನ್ನು ತುಮಕೂರಿನಲ್ಲಿದ್ದಾಗಲೇ ಬರೆದೆನೆಂದು ಸ್ವತಃ ಅಡಿಗರೇ ಇಲ್ಲಿಗೆ ಬಂದಾಗೊಮ್ಮೆ ನನಗೆ ತಿಳಿಸಿದ್ದರು.

ನಡೆದು ಬಂದ ದಾರಿಯ ಎಷ್ಟೋ ಕವಿತೆಗಳು ಯುಗಾಂತರ ಎನ್ನುವ ಬೆಂಗಳೂರಿನ ಮಾಸಿಕದಲ್ಲಿ ಅಚ್ಚಾಗಿದ್ದುವು. ಅಲ್ಲಿಯೇ ಅವುಗಳನ್ನು ಓದಿದ ನೆನಪು. 1958–60ರ ಹೊತ್ತಿಗೆ ಚಂಡೆ ಮದ್ದಳೆಯನ್ನು ಓದಿದೆ. ಭೂಮಿಗೀತ ಸಂಕಲನವನ್ನು ನಾನೂ ಪ್ರೊ|| ಎಚ್.ಜಿ. ಸಣ್ಣಗುಡ್ಡಯ್ಯನವರೂ ತರಿಸಿ ಒಟ್ಟಿಗೆ ಓದಿದೆವು. 1960ರ ಹೊತ್ತಿಗೆ ನನ್ನ ಮೊದಲ ಸಂಕಲನ, ಪ್ರಣಯ ಚೈತ್ರಕ್ಕೆ ಮುನ್ನುಡಿ ಕೇಳಲು ಆಗ

ವೀ. ಚಿಕ್ಕವೀರಯ್ಯ, ಚಿಕ್ಕವೀರಯ್ಯನ ಪಾಳ್ಯ, ತುಮಕೂರು

ಮೈಸೂರಿನ ಸರಸ್ವತಿಪುರದಲ್ಲಿ ವಾಸವಾಗಿದ್ದ ಅಡಿಗರ ಮನೆಗೆ ಹೋಗಿದ್ದೆವು. ನಮ್ಮೊಡನೆ ಚೆನ್ನಾಗಿ ಮಾತಾಡಿ ನಮ್ಮನ್ನು ವಿಚಾರಿಸಿಕೊಂಡ ಅಡಿಗರು ತಮಗೆ ಬರೆಯಲು ಸಾಕಷ್ಟು ಕಾಲಾವಕಾಶ ಬೇಕೆಂದೂ ಪ್ರಾಮಾಣಿಕವಾಗಿ ಅನ್ನಿಸಿದ್ದನ್ನು ಮಾತ್ರ ಬರೆಯುವುದಾಗಿಯೂ ಒಪ್ಪಿಕೊಂಡರು. ಅನಂತಮೂರ್ತಿಯವರು ತಮ್ಮಲ್ಲಿಗೆ ಬರುವುದಾಗಿ ಹೇಳಿ ನಮ್ಮನ್ನು ಅವರೆಗೆ ಇರಿಸಿಕೊಂಡರು.

ಅಡಿಗರ ವ್ಯಕ್ತಿತ್ವ, ಮಾತುಗಾರಿಕೆ, ಕಾವ್ಯ ಅವರದೇ ಆಗ ವಿಶೇಷ ವರ್ಚಸ್ಸಿನಿಂದ ಕಂಗೊಳಿಸುವುದನ್ನು ಅವರ ಭೇಟಿಯಿಂದಲೂ ಅವರ ಕಾವ್ಯಾಭ್ಯಾಸದ ಸತತ ಓದಿನಿಂದಲೂ ನಾನು ಕಂಡುಕೊಂಡು ಕನ್ನಡ ಕಾವ್ಯಕ್ಕೆ ಇನ್ನಿಲ್ಲದ ಭಾಷೆಯ ವಿಜಿಗೀಷು ಚಿಕಿತ್ಸೆಯನ್ನು ಕೊಟ್ಟು ಅವರು ನನಗೆ ಪರಮ ಪ್ರಿಯರಾದದ್ದೇ ಅಲ್ಲದೆ ಬೇಂದ್ರೆಯವರಂತೆಯೇ ನನ್ನ ಮೇಲೆ ಅಗಾಧವಾದ ಪರಿಣಾಮ ಬೀರಿದ್ದನ್ನು ನಾನು ಯಾವಜ್ಜೀವಿತವೂ ಕೃತಜ್ಞತೆಯಿಂದ ನೆನೆಯುತ್ತೇನೆ. ನನ್ನ ಕಾವ್ಯ ಜೀವನದಲ್ಲಿ ಬಹುವಾಗಿ ಕಾಡಿದ ನನಗೆ ಕಾವ್ಯ ರಚನಾ ಕೌಶಲ್ಯವನ್ನು ಕಲಿಸಿಕೊಟ್ಟ ಈ ಇಬ್ಬರು ಹಿರಿಯ ಕವಿಗಳಲ್ಲಿ ಅಡಿಗರು ಬಹಳ ಮುಖ್ಯರಾದವರು. ಅವರ ಕಾವ್ಯದಿಂದ ದೊರಕಿದ ಸಂತೋಷ ಸಮ್ಮಿಡಿತಗಳು ಬದುಕಿನುದ್ದಕ್ಕೂ ದಾರಿದೀಪವಾಗಿ ನಡೆಸುವಂಥವು. ಈ ನಡುವೆ ನಾನು ಹಲವು ಬಾರಿ ಅವರನ್ನು ಅವರ ಮನೆಯಲ್ಲಿ ಸಂಧಿಸಿ ಮಾತಾಡಿದ್ದೇನೆ. ಅವರ ಸಾಕ್ಷಿಗೆ ಚಂದಾದಾರನಾಗಿ ಎಲ್ಲ ಸಂಚಿಕೆಗಳನ್ನು ತರಿಸಿ ಓದಿದ್ದುಂಟು. ತುಮಕೂರು ನಗರಕ್ಕೆ ಅವರನ್ನು ಹಲವಾರು ಬಾರಿ ಸಭೆ ಸಮಾರಂಭಗಳಿಗೆ ಕರೆಸಿ ಅವರ ಮಾತುಗಳನ್ನು ಆಸಕ್ತಿಯಿಂದ ಕೇಳಿದ್ದಿದೆ. ಅವರಿಗೆ ಪತ್ರ ಬರೆದು ಅವರಿಂದ ಉತ್ತರ ಬಂದು ಹೀಗೆ ಅವರಿಗೆ ನಾನು ನನಗೆ ಅವರು ಹತ್ತಿರವಾಗಿ ಆ ಎತ್ತರದ ಕವಿಯ ಜೊತೆಗಿನ ಒಡನಾಟವನ್ನು ಮರೆಯುವಂತೆಯೇ ಇಲ್ಲ.

ಅವರ ಕವಿತೆಯಲ್ಲಿನ ಆಪ್ತತೆ, ಆರ್ದ್ರತೆ, ಅಂತಃ ಪ್ರವಾಹವಾಗಿ ಹರಿದು ಬರುವ ನೋವು ನಲಿವುಗಳ ಪ್ರತಿಮಾ ವಿಧಾನವನ್ನು ಈ ಯುಗದ ಪುಣ್ಯವೆಂದು ನಾನು ಭಾವಿಸುವೆ. ಪಂಪ ಆದ ಮೇಲೆ ಶಿಲ್ಪದಲ್ಲಿ ಅದೇ ಬಗೆಯ ನಾವೀನ್ಯದ ಅನನ್ಯ ಬಂಧವನ್ನು ತೋರಿದ ಶ್ರೇಯಸ್ಸು ಅವರ ಕಾವ್ಯಕ್ಕಿದೆ. ಸಾಹಿತ್ಯದ ಎಲ್ಲ ಪ್ರಕಾರಗಳ ಮೇಲೂ ಪಂಪನ ಹಾಗೆಯೇ ಪ್ರಭಾವ ಬೀರಿದ ಅಖಂಡ ವರ್ಚಸ್ಸು ಅಡಿಗರದು. ಸುಲಭವೆನ್ನುವ ಸರಳೀತ ಸ್ವಭಾವ ಅವರ ಕಾವ್ಯಕ್ಕಿಲ್ಲ. ಚಿಂತನೆಯ ಸಮೀಕರಣ ಗುಣದಿಂದಲೂ ವಿಮಂಥನೆಗೊಳಗಾದ ಮನುಷ್ಯನ ಅನಂತ ನೋವಿನ ಮಿಡಿತಗಳಿಂದಲೂ ಕನ್ನಡ ಕಾವ್ಯಕ್ಕೆ ಕಾಯಕಲ್ಪ ಮಾಡುವ ಗುಣವಿರುವುದನ್ನು ಸಹೃದಯ ಅವರ ಕಾವ್ಯದಲ್ಲಿ ಕಾಣುತ್ತಾನೆ. ಆ ಕಾವ್ಯದ ಶ್ರದ್ಧಾಪೂರ್ವಕವಾದ ಓದಿನಿಂದ ಉತ್ತಮ ಅಭಿರುಚಿ

ಯುಂಟಾದದ್ದೇ ಅಲ್ಲದೆ ಉತ್ತಮ ಮನಃಸಂಸ್ಕಾರವೂ ಆಗಿ ಕಾವ್ಯ ರಚನೆಗೂ ಪ್ರೇ
ಪಿಸಿದ್ದನ್ನು ನಾನು ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ.

ನನ್ನ ಅವರ ಸಂಬಂಧ ಕೂಡ ಆತ್ಮೀಯವಾದದ್ದು. ಅವರ 70ನೇ ವರ್ಷ
ಹುಟ್ಟು ಹಬ್ಬವನ್ನು ಬೆಂಗಳೂರಿನ "ರಂಗ ನಿರಂತ" ನಾಟಕ ತಂಡದವ
11-3-1989 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಆಚರಿಸಿ ಕವಿಯನ್ನು ಗೌರವಿಸು
ಸಮಾರಂಭ ಏರ್ಪಡಿಸಿದ್ದರು. ಅಭಿನಂದನಾ ಭಾಷಣ ಮಾಡಿ ಕವಿಗೆ ಗೌರವಾರ್ಪ
ಮಾಡುವ ಕೆಲಸ ಸುದೈವದಿಂದ ನನ್ನ ಪಾಲಿಗೆ ಬಂದಿದ್ದಿತು. ಆ ವೇಳೆಗೆ ನಾನ
ಅವರನ್ನು ಕಂಡು 3-4 ವರ್ಷಗಳೇ ಆಗಿದ್ದುವು. ಅಂದು ಅವರು ತೋರಿದ ಅಂತ
ಕರಣ ಹೃದಯ ಸ್ಪರ್ಶಿ ನಡವಳಿಕೆಗಳು ಎಂದೂ ನನ್ನ ಸ್ಮರಣೆಯಿಂದ ಮರೆಯಾಗದಂಥವು

ನನ್ನ ಜೀವನದುದ್ದಕ್ಕೂ ಜೊತೆಯಾಗಿದ್ದವನಯ್ಯಾ, ನೀನು ಈ ಅನಾರೋಗ್ಯ
ನನ್ನ ಸ್ಥಿತಿಯಲ್ಲಿ ಬಾರದೆ ಹೋದರೆ ನೋವಾಗುತ್ತದೆ. ಬೆಂಗಳೂರಿಗೆ ಬಂದಾಗಲೆ
ಬಂದು ಮಾತಾಡಿಸಿಕೊಂಡು ಹೋಗು. ಎಷ್ಟೋ ಸಮಾಧಾನವಾಗುತ್ತದೆ" ಎಂದ
ಕೈಹಿಡಿದುಕೊಂಡು ಹೇಳಿದರು. ಅವರ ಕಾವ್ಯ ಹೇಗೋ ಹಾಗೆಯೇ ಅವ
ನಡವಳಿಕೆಯೂ ತುಂಬ ಆತ್ಮೀಯವಾದದ್ದು.

ಭಾಗ 2

ಬುದ್ಧನ ಅವಸಾನ ಕಾಲದಲ್ಲಿ ಆತನ ಆಪ್ತ ಶಿಷ್ಯನಾದ ಆನಂದನು ತನಗೆ ಅಂತಿ
ಸಂದೇಶವೇನೆಂದು ಕೇಳಿದನಂತೆ. ಅವಕ್ಕೆ ಬುದ್ಧನು ಇರುಳೆಲ್ಲ ನೊಂದು ಸೂರ್ಯ
ಬೆಳಕಿಗಾಗಿ ಪರಿತಪಿಸುವ ಭೂಮಿಯಂತೆ ನಿನ್ನ ಸ್ಥಿತಿಯಾಗದಿರಲಿ. ಸ್ವಯಂಪ್ರಕಾ
ವನ್ನು ಬೆಳೆಸಿಕೊ ಎಂದು ಹೇಳಿದನಂತೆ. ಬೇರೆಯವರ ಸಂದೇಶ ಉಪದೇಶಗಳಿಗಾ
ಕಾಯದಿರಲು ಸೂಚಿಸಿದನಂತೆ. ಹೀಗೆ ನಾನು ಎಲ್ಲೋ ಓದಿದ ಅಥವಾ ಕೇಳಿದ ನೆನಪು

ಅತ್ತಾನೊ ಅತ್ತ ದೀಪೊಭವ
(ನೀನೇ ನಿನ್ನ ದೀಪವಾಗು)

ಗೋಪಾಲಕೃಷ್ಣ ಅಡಿಗರ ಕಾವ್ಯ ಕೂಡ ಬುದ್ಧದೇವನ ಮಾತಿಗನುಗುಣವಾ
ಸ್ವಯಂ ಪ್ರಕಾಶವನ್ನು ಆದಿಯಿಂದ ಪಡೆದುಕೊಳ್ಳಲು ಹಂಬಲಿಸಿದ ಕಾವ್ಯ. ಅವ
ಮೊದಲ ಸಂಕಲನ ಭಾವತರಂಗದ ಮೊದಲ ಕವಿತೆ `ನನ್ನ ನುಡಿಯಲ್ಲಿ' ಈ ಹಂಬ
ಹೆಪ್ಪುಗಟ್ಟಿದ ಪ್ರತಿಮೆಗಳೇ ಬರುತ್ತವೆ. ಬಗೆಯ ಬಳಗನು ತೆಗೆದು ಬಣ್ಣ ಬಣ್ಣದ
ಬಣ್ಣಿಸುವ ಪನ್ನತಿಕೆ (ಸಾಮರ್ಥ್ಯ)ಗಾಗಿ ಕವಿ ಚಡಪಡಿಸುತ್ತಾನೆ. ಆ 'ನನ್ನ ನುಡಿ
ಕವಿತೆಯೇ ಅಡಿಗರು ಬರೆದ ಮೊದಲ ಕವಿತೆಯಲ್ಲದೆ ಇರಬಹುದು. ಸಂಕಲನ ಅಚ್ಚಿ

ಸಿದ್ಧಪಡಿಸುವ ಹೊತ್ತಿಗೆ ರಚಿಸಿದ್ದಿರಬೇಕು. ಅದು ಸಾನೆಟ್ಟಿನ ಬಂಧದಲ್ಲಿದೆ. ಸ್ವಯಂ ಪ್ರಕಾಶವಿರದ ವಸ್ತು ಪ್ರತಿಮೆಗಳ ಸಾಲು ಸಾಲೆ ನೆನೆದು ತನ್ನ ಕಾವ್ಯವೂ ಹೀಗೇ ಆಗಿದೆಯಲ್ಲಾ ಎಂಬ ಆಳವಾದ ಕೊರಗಿನಲ್ಲಿ ಅದ್ದಿ ತೆಗೆದ ಆಗಿನ ತನ್ನ ಕಾವ್ಯದ ಸ್ಥಿತಿಯನ್ನು ಅಲ್ಲಿ ಹಿಡಿದಿಡಲಾಗಿದೆ.

ಇಲ್ಲಿನ ಯಾವ ಸಾಲೂ ಉಪಮೆಯಾಗಿ ಬರದೆ ಪ್ರತಿಮೆಗಳಾಗಿಯೇ ಒಡಮೂಡಿ 'ನನ್ನ ನುಡಿ' ಎಂಬ ಪ್ರತೀಕದ ಅರ್ಥಪೋಷಣೆಗೆ ದುಡಿಯುವುದು ಕಂಡು ಬರುತ್ತದೆ, ಮುಂದೆ ಅಡಿಗರು ಕಟ್ಟಲಿರುವ ಶ್ರೇಷ್ಠ ಕಾವ್ಯದ ಎಲ್ಲ ನಮೂನೆಗಳೂ 'ನನ್ನ ನುಡಿ' ಎನ್ನುವ ಮೊದಲ ಕವಿತೆಯಲ್ಲಿಯೇ ಮೊಗದೋರಿರುವುದು ಹೆಮ್ಮೆ ಮತ್ತು ಸೋಜಿಗದ ಸಂಗತಿಯಾಗಿದೆ. ಅಲ್ಲದೆ ಜಗತ್ತಿನ ಯಾವ ಕವಿ ಮೊದಲ ಸಂಕಲನದ ಮೊದಲ ಕವಿತೆಯಲ್ಲೇ ತನ್ನ ಕಾವ್ಯದ ಕೊರತೆಗಳನ್ನು ಕಂಡು ಕೊರಗಿದ್ದಾನೊ ನನಗೆ ತಿಳಿಯದು, ಆದರೆ ಅಡಿಗರಲ್ಲಿ ಹೀಗಾಗಿದೆ. ಅಡಿಗರಿಗಿರುವ ನಿರೀಕ್ಷಣಾ ಸಾಮರ್ಥ್ಯ ಹೆಚ್ಚಿನದು, ಮುನ್ನೋಟ ಅನ್ಯತ್ರ ಕಾಣಸಿಗದಷ್ಟು ಅಪರೂಪವಾದುದು.

1952–53ರ ಹೊತ್ತಿಗೇ ಸ್ವಾತಂತ್ರ್ಯ ಬಂದ ನಾಲ್ಕೈದು ವರ್ಷಗಳ ಒಳಗೇ ನಮ್ಮ ನಗರಗಳೆಲ್ಲ ಗೊಂದಲ ಪುರಗಳಾಗುವುದನ್ನು ಅವರು ಕಾವ್ಯದಲ್ಲಿ ಸೃಷ್ಟಿಸಿ ತೋರಿಸಿದರು. ಅದಿನ್ನು ಆರಂಭಿಕಾವಸ್ಥೆ, ನಮ್ಮ ಭಾರತದ ನಗರಗಳು ಅಡಿಗರಿಗೆ ಆಗಲೇ ಗೊಂದಲಪುರಗಳಾಗಿ ತೋರತೊಡಗಿದ್ದುವು. ಕಾಳಿದಾಸ ತನ್ನ ಪ್ರತಿಭಾ ಸಾಮರ್ಥ್ಯದಿಂದ ಮೇಘವನ್ನು ಧೂತನನ್ನಾಗಿ ಪರಿಭಾವಿಸಿ "ಮೇಘಧೂತ" ಕಾವ್ಯವನ್ನು ಸೃಷ್ಟಿಸಿದಂತೆ ಅಡಿಗರು "ಹಿಮಗಿರಿಯ ಕಂದರ" ಮತ್ತು "ಗೊಂದಲಪುರ"ಗಳನ್ನು ನಿರ್ಮಿಸಿಬಿಟ್ಟರು. ಈ ರೀತಿ ಅಡಿಗರ ಕಾವ್ಯ ಕಾಲಜ್ಞಾನದಂತಹ ಸತ್ವಗುಣವನ್ನು ಪಡೆದುಕೊಂಡಿದೆ.

'ನೆಹರೂ ನಿವೃತ್ತರಾಗುವುದಿಲ್ಲ' ಎನ್ನುವ ಕವನದಲ್ಲಿ "ನೆಹರು ನಿವೃತ್ತರಾಗುವುದಿಲ್ಲ–ಶೇಕಡಾ ಹತ್ತಕ್ಕೆ ಮೋಸವಿಲ್ಲ, ಯಾವ ಬಂದಳಿಕೆಗೂ ಶಂಕೆ ಬೇಡ" ಎಂದು ಪ್ರತಿಪಾದಿಸಿದರು. ಅಂದು ಅದು ಕೆಲವರಿಗೆ ಕಸಿವಿಸಿ ಉಂಟು ಮಾಡಿದರೂ ಇಂದು ಅದು ಎಂತಹ ಐನು ಸತ್ಯದ ಸಂಗತಿಯೆನ್ನುವುದು ಎಲ್ಲರಿಗೂ ಮನವರಿಕೆಯಾಗಿದೆ, ಶೇಕಡಾ ಹತ್ತರ ಪ್ರಮಾಣ ನೆಹರೂರವರ ಮಗಳ ಕಾಲದಲ್ಲಿ 7–8 ಪರ್ಸೆಂಟಿಗಿಳಿದದ್ದು ಮೊಮ್ಮಗನ ಕಾಲಕ್ಕೆ ಇನ್ನೂ ಕೆಳಕ್ಕೆ ಬಂತು. ರಾಷ್ಟ್ರದ ಅಭಿವೃದ್ಧಿಯ ಹೆಚ್ಚಳವನ್ನು ಗಮನಿಸಿದ ಯಾವುದೇ ಸೂಕ್ಷ್ಮಜ್ಞನಿಗೆ ಅಡಿಗರು ಹೇಳಿದ ಸತ್ಯದ ಒಳಗುಟ್ಟು ಸ್ಪಷ್ಟ.

ಅಡಿಗರದ್ದು ಅಪಾರವಾದ ಆರ್ದ್ರ ಹೃದಯ. ಕಲ್ಲಿಗಿಲ್ಲ ಮುಳ್ಳಿಗಿಲ್ಲ ಹೂವಿಗೇಕೆ ಗೌರವ ಎಂದು ಹೂವನ್ನು ಹೊಸಕಿಹಾಕಬಾರದಾಗಿ ಸಮಾಜ ಭೈರವನಲ್ಲಿ ಅವರು ಮೊರೆಯಿಡುತ್ತಾರೆ, "ಒಂದಕ್ಕೂ ಪೂರ್ಣತೆಯ ಪುಣ್ಯವಿಲ್ಲ"ದ್ದನ್ನು ಕಂಡ ಅವರ

ಹೃದಯಾದ ಕೊರಗೂ ಹೇಳತೀರದು. ಇರವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವ ಬದುಕಿನ ದ್ವಂದ್ವ ಅವರ ಕಾವ್ಯದ ಕೇಂದ್ರ. ಕಳೆದುಹೋದ ಜೀವರತ್ನ (ಘನರತ್ನ) ವನ್ನು ಶೋಧಿಸುವುದೇ ಅವರ ಕಾವ್ಯದ ಪ್ರಮುಖ ಕಾಳಜಿ.

ಹೆಳವನ ಹೆಗಲ ಮೇಲೊಬ್ಬ ಕುರುಡ ಕೂತಿದ್ದಾನೆ
ದಾರಿ ಸಾಗುವುದೆಂತೂ ನೋಡಬೇಕು

ಇದನ್ನು ಓದಿದ ಸಹೃದಯ ಜೀವನದ ನಿಷ್ಠುರ ಸತ್ಯವನ್ನು ಕಾವ್ಯ ಪ್ರತಿಮೆಯಲ್ಲಿ ಎರಕ ಹೊಯ್ಯುವಾಗ ಕವಿ ತೋರುವ ಇಲ್ಲಿನ ಔಚಿತ್ಯ ಕೌಶಲಕ್ಕೆ ಅಚ್ಚರಿ ಪಡುತ್ತಾನೆ. ಮಾರ್ಗ ಕ್ರಮಿಸಲು ಹೊರಟಿರುವವನು. ತೊಡೆಯಿಲ್ಲದ ಹೆಳವ ಆತನ ಹೆಗಲೇರಿ ಮಾರ್ಗದರ್ಶನ ಮಾಡಿಸಲು ಕುಳಿತಿರುವವನು ಕುರುಡ. ಇದು ಇಂದಿನ ವ್ಯಕ್ತಿ, ನಾಡು, ರಾಷ್ಟ್ರ, ವಿಶ್ವದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳೆಲ್ಲಕ್ಕೂ ಕನ್ನಡಿ ಹಿಡಿಯುವ ಪ್ರತಿಮೆಯಾಗಿದೆ. ಹೀಗೆ ಒಂದೇ ಒಂದು ಪ್ರತಿಮೆಯ ಮೂಲಕ ಹಲವಾರು ಸ್ತರದ ಅರ್ಥ ಪರಂಪರೆಯನ್ನು ಸೃಷ್ಟಿಸಿಬಿಡುವುದು ಈ ಬಗೆಯ ಪ್ರತಿಮೆಗಳ ಗುಣ. ಈ ಗುಣದಲ್ಲಿ ಅಡಿಗರು ಬಹಳ ನಿಷ್ಣಾತರು.

ಅಡಿಗರಂಥ ಕವಿ ನಮ್ಮ ಕಾವ್ಯಲೋಕದಲ್ಲಿ ಕಾಣಿಸಿಕೊಳ್ಳದೆ ಹೋಗಿದ್ದರೆ ನಮ್ಮ ಕಾವ್ಯ ಈಗ ಇರುವಷ್ಟು ಸಾರ್ಥಕ ರೀತಿಯಲ್ಲಿ ತನ್ನ ಸತ್ಯವನ್ನು ಹೊಮ್ಮಿಸುವುದು ಆಗುತ್ತಿರಲಿಲ್ಲವೇನೊ. ಅವರು ನವೋದಯದ ಮಾರ್ಗದಿಂದ ಸಿಡಿದು ಬೇರೆ ರೀತಿಯಲ್ಲಿ ಕಾವ್ಯ ಬರೆಯಲು ಶುರುವು ಮಾಡುವ ಹೊತ್ತಿಗೆ ಕನ್ನಡದಲ್ಲಿ ಕಾವ್ಯ ಬರೆಯುವುದು ಸುಲಭವೆನ್ನಿಸಿಬಿಟ್ಟಿತ್ತು. ಈ ಮಾದರಿಗೆ ಇತರೆಯವರ ಕಾವ್ಯವನ್ನು ಪರಿಶೀಲಿಸಬಹುದು. ಅಂತಹ ಹೊತ್ತಿನಲ್ಲಿ ಅಡಿಗರು ತನ್ನ ವ್ಯಕ್ತಿತ್ವದಲ್ಲೇ ಹುದುಗಿದ್ದ ಮೂಲಸತ್ವದ ಅನ್ವೇಷಣೆಯಿಂದ ಜಗತ್ತಿನ ದುಃಖ ದುಮ್ಮಾನಗಳ ಚಿಂತನೆಗೆ ತನ್ನ ಹೃದಯವನ್ನು ಒಡ್ಡಿಕೊಂಡು ವಿಷಾದಪೂರ್ಣ ಧೀರತೆಯಿಂದ ನಮ್ಮ ಕಾವ್ಯಕ್ಕೆ ಹೊಸ ಬಗೆಯ ಸತ್ಯಸಂಪನ್ನತೆಗಳನ್ನು ತಂದುಕೊಡಲು ಶ್ರಮಿಸಿದರು. ಅವರ ಕಾವ್ಯ ಚರ್ವಿತ ಚರ್ವಣವಲ್ಲ. ಸುಲಭೀಕರಣಕ್ಕೆ ವಶವಾಗುವ ಗುಣ ಕೂಡ ಅದಕ್ಕಿಲ್ಲ. ಕಾವ್ಯ ಕ್ಲಿಷ್ಟವಾಗಿದ್ದರೆ ಮಾತ್ರ ಶ್ರೇಷ್ಠ ಎಂದು ನನ್ನ ಅಭಿಮತವಲ್ಲ. ನಮ್ಮ ಸನ್ನಿವೇಶ ಹಾಗೂ ಜಗತ್ತಿನ ಇತರೆಡೆಗಳಲ್ಲಿ ಘಟಿಸುತ್ತಿದ್ದ ಕಾವ್ಯ ಸನ್ನಿವೇಶಗಳ ಹಿನ್ನೆಲೆಯಲ್ಲಿ ರಚಿತವಾದ ಅಡಿಗರ ಕಾವ್ಯದ ಜಟಿಲತೆ ಅರ್ಥಪೂರ್ಣವಾದದ್ದೆಂದು ನನ್ನ ಅಭಿಮತ. ಏಕಾಗ್ರತೆಯಿಂದ ಕಾವ್ಯ ಕಟ್ಟುವ ಸಾಧಕನ ಕಸುವನ್ನು ಮೈಗೂಡಿಸಿಕೊಂಡಾಗ ಮೂಡಿಬಂದದ್ದು ಅವರ ಕವಿತೆ. ಈ ಸಕಾಲಿಕವಾದ ಎಚ್ಚರ, ಪ್ರತಿಮೆಗಳ ಮೂಲಕವೇ ಮಾತಾಡಬೇಕೆನ್ನುವ ಸಂಕಲ್ಪ, ಇವುಗಳಿಂದಾಗಿ ಅವರ ಕಾವ್ಯ ಕಠಿ

ವದದ್ದೂ ನಿಜ. ಆದರೆ ಅದರಿಂದ ಕನ್ನಡಕ್ಕೆ ಒದಗಿಬಂದ ತೇಜಸ್ಸು ಅಷ್ಟಿಷ್ಟಲ್ಲ. ದು ಕನ್ನಡಕ್ಕೇ ದಕ್ಕಿದ ವಿಶಿಷ್ಟ ತೇಜಸ್ಸೆಂದರೂ ತಡೆದೀತು.

ಪಂಪನಿಂದ ಹಿಡಿದು ವಚನಕಾರರು, ಕುಮಾರವ್ಯಾಸ, ಬೇಂದ್ರೆ, ಅಡಿಗ ಈ ರಂಪರೆ ಬಹಳ ಬಲಯುತವಾದದ್ದು. ಬಡಪೆಟ್ಟಿನ ಡೋಲು ಬಜಾವಣೆ ಇಲ್ಲಿ ಲ್ಲೇವುದಿಲ್ಲ. ತನ್ನ ಕಾಲದ ಸಂಸ್ಕೃತಿಯ ತಿರುಳಾದ ಜೀವನ ದರ್ಶನವನ್ನು ಸಾಮುತ್ತಾಗಿ ಕಾವ್ಯ ಪ್ರತಿಮೆಗಳಲ್ಲಿ ಕಡೆದುಕೊಡುವ ಕೆಲಸವನ್ನು ನಮ್ಮ ಪರಂಪರೆ ಬದ್ಧಕ್ಕೂ ಮಾಡಿಕೊಂಡು ಬಂದಿದೆ. ಈ ಸರಣಿಯಲ್ಲಿ ಬಂದ ಅಡಿಗರು ನಮ್ಮ ಕಾವ್ಯಕ್ಕೆ ಪಂಪನಂತೆ ಹೊಸತನವನ್ನೂ ವಚನಕಾರರಂತೆ ಸಂಗ್ರಹ ಗುಣವನ್ನೂ ಜೊತೆಗೆ ಸಾವ ತೀವ್ರತೆಯನ್ನೂ ತಂದುಕೊಟ್ಟದ್ದೇ ಅಲ್ಲದೆ ಕಾವ್ಯದಲ್ಲಿ ಕಳೆದುಹೋಗುತ್ತಿದ್ದ ಪ್ರಬುದ್ಧ ಧ್ವನಿಯನ್ನು ಮತ್ತೆ ಮರಳಿಸಿಕೊಟ್ಟರು.

"ಗೂನೆ ಬಾಗಿ ಬಾಳಿ ಜೀವನ್ಮುಕ್ತ ಹಳಸುತಿದೆ
ಹಿಂದು ಹಿಳ್ಳೆಗಳಲ್ಲಿ ಪ್ರಾಣಪೂರಿ"

'ಹೆತ್ತು ಸಂಸ್ಕಾರದದ್ದೆ ಸಿನ್ನ ನಂಬಿದ ಲಾಭ'. ಇಂತಹ ಗಾದೆ ಮಾತುಗಳಂತಹ ಚರಣಗಳಲ್ಲಿ ವ್ಯಕ್ತವಾಗುವ ಬದುಕಿನ ಸಫಲತೆಯಲ್ಲಿನ ವಿಫಲತೆಯನ್ನು ವ್ಯಂಜಿಸುವ ಅಡಿಗರ ಯಶಸ್ವಿಯಾದ ಕಾವ್ಯಾಭ್ಯಾಸವೇವರೆ ಅಂತರಂಗದ ಅರಿವನ್ನು ಹಿಗ್ಗಿಸುವ ಸಹೃದಯ ವ್ಯಾಪಾರವೇ ಆಗಿದೆ.

ಭೂತ, ಭೂಮಗೀತ, ಹದ್ದು, ಕೂಪಮಂಡೂಕ, ಶ್ರೀರಾಮನವಮಿಯ ದಿವಸ, ವರ್ಧಮಾನ, ಚಿಂತಾಮಣಿಯಲ್ಲಿ ಕಂಡಮುಖ ಇವುಗಳೇ ಶ್ರೇಷ್ಠ ಕಾವ್ಯವೆಂದು ವಿಮರ್ಶಕರು ತೀರ್ಮಾನಿಸಿದಂತಿದೆ. ಕವಿಯ ನಂಬಿಕೆಯೂ ಇದೇ ಇದ್ದೀತು. ಆದರೂ ಅವರ "ಭಾವ ತರಂಗ" "ಕಟ್ಟುವೆವು ನಾವು" "ನಡೆದು ಬಂದ ದಾರಿ" ಸಂಕಲನದಲ್ಲಿನ ಎಷ್ಟೋ ಕವಿತೆಗಳು ಸರಳವಾಗಿದ್ದು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದ ಕವಿತೆಗಳಷ್ಟೇ ಹೃದ್ಯವಾಗಿರುವುದನ್ನು ಮರೆಯಲು ಸಾಧ್ಯವೇ ಇಲ್ಲ. ಈ ಮಾತಿಗೆ

"ಅಳುವ ಕಡಲಿನಲಿ ತೇಲಿ ಬರುತಲಿದೆ
ನಗೆಯ ಹಾಯಿ ದೋಣಿ"

ಎಂದು ಆರಂಭವಾಗುವ ಕವಿತೆಯನ್ನು ಪರಿಶೀಲಿಸಬಹುದು. ಕಟ್ಟುವೆವು ನಾವು ಸಂಕಲನದಲ್ಲಿನ ಬಂಡಾಯದ ಮನೋಧರ್ಮವನ್ನು ಮೆಚ್ಚಬಹುದಾಗಿದೆ.

ಭಾಗ 3

ಇತ್ತೀಚೆಗೆ 4-11-92ರ ರಾತ್ರಿ 9-40ಕ್ಕೆ ಅಡಿಗರು ಇಹಲೋಕದ ಯಾತ್ರೆ ಮುಗಿಸಿ ಪೂರ್ಣವಾಗಿ ಕಾವ್ಯ ಶರೀರಿಗಳಾದರು. ಬೇಂದ್ರೆಯವರ ಶರೀರ ಪರಿಸ್ಥಿತಿ

ಯನ್ನು ಸ್ವಾಗತಿಸಿ ಹೇಳಿಕೆ ಕೊಡುವ ಅತಿರೇಕಕ್ಕೆ ಹೋದ ಹಾಗೆ ಅಡಿಗರು "ನಾನು ಹಿಂದು–ನಾನು ಬ್ರಾಹ್ಮಣ" ಎಂಬ ಕವಿತೆ ರಚಿಸಿ ಪ್ರಕಟಿಸುವ ಅತಿರೇಕವನ್ನು ಮಾಡಿದರು. ಹಾಗೆ ಮಾಡದೆ ಇದ್ದರೆ ಚೆನ್ನಾಗಿತ್ತು. ಅದೇನೆ ಇರಲಿ ಮತ್ತೊಮ್ಮೆ ಅವರ ನಿಧನಾನಂತರ ನಾನು ಅವರ ಯಶಸ್ವೀ ಕವಿತೆಗಳನ್ನು ಓದಲು ತೊಡಗಿದೆ. ಅವುಗಳನ್ನು ಓದಿ ಮುಗಿಸಿದಂತೆ ಹೊಸ ಪ್ರಪಂಚವೊಂದನ್ನು ಹೊಕ್ಕು ಹೊರಬಂದ ಅನುಭವವಾಯಿತು. ನನ್ನ ನುಡಿ, ಅಳುವ ಕಡಲಿನಲಿ, ಮೋಹನ ಮುರಲಿ, ಬೇರು ಸತ್ತೀಮರದ, ಭೂಮಿಗೀತ, ಭೂತ, ಹದ್ದು, ಕೂಪಮಂಡೂಕ, ಪ್ರಾರ್ಥನೆ, ರಾಮ ನವಮಿಯ ದಿವಸ, ಸಾಮಾನ್ಯನಂತೆ ಈ ನಾನು ಮುಂತಾದ ಕವಿತೆಗಳಿಂದಲೇ ಜಗತ್ತಿನ ದೊಡ್ಡ ಕವಿಗಳ ಸಾಲಿಗೆ ಅವರು ಸೇರಿ ಹೋಗುತ್ತಾರೆ ಎಂದು ನಾನು ನಂಬುತ್ತೇನೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸರ್ವಾಧಿಕಾರಿ ಮನೋವೃತ್ತಿಯನ್ನು ವಿರೋಧಿಸಿ ಸಾಮಾನ್ಯನ ಅಸಾಮಾನ್ಯತೆಯನ್ನು ಪರಮಾಣು ದೇಹಿ ನಾನು (ಕಂಬದೊಳಗಡಗಿದ ನರಸಿಂಹ ನಾನು) (ನನ್ನ ಸರದಿಗಾಗಿ) ಕಾಯುತ್ತೇನೆ. ನಾನು ಕೂಡ ಎಂದು ಕವಿತೆ ಬರೆದು ತಮ್ಮ ವ್ಯಕ್ತಿನಿಷ್ಠೆಯನ್ನೂ ಪ್ರಜಾಪ್ರಭುತ್ವದಲ್ಲಿನ ನಂಬಿಕೆಯನ್ನೂ ಢಾಳಾಗಿ ಪ್ರಕಟಿಸಿದರು ಈಚೆಗೆ ನಮ್ಮನ್ನಗಲಿದ ಅಡಿಗರಿಗೆ ಅವರ ಕಾವ್ಯಕ್ಕೆ ನನ್ನ ನಮನಗಳನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ.

ನಾನು ನಿಮ್ಮ ಗೂಢಚಾರಿ

ನಾನು ಗುಮಾಸ್ತ, ತಂತ್ರಜ್ಞ, ಚಾಲಕ–ಎಲ್ಲವೂ ಆಗಿರುವವ,
ಹೇಳಿದಂತೆ ಮಾಡುವವ, ಹೇಳಿದರು ನನಗವರು–
'ಬಲಕ್ಕೆ ನೋಡಬೇಡ, ಅಂತೆಯೇ ಎಡಕ್ಕೆ, ನೋಡಬೇಡ ಪೂರ್ಣಯಂತ್ರವನ್ನು.
ನೀನು ಕೇವಲ ಯಂತ್ರದ ಒಂದು ಕೀಲು, ರಬ್ಬರ್ ಮುದ್ರೆ,
ನಿನ್ನ ಮೀರಿದ ವಿಷಯಗಳ ಬಗ್ಗೆ ಯೋಚಿಸದಿರು'.
ಬುದ್ಧಿವಂತರು, ಮುಂದಿನದನ್ನು ಕಾಣಬಲ್ಲವರು ಯೋಚಿಸಿದರು.
'ಏನೂ ತೊಂದರೆಯಿಲ್ಲ. ನಮ್ಮ ಗುಮಾಸ್ತ ಎಲ್ಲ ಗುಮಾಸ್ತರಂತೆ,
ಕಿವಿಯಿದ್ದೂ ಕೇಳಲಾರ, ಕಣ್ಣಿದ್ದೂ ಕಾಣಲಾರ,
ನಮಗೆ ತಲೆಯಿದೆ, ಅವನಿಗಿಲ್ಲ'.
ಆ ಸಣ್ಣ ತಲೆಯ ಮನುಷ್ಯ ನಿಜಕ್ಕೂ ಸಣ್ಣವನಲ್ಲ!
ಅತ ಕೇಳಿದ–'ಇಲ್ಲಿ ಯಾರು ನಿರ್ಧರಿಸುವವರು,
ಎಲ್ಲಿಗೆ ಹೋಗುತ್ತಿದೆ ಈ ಉಗಿಬಂಡಿ ?'

ಮಾಧವ ಐತಾಳ್, 1382, ಎಂ.ಟಿ.ಎಸ್. ಕಾಲೋನಿ, ಟಿ. ದಾಸರಹಳ್ಳಿ, ಬೆಂಗಳೂರು-560 057

ಆ ಮನುಷ್ಯ, ಗುಮಾಸ್ತ, ತಂತ್ರಜ್ಞ, ಚಾಲಕ, ತಲೆಯೆತ್ತಿ ನೋಡಿದ,
ಹ್ಹಾ, ನಿಂತಿದೆ, ಎದುರಿಗೆ ದೊಡ್ಡ ಭೂತ! ನಂಬದೆ ಕಣ್ಣುಜ್ಜಿದ,
ಮತ್ತೆ ನೋಡಿದ, ಕಣ್ಣುಜ್ಜಿದ, ನೋಡಿದ್ದು ಭೂತವನ್ನೇ,
ನಾನೂ ಆ ಭೂತದ ಒಂದು ಭಾಗ, ಆ ಅರ್ಜಿಗಳನ್ನೆಲ್ಲಾ ಸಹಿಮಾಡಿದ್ದೇನೆ,
ಈಗಷ್ಟೇ ಅದರಲ್ಲಿನ ಬರಹವೇನೆಂದು ಗೊತ್ತಾಗುತ್ತಿದೆ,
ನಾನೂ ಆ ಬಾಂಬಿನ ಒಂದು ಕೀಲು,
ಅವರು ನನ್ನನ್ನೇ ಬಿಗಿಮಾಡುತ್ತಿದ್ದಾರೆ,
ಮೆರವಣಿಗೆಯಲ್ಲಿ ಹೊರಟ ರಾಜ ಬೆತ್ತಲೆಯೆಂದು ಕಂಡುಕೊಂಡ ಮಗು ನಾನೇ,
ಅಯ್ಯೋ, ನಾನೇ ಏಕಾಗಬೇಕಿತ್ತು?
ನನಗಿದು ಬಹಳ ಹೆಚ್ಚಾಯಿತು, ನನಗಿದನ್ನು ತಡೆಯೋ ಶಕ್ತಿಯಿಲ್ಲ,
ನಾನು ದಾರಿಯಲ್ಲಿ ಕಂಡಕವೆಲ್ಲಿದೆಯೆಂದು ತಿಳಿದವ,
ಚಾಲಕನ ಜಾಗದಲ್ಲಿದ್ದೇನೆ,
ನಾ ಬಾಯ್ಬಿಡದಿದ್ದರೆ ಎಲ್ಲವನ್ನೂ ಸಾವು ನುಂಗುವುದು ಖಚಿತ,
ನನಗೆ ಬೇರೆ ದಾರಿಯೇ ಇಲ್ಲ. ನಾನೊಬ್ಬ ಸಾಮಾನ್ಯ,
ನಾನು ಅಂತರಾತ್ಮದ ಕೂಗನ್ನು ಕೇಳಲೇಬೇಕಿದೆ,
ನನ್ನ ಕರ್ತವ್ಯ ಪೂರೈಸಲೇ ಬೇಕಿದೆ,
ನನಗೀಗ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ,
ಈ ಪ್ರಪಂಚ ಬಲು ಸಣ್ಣದು, ನಾ ಕಂಡ ಭೂತ ಬಹಳ, ಬಹಳ ದೊಡ್ಡದು,
ಇಲ್ಲಿ ನಾನು ನಿಮ್ಮೆಲ್ಲರ ಬಲು ಭಾರದ ಹೊರೆ ಹೊತ್ತು ಹೊರಟಿದ್ದೇನೆ,
ನನ್ನ ಹೊರೆ ಕಡಿಮೆ ಮಾಡಬನ್ನಿ, ನನ್ನೊಡನೆ ಬನ್ನಿ
ದುರಂತದ ಬಂಡಿಯನ್ನು ನಿಲ್ಲಿಸಿ, ಬಂಡಿಯಿಂದ ಹೊರ ಬನ್ನಿ,
ಮುಂದಿನ ನಿಲ್ದಾಣ, ಅಣು ವಿನಾಶದ್ದು,
ಮುಂದಿನ ಪುಸ್ತಕ, ಮುಂದಿನ ಯಂತ್ರ,
ಅಯ್ಯೋ ಇಲ್ಲ, ಇಲ್ಲವೇ ಇಲ್ಲ,
ಇಂದು ನೀವು ಬಂಡಿಯನ್ನು ನಿಲ್ಲಿಸದಿದ್ದರೆ, ಮನುಕುಲಕ್ಕೆ
ಭವಿಷ್ಯವೆಂಬುದೇ ಇಲ್ಲ,

— o —

ಮೂಲ ಲೇಖಕನ ಬಗ್ಗೆ ಟಿಪ್ಪಣಿ:-

ಮೊರಾಕ್ಕೋದಲ್ಲಿ ಜನಿಸಿದ ವಾನುನು, 11ನೇ ವಯಸ್ಸಿನಲ್ಲಿ ಇಸ್ರೇಲ್‌ಗೆ ಹೋದ, ಅತೀ ಬಡತನದ ಬಾಲ್ಯ, ಇಸ್ರೇಲ್‌ನ ಸೈನ್ಯದಲ್ಲಿ ಸೇವೆ, 1977ರಿಂದ

85ರ ವರೆಗೆ ಡೈಮೋನಾದ ಪ್ಲುಟೋನಿಯಂ ಬೇರ್ಪಡಿಸುವ ಘಟಕದ ಪ್ರಯೋಗ
ಶಾಲೆಯಲ್ಲಿ ತಂತ್ರಜ್ಞ.

ತನ್ನ ಮನಸ್ಸನ್ನು ಕೊಲ್ಲಲಾಗದ ವಾನುನು, ತನ್ನ ದೇಶದ ಅಣು ರಹಸ್ಯ
ಗಳನ್ನು ಬಯಲು ಮಾಡಲು ನಿರ್ಧರಿಸಿದ. ಅಕ್ಟೋಬರ್ 85 ರಲ್ಲಿ ಬ್ರಿಟನ್ನಿಗೆ.
ಅವನಲ್ಲಿದ್ದ ದಾಖಲೆಗಳು ಸಂಪೂರ್ಣ ಆಧಾರ ಸಹಿತವಾದವು ಎಂದು ವಿಜ್ಞಾನಿಗಳ
ತೀರ್ಪು. ಪತ್ರಿಕೆಗಳಲ್ಲಿ ರಹಸ್ಯ ಬದಲಾಗುವ ಮೊದಲೇ ಮೊಸ್ಸಾದ್‌ನ ಏಜೆಂಟ
ರಿಂದ ಅಪಹರಣ. ರಹಸ್ಯ ವಿಚಾರಣೆಯಲ್ಲಿ ದೇಶದ್ರೋಹ, ಪಿತೂರಿಯ ಆರೋಪ
ಹೊತ್ತು 18 ವರ್ಷ ಜೈಲಿಗೆ.

ಈಗ ವಾನುನು ಆಶ್ಕೆಲಾನ್‌ನ ಜೈಲಿನ 6' 10' ವಿಸ್ತೀರ್ಣದ ಕೋಣೆ
ಯಲ್ಲಿ ತನ್ನ 7ನೇ ವರ್ಷದ ಶಿಕ್ಷೆ ಅನುಭವಿಸುತ್ತಿದ್ದಾನೆ. 'ಅಮ್ನೆಸ್ಟಿ ಇಂಟರ್
ನ್ಯಾಷನಲ್'ನ ಪ್ರಕಾರ ಆತನ ಸ್ಥಿತಿ ಕ್ರೂರ, ಅವಮಾನವೀಯ ಮತ್ತು ಘೋರ
ವಾದದ್ದಾಗಿದೆ.' ಆತನ ಸೆರೆಮನೆ ವಾಸ, ಜಗತ್ತಿನ ನಾಗರೀಕ ಸ್ವಾತಂತ್ರ್ಯ,
ಅಭಿಪ್ರಾಯ ಸ್ವಾತಂತ್ರ್ಯದ ಮೇಲಿನ ಕಪ್ಪು ಚುಕ್ಕೆ. ಅದನ್ನು ತೊಡೆಯಲು
ಪ್ರಕ್ರಿಯೆಗಳು ಮೊದಲುಗೊಳ್ಳಬೇಕು.

ಕನ್ನಡಕ್ಕೆ : ಮಾಧವ ಐತಾಳ್, "ಪ್ರೋಟೆಕ್ಟ್" ಪರಿಸರ ವೇದಿ

ಕವನದ ಮೂಲ ಲೇಖಕ : ಭಾಷೆ ಹೀಬ್ರೂ : ಮೊರ್ಡಾಶಾ ವಾನುನು

ಇಂಗ್ಲೀಷ್ ಅನುವಾದ : ಮ್ಯಾಕ್ಸಿನ್ ಕಾಫ್‌ಮನ್ ಸನ್

"ಆಕೆಯ ದೇಹ– ಪ್ರೀತಿ ಹೋರಾಟದಲ್ಲಿ
ಕಲ್ಲಿನೊಂದಿಗೆ ಬೆಸೆದುಹೋಯಿತು
ಆಕೆಯ ದುಃಖ– ಚಂದ್ರ ಕಣ್ಣಲ್ಲಿ ಮಾಯುವ
ಗಾಯದ ಕಲೆಯಾಯಿತು."

— ಜಿಯಾ ವಿೀರ

ಉಳಿವೋ ಬದುಕಿನ ಅಂತ್ಯವೋ?

— ಎಂ. ವಿಠೋಬಶೆಟ್ಟಿ

ಹಿನ್ನೆಲೆ: 19ನೇ ಶತಮಾನದ ಮಧ್ಯ ಭಾಗದಲ್ಲಿ, ರೆಡ್ ಇಂಡಿಯನ್ ಜನಾಂಗವನ್ನು ಒಕ್ಕಲೆಬ್ಬಿಸುವ ಕಾರ್ಯ ಸಾಗಿತ್ತು. ಮೊದಮೊದಲು-ಸರ್ಕಾರದ ಧೋರಣೆಯು ರೂಪವಿದಕ್ಕಿರಲಿಲ್ಲ. ಮಿಲಿಟರಿ ಅಧಿಕಾರಿಗಳು ಸತತವಾಗಿ ಅನಧಿಕೃತವಾಗಿ ರೆಡ್ ಇಂಡಿಯನ್ನರನ್ನು ಕಾಡಿನೊಳಗೆ ತಳ್ಳುತ್ತಾ ಹೊರಟರು. ಭುಜಬಲ ಮದ್ದುಗುಂಡುಗಳ ಶಕ್ತಿಯು ಮುಂದೆ ವಿರೋಧ ತೋರಲು ಸಾಧ್ಯವಾಗದೇ ಇರುವಾಗ, ಯಾವುದೇ ಖಚಿತ ಒಪ್ಪಂದವಿಲ್ಲದೇ ರೆಡ್ ಇಂಡಿಯನ್ ಜನಾಂಗ-ಒಂದಲ್ಲೊಂದು ತಿಳುವಳಿಕೆ ಮೇಲೆ (ಅನಧಿಕೃತ ಒಪ್ಪಂದ-ಸ್ಥಾನಿಕ ಅಧಿಕಾರಿಗಳೊಂದಿಗೆ) ಹಲವಾರು ಸಲ ತಮ್ಮ ನೆಲೆಯಿಂದ ಸರಿದು ಕಾಡೊಳಗೆ ಹೋಗಿ ಹೋಗಿ ನೆಲಸಿದರು. ಆಗೆಲ್ಲಾ ಒಂದು ಖಚಿತ ಸೀಮೆಯನ್ನು ಗುರುತಿಸಲಾಗುತ್ತಿತ್ತು. ನಾಡ ಜನ ಅವರ ಆಚೆಗೆ ವಿಸ್ತರಿಸಬಾರದು ಎಂಬ ಒಡಂಬಡಿಕೆಯಾಗುತ್ತಿತ್ತು. ಆದರೆ ಈ ರೀತಿ ಗುರುತಿಸಲಾದ ಸೀಮೆ ಪದೇ ಪದೇ ಉಲ್ಲಂಘಿಸಲ್ಪಡುತ್ತಿತ್ತು. ಮುಂದೊಂದು ದಿನ ಈ ಒಕ್ಕಲೆಬ್ಬಿಸುವ ಕಾರ್ಯ ಅಮೆರಿಕಾ ಸರ್ಕಾರದ ನೀತಿಯೇ ಆಗಿ ರೂಪುಗೊಂಡಿತು. ನಾಡು ವಿಸ್ತರಿಸಿದಂತೆ, ಕಾಡು ಕಡಿಮೆಯಾಗುತ್ತಿತ್ತು. 1854 ರಲ್ಲಿ ಸಾಥೆ ಎನ್ನುವ ರೆಡ್ ಇಂಡಿಯನ್ ಮುಖಂಡ ಅಮೇರಿಕಾ ಸರ್ಕಾರಕ್ಕೆ-ತನ್ನದೇ ಆದ ಮುಗ್ಧ ಮನೋಭಾವದಲ್ಲಿ ವಿರೋಧ ವ್ಯಕ್ತ ಪಡಿಸಿದ. 140 ವರ್ಷಗಳ ಹಿಂದಿನ ಒಕ್ಕಣೆಯಾದರೂ, ಪರಿಸರ ನಾಶದ ಮುನ್ನುಡಿಯಂತೆ ಆ ಒಕ್ಕಣೆ ಭಾವನಾತ್ಮಕವಾಗಿತ್ತು. ಅದರ ಆಯ್ದ ಭಾಗಗಳ ಭಾವಾರ್ಥ ಕೆಳಕಂಡಂತೆ ಇದೆ. ಈ ವಿಷಯ ಬಾಲವಿಜ್ಞಾನದಲ್ಲಿ ಮೊನ್ನೆ ಪ್ರಕಟವಾಗಿತ್ತು.

"ಬಿತ್ತರದ ನೀಲಾಕಾಶವನ್ನೂ, ಸರ್ವಾಧಾರ ನೆಲವನ್ನೂ, ಉಸಿರಿನ ಜೀವನವೇ ಆದ ಗಾಳಿಯನ್ನು, ಸಾಗರದ ಅನಂತತೆಯನ್ನೋ ನೀವು ಅದು ಹೇಗೆ ಕೊಳ್ಳುವಿರಿ? ಕಾಡುಮಡಿಲಲ್ಲಿ ಬೆಳೆದ ನಮಗೆ ಇದು ಸೋಜಿಗವೇ ಸರಿ, ನಮಗೆ ತಿಳಿದಂತೆ, ನಾವು, ಈ ಪರಿಸರ ಭೂಮಿಯ ಒಂದು ಭಾಗ. ಅದು ನಮ್ಮ ಭಾಗ. ಈ ಭೂಮಿಯೊಂದಿಗೂ, ನಮ್ಮದೂ, ಇಲ್ಲಿಯ ಗಿಡ ಮರ ಬಳ್ಳಿ ಪ್ರಾಣಿ ಪಕ್ಷಿ ಅಜೀವ ವಸ್ತುಗಳದೂ ಅವಿನಾಭಾವ ಸಂಬಂಧ. ಈ ಬೆಟ್ಟ ಈ ನದಿ ನಮ್ಮ ಒಡಹುಟ್ಟಿದವರು ಈ ಹರಿಯುವ ಜಲ ನಮ್ಮ ಬಾಯಾರಿಕೆ ತಣಿಸುತ್ತದೆ. ಈ ಚಲಿಸುವ ಗಾಳಿ ನಮಗೆ ಜೀವ ನೀಡುತ್ತದೆ, ಈ ಗಿಡ ಮರ ಬಳ್ಳಿ ಪ್ರಾಣಿ ಪಕ್ಷಿ ಸಂಕುಲ ನಮ್ಮ ಜೀವಿತವೇ ಆಗಿವೆ. ಇವುಗಳಿಲ್ಲದ ಜೀವನ ನಮಗೆ ಊಹೆಗೆ ಸಿಗದು. ಬಿಳಿ ಮನುಷ್ಯನ ನಗರಗಳಲ್ಲಿ ಇವಾವೂ ಇಲ್ಲವೆಂದೂ, ಅಲ್ಲೆಲ್ಲೂ ಶಾಂತವಾದ ಸ್ಥಳವಿಲ್ಲವೆಂದೂ ನಾವು ಕೇಳಿದ್ದೇವೆ. ನಿಮ್ಮ ನಗರಗಳಲ್ಲಿ

ಎಂ. ವಿಠೋಬ ಶೆಟ್ಟಿ, ನಂ. 91, ತೆಂಗಿನಮರದ ರಸ್ತೆ,
10ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560003

ಕೋಗಿಲೆಯ ಇಂಪು ದನಿಯಾಗಲೀ ಹಕ್ಕಿಗಳ ಚಿಲಿಪಿಲಿ ಕಲರವವಾಗಲೀ ಇಲ್ಲವಂತೆ. ವಸಂತದ ಚಿಗುರೆಲೆಗಳ ಸೌಂದರ್ಯವನ್ನಾಗಲೀ ಮೊಗ್ಗು ಹೂಗಳ ಗೊಂಚಲುಗಳನ್ನಾಗಲಿ ನಮ್ಮ ಮಕ್ಕಳು ನೋಡಿಲ್ಲವಂತೆ. ಬೇರೆ ಯಾವ ಪ್ರಾಣಿಗೂ ನಿಮ್ಮಲ್ಲಿರಲು ಸ್ಥಳವಿಲ್ಲ ವಂತೆ. ಪತಂಗ ತನ್ನ ಸುಂದರ ರೆಕ್ಕೆಗಳನ್ನು ಎಲ್ಲಿ ಇಡಬೇಕು? ಗೀಜಗ ಎಲ್ಲಿ ಗೂಡು ಕಟ್ಟಬೇಕು? ಇರುವೆ ಎಲ್ಲಿ ಮೊಟ್ಟೆ ಇಡಬೇಕು? ನವಿಲು ಎಲ್ಲಿ ಕುಣಿಯ ಬೇಕು? ಇವೆಲ್ಲಾ ನಮಗೆ ಅರ್ಥವಾಗದ ವಿಷಯಗಳು. ಪ್ರಾಯಶಃ ನಾವು ಅನಾಗರಿಕ ರಿರುವುದರಿಂದ, ನಮ್ಮ ಜ್ಞಾನಕ್ಕೆ ಇವು ನಿಲುಕುವುದಿಲ್ಲ. ಬೆಳದಿಂಗಳಲ್ಲಿ ಜಾತಕ ಪಕ್ಷಿಯ ಕೂಗನ್ನು ಕೇಳದ-ಹೊಂಡದಲ್ಲಿ ಕಪ್ಪೆಗಳ ಸಂಭಾಷಣೆ ಕೇಳದ ಮಾನವ ಬದುಕಿಗೆ ಏನರ್ಥ? ನಾವು ಕಾಡು ಜನ. ಇಲ್ಲಿಯ ಎಲ್ಲದನ್ನೂ ಉತ್ಸಾಹದಿಂದ ಇಷ್ಟಪಡುತ್ತೇವೆ. ಕಣಿವೆಯ ಮಧ್ಯೆ ಬೀಸುವ ತಂಗಾಳಿಯೇ ಆಗಲೀ ಬಯಲಿನ ಬಿರುಗಾಳಿಯೇ ಆಗಲೀ, ತೋಯ್ದ ಮಣ್ಣಿನ ವಾಸನೆಯೇ ಆಗಲಿ, ಮಲ್ಲಿಗೆಯ ಪರಿಮಳವೇ ಆಗಲೀ ಬೆಟ್ಟದಿಂದ ಹರಿದು ಬರುವ ನೀರೇ ಆಗಲೀ, ಮಳೆಯ ಹನಿಯೇ ಆಗಲೀ, ಒಣಗಿದ ಎಲೆಗಳು ಹೇಗೆಯೋ ಆಗಲೀ, ಚಿಗುರೆಲೆಗಳ ಗೊಂಚಲೇ ಆಗಲಿ ಎಲ್ಲಾ ನಮಗೆ ಇಷ್ಟವೇ. ಬಿಳಿ ಮನುಷ್ಯನಿಗೆ ಇವಾವುದರ ಪ್ರಜ್ಞೆಯೇ ಇರುವಂತೆ ಕಾಣುವುದಿಲ್ಲ. ತಾನು ಉಸಿರಾಡುವ ಗಾಳಿಯನ್ನು ಅವನೆಂದೂ ಗಮನಿಸಿಲ್ಲ. ಅವನ ಮಕ್ಕಳು ಮರಿಗಳು ಎಂದೂ ಬೆಟ್ಟದ ಶಿಖರದ ಮೇಲೆ ನಿಂತು ಸೃಷ್ಟಿಯ ವಿಶಾಲತೆಯನ್ನು ವೀಕ್ಷಿಸಿಲ್ಲ ಅಥವಾ ಸಮುದ್ರದ ದಡದಲ್ಲಿ ನಿಂತು ಅದರ ಭೋರ್ಗರೆತವನ್ನು ಕೇಳಿ ಮೈಮರೆತಿಲ್ಲ. ನಮ್ಮ ಗುಡಿಸಲಿನ ಮೂಲೆಯಲ್ಲಿ, ಬೆಟ್ಟದ ತುದಿ ಮೇಲೆ, ಸಮುದ್ರದ ಆಳದಲ್ಲಿ, ಆಕಾಶದ ಒಳಗೆ, ನಮ್ಮೆಲ್ಲರಲ್ಲಿ, ಎಲ್ಲ ವಸ್ತುಗಳಲ್ಲಿ ಅದೇನೋ ಕಾಣದ ಏಕತೆ ಇದೆಯೆಂದೂ, ನಾವೆಲ್ಲಾ ಅದರ ಅಂಶವೆಂದೂ ನಾವು ತಿಳಿಯುತ್ತೇವೆ. ಅನಾಗರಿಕರಾದ ನಮ್ಮಲ್ಲಿ ಭೇದ, ಜಗಳ ಗಳು ಕ್ಷಣಿಕ-ಮರೆಯುತ್ತೇವೆ ಮತ್ತೆ ಒಂದು ಗೂಡುತ್ತೇವೆ. ಆದರೆ, ಈ ಎಲ್ಲ ಏಕತೆಯನ್ನು ನಾಗರಿಕ ಜಗತ್ತಿನ ಬಿಳಿಯ ಜನರೊಂದಿಗೆ ಹಂಚಿಕೊಳ್ಳಲು ನಮಗೆ ಸಾಧ್ಯ ವಾಗುತ್ತಿಲ್ಲ. ಏನೋ ಸಂಶಯ ಏನೋ ಭಯ. ನಾಗರಿಕ ಜನರೆಲ್ಲರೂ ಬೇರೆಯೇ ಎಂದೂ, ಅವರು ಸ್ವಾರ್ಥದಿಂದ ಕೆಳಗಿಳಿಯುದವರೆಂದೂ ಹೃದಯದ ಸೀಮೆಯನ್ನು ನೋಡಲಾಗದ ವೈಚಾರಿಕರೆಂದೂ ನಮಗನಿಸುತ್ತದೆ. ನಿಮ್ಮ ಮುಂದೆ ನಮ್ಮ ಸರಳ ಸ್ವತಂತ್ರ ಸ್ವಚ್ಛಂದತೆ ಮಾಯವಾಗಿ-ನಾವು ಕುಬ್ಜರಾಗಿ ಕರಗುತ್ತೇವೆ. ಭಯದಿಂದ ನಡುಗುತ್ತೇವೆ. ಇದೆಲ್ಲಾ ನಿಜವಾದರೂ, ನಿಮ್ಮ ಮೇಲೆ ನಮಗೆ ಗೌರವ ಮೂಡುವು ದಿಲ್ಲ, ಬರೀ ಭಯ ಮಿಶ್ರಿತ ಅಲಕ್ಷ್ಯಕ್ಕೇ ನೀವು ಅರ್ಹರು.

ಬಿಳಿ ನಾಗರಿಕ ಮನುಷ್ಯನ ಜೀವನ ದುರ್ನಾತಕ್ಕೆ ಹೊಂದಿ ಜೋಮು ಹಿಡಿದಿದೆ. ಆತನ ಕಣ್ಣು ಸೌಂದರ್ಯವನ್ನು ಸವಿಯಲಾರದು, ಅವನ ಕಿವಿ ಪ್ರಕೃತಿದತ್ತ

ಸಂಗೀತವನ್ನೂ ಕೇಳಲಾರದು. ಕಾಡುಗಳಿಲ್ಲದ, ಪ್ರಾಣಿಗಳಿಲ್ಲದ ಮನುಷ್ಯ ಎಂದರೇನು? ಇವಾವು ಇಲ್ಲವಾದರೆ ಅವನು ಏಕಾಂತತೆ ಇಂದಲೋ, ಒಳಜಗಳದಿಂದಲೋ ಸತ್ತಾನು. ಏಕೆಂದರೆ ಇಂದು ಪ್ರಾಣಿ ಸಂಕುಲದ ನಾಶ, ನಾಳೆ ಮನುಷ್ಯನ ನಾಶ. ಎಲ್ಲಕ್ಕೂ ಸಂಬಂಧವಿದೆ. ಭೂಮಿಯ ಬದಲಾವಣೆ-ಭೂಮಿಯ ಮಕ್ಕಳ ಬದಲಾವಣೆ. ಭೂಮಿ ಖಾಲಿ. ಅವರ ಜೇಬುಗಳೆಲ್ಲಾ ಖಾಲೀ. ನಾವು ಮುಗ್ಧರು, ನೆಲದ ಮೇಲೆ ಉಗುಳುತ್ತೇವೆ. ನಮ್ಮ ಮೇಲೆ ಉಗುಳಿಕೊಂಡಂತೆ ತಿಳಿಯುತ್ತೇವೆ. ನಮಗೆ ಇಷ್ಟು ಮಾತ್ರ ಗೊತ್ತು. ಪರಿಸರ ಮಾನವನಿಗೆ ಸೇರಿದ್ದಲ್ಲ. ಈ ಕಾಡಾಗಲೀ, ಈ ಬೆಟ್ಟವಾಗಲೀ, ಈ ನದಿಯಾಗಲೀ, ಈ ಭೂಮಿಯಾಗಲೀ, ಈ ಆಕಾಶವಾಗಲೀ, ಯಾವುದಕ್ಕೂ ಮನುಷ್ಯ ಒಡೆಯನಲ್ಲ. ಆದರೆ ಇವೆಲ್ಲಕ್ಕೂ ಮನುಷ್ಯ ಸೇರಿದ್ದಾನೆ. ಇವುಗಳ ಮಧ್ಯೆ ಎಲ್ಲಾ ಪ್ರಾಣಿಗಳಿಗೆ ಇರುವಂತೆ ಮನುಷ್ಯನಿಗೂ ಒಂದು ಸ್ಥಾನವಿದೆ. ಮನುಷ್ಯ ಈ ಜೀವ ಜಾಲವನ್ನು ನೇಯ್ದಿಲ್ಲ. ಆದರೆ, ಈ ನೇಯ್ಗೆಯಲ್ಲಿ ಅವನೂ ಒಂದು ಚಿತ್ತಾರ. ಮನುಷ್ಯ ತನಗೆ ಶಕ್ತಿ ಇದೆ ಎಂದೂ ಬುದ್ಧಿಯಿದೆ ಎಂದೂ ಭ್ರಮಿಸಿ ಈ ಜೀವ ಜಾಲದ ಅಂದ ಕೆಡಿಸಿ ಏನೇನೋ ಮಾಡುತ್ತಿದ್ದಾನೆ. ಆದರೆ ಈ ಬದಲಾವಣೆಯಿಂದ ಜೀವ ಜಾಲದ ನಾಶ ಅದರೊಡನೆ ತನ್ನ ನಾಶವೆಂದು ಅವನು ಅರಿತುಶಿಲ್ಲ. ಮನುಷ್ಯ ಈ ಜೀವನ ರಂಗೋಲಿಗೆ ಏನೇನೂ ಮಾಡುತ್ತಿರುವನೋ ಅವನ್ನೆಲ್ಲಾ ತನಗೆ ತಾನೆ ಅಂದ ಕೆಡಿಸಿಕೊಂಡಂತೆ ಎಂದು ಆತ ತಿಳಿದಿಲ್ಲ. ಇಂದು ನಮ್ಮ ಕಾಡೆಮ್ಮೆಗಳಿಲ್ಲ. ಅವನ್ನು ಆತ ಕೊಂದಿದ್ದಾನೆ. ನಮ್ಮ ಕುದುರೆಗಳಿಲ್ಲ. ಆತ ಅವನ್ನು ಪಳಗಿಸಿದ್ದಾನೆ. ಹಸನಾದ ಗುಡ್ಡಗಳು ಬೋಳಿಸಿ-ಅಲ್ಲಿ ಮಾತಾಡುವ ತಂತಿ ಹಾಕಿದ್ದಾನೆ. ಮರಗಳ ಜಾಗದಲ್ಲಿ ಹೊಗೆ ಉಗುಳುವ ಯಂತ್ರಗಳನ್ನು ನೆಟ್ಟಿದ್ದಾನೆ. ಇಂದು ಪ್ರಾಣಿಗಳ ಹಿಂಡು ಕಾಣಸಿಗುತ್ತಿಲ್ಲ. ಗಿಳಿಗಳ ಸಮೂಹ ಆಕಾಶದಲ್ಲಿ ಹಾರುತ್ತಿಲ್ಲ. ನಮಗೆಲ್ಲಾ ಏನಾಗಿದೆ? ಮಾನವ ಕುಲ ಎತ್ತ ಸಾಗಿದೆ? ಇದೆಲ್ಲಾ ಮನುಷ್ಯನ ಉಳಿವಿನ ಪ್ರಯತ್ನವೇ? ಅಥವಾ ಬದುಕಿನ ಅಂತ್ಯದ ಕಡೆಗೆ ದಾಪುಗಾಲೇ? ಸರ್ವನಾಶದ ಸೋಪಾನವೇ?

ಹಿನ್ನುಡಿ : ಸಾಧೆಯಂತಹ ಹಲವಾರು ಮುಖಂಡರು ಪದೇ ಪದೇ ತಮ್ಮ ಬಣಗಳ ವಾಸಸ್ಥಳಗಳನ್ನು ಕಾಡೊಳಗೆ ಸರಿಸುತ್ತಾ, ಸರಿಸುತ್ತಾ ಹೋದರು. ಅವರು ಒಪ್ಪಿಕೊಂಡಿದ್ದ ಸೀಮೆಗಳು ಪದೇ ಪದೇ ಉಲ್ಲಂಘಿಸಲ್ಪಟ್ಟವು. ಕಾಡುಗಳು ಪದೇ ಪದೇ ನಾಶಗೊಂಡವು. ನಾಡುಗಳು ಹಬ್ಬುತ್ತಾ ಹೋದವು. ತಮ್ಮ ಜನಾಂಗವನ್ನು ರಕ್ಷಿಸಲು ಸೋತಿದ್ದಕ್ಕೂ ಅಸಫಲವಾದದ್ದಕ್ಕೂ ಬೇಸತ್ತು. ರೆಡ್ ಇಂಡಿಯನ್ ಮುಖಂಡರು ತಲೆಕಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಹಲವಾರು ಪ್ರಸಂಗಗಳನ್ನು ಕೇಳಿದ್ದೇವೆ. ಈಗ ಒಂದು ಖಚಿತ ನೆಲ್ಲ ಅವರ ಇರುವಿಕೆಗೆ ನಿಗದಿಪಡಿಸಲಾಗಿದೆಯಂತೆ. ನಾಡಿನ ವಿಸ್ತಾರ ಕಾಡ ಕಡೆಗೆ ತಡೆ ಹಿಡಿಯಲಾಗಿದೆಯಂತೆ.

●

ಪ್ರಳಯದ ನಡುವಿನ ವಸಂತ

— ಡಿ. ಆರ್. ನಾಗರಾಜ್

\- 1 -

ಭಾರತೀಯ ನಾಗರೀಕತೆಯ ಕಳೆದ 200 ವರ್ಷಗಳ ಇತಿಹಾಸವನ್ನು ತುಂಬ ಸಮರ್ಥವಾಗಿ ಹಿಡಿದಿಟ್ಟಿರುವ ಸಾಹಿತ್ಯ ಎಂದರೆ ಉರ್ದು ಸಾಹಿತ್ಯ. ಈ ಮಾತು ಹೇಳಲು ತೌಲನಿಕ ಸಾಹಿತ್ಯದ ದೃಷ್ಟಿಯಿಂದ ಅನೇಕ ಕಾರಣಗಳಿವೆ. ಉದಾಹರಣೆಗೆ, 1700–1900ರ ತನಕದ ಕನ್ನಡದ ಸಾಹಿತ್ಯವನ್ನೇ ನೋಡಿ. ಆ ಅವಧಿಯ ಭಾರತೀಯ ಸಮಾಜ ಎದುರಿಸಿದ ಅಲ್ಲೋಲಕಲ್ಲೋಲಗಳ, ಹೃದಯವಿದ್ರಾವಕ ಬೆಳವಣಿಗೆಗಳ ಚಿತ್ರಣವೇ ನಮ್ಮಲ್ಲಿಲ್ಲ. ಮತ್ತು ಆ ಎರಡು ಶತಮಾನಗಳು ಭಾರತೀಯ ನಾಗರೀಕತೆಯ ಅತ್ಯಂತ ಕ್ರಾಂತಿಕಾರೀ ಸ್ವರೂಪದ ಸಂಕ್ರಮಣ ಕಾಲ ಎಂಬುದರ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ. ಸಾಹಿತ್ಯವೊಂದರಲ್ಲಿ ಇರುವ ಸಂಗತಿಗಳು ನಮಗೆ ಎಷ್ಟನ್ನೂ ತಿಳಿಸುತ್ತವೆಯೋ ಅಷ್ಟೇ ಮುಖ್ಯವಾದದ್ದನ್ನು ಗೈರುಹಾಜರಾಗಿರುವ ಸಂಗತಿಗಳು ಕೂಡಾ ತಿಳಿಸುತ್ತವೆ. ಸಾಹಿತ್ಯ ಚರಿತ್ರೆಯೊಂದರ ಬಗೆಗೆ ಮಾತನಾಡುವಾಗ ಇರದುದರೆಡೆಗೆ ತುಡಿಯುವುದು ಒಂದು ದೃಷ್ಟಿಯಿಂದ ಹುಚ್ಚುತನ ನಿಜ. ಆದರೆ, ಸಮಾಜವೊಂದರ ಸಾಹಿತ್ಯ ಹಿಡಿದಿಟ್ಟಿರುವ ಅನುಭವ ಸಮಸ್ತದ ದೃಷ್ಟಿಯಿಂದ, ಇಲ್ಲದಿರುವ ಸಂಗತಿಗಳು ಆ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಪರಿಣಾಮಕಾರಿಯಾದ ಸತ್ಯಗಳನ್ನು ಹೇಳುತ್ತವೆ. ಇಲ್ಲದಿರುವಿಕೆಯ ಅರಿವು ವಿನಯವನ್ನು ಮೂಡಿಸಲು ಸಹಾಯಕವಾಗಬಲ್ಲುದು.

ಕಳೆದ 200–250 ವರ್ಷಗಳ ಚಾರಿತ್ರಿಕ ಪಲ್ಲಟದ ಸ್ವರೂಪದ ಬಗೆಗೆ ನಮಗಿನ್ನೂ ಹೆಚ್ಚು ಘನವಾದ, ವ್ಯಾಪಕವಾದ ತಿಳುವಳಿಕೆ ಬರಬೇಕಾಗಿದೆ. ಅಂಥ ವಿಸ್ತಾರ ಹಾಗೂ ಸಂಕೀರ್ಣತೆ ಆ ಅನುಭವದ್ದು. ಸರಳ ಸಾಹಿತ್ಯ ರೂಪಕ ಬಳಸಿ ಹೇಳುವುದಾದರೆ, ಒಂದು ಮಹಾಭಾರತ ಕಾವ್ಯದ್ದೋ, ಭಾಗವತ ಪುರಾಣದ್ದೋ ಆಗಬಹುದಾದ ಅನುಭವ ಇಲ್ಲಿದೆ. ಒಂದು ದೊಡ್ಡ ನಾಗರೀಕತೆಯೇ ಶಿಥಿಲವಾದ, ನಿರ್ನಾಮವಾದ ಘಟ್ಟ ಇದು. ಅಲ್ಲ, ಅದು ಮತ್ತೆ ಪುನರ್‌ಜನ್ಮ ಪಡೆದ ಘಟ್ಟ ಇದು. ಇದನ್ನು ನೋಡಿದಾಗ ಒಂದು ಕಡೆಗೆ ದಟ್ಟ ವಿಷಾದ ಹುಟ್ಟುತ್ತದೆ. ಇನ್ನೊಂದು ಕಡೆಗೆ, ಹೊಸದು ಹುಟ್ಟಿದ್ದರ ಬಗ್ಗೆ ಆಹ್ಲಾದ. ಆಗಾಗ, ಎರಡೂ ಒಂದರೊಳಗೊಂದು ಬೆರೆತು ಹೋಗಿ ಎರಡೂ ಅಲ್ಲದ ಭಾವನಾಕೃತಿಯೊಂದು ಹರಳುಗಟ್ಟತೊಡಗುತ್ತದೆ.

ಈ ಅನುಭವದ ಬಗ್ಗೆ ಕನ್ನಡ ಕಾವ್ಯ ಬಹುಮಟ್ಟಿಗೆ ಮೌನಿ ಎಂದೇ ಹೇಳಬೇಕು (ಕಥನ ಸಾಹಿತ್ಯದಲ್ಲಿ ಅಲ್ಲಲ್ಲಿ ಕಂಡಿದೆ). ಕಾವ್ಯದಲ್ಲಿ ಶರೀಫ ಸಾಹೇಬರ

ಡಾ॥ ಡಿ.ಆರ್. ನಾಗರಾಜ, ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056

'ಜಟ್ಟಿಯು ಹೇಳಿ ಎದ್ದಾವ ನೋಡೋ' ಅಥವಾ 'ಗಿರಣಿಯು ವಿಸ್ತಾರ ನೋಡಯ್ಯಾ' ಎಂಬಂಥ ರೂಪಕಗಳಲ್ಲಿ ಅದು ಕಂಡಿದೆ. ಇಲ್ಲೂ ಕೂಡಾ ಸಮಸ್ಯೆ ಎಂದರೆ ಶರೀಫರ ಆ ಎರಡೂ ರೂಪಕಗಳು ಬಹುಮಟ್ಟಿಗೆ ವಸ್ತುನಿಷ್ಠ ರೂಪಕಗಳು. ಹೊರಗಿನ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆ ತನಗೆ ನೇರವಾಗಿ ಸಂಬಂಧಿಸಿರದ ವಿದ್ಯಮಾನ ಎಂಬಂತೆ ನೋಡಿರುವ ರೂಪಕ ಇದು. ಈ ಬದಲಾವಣೆಗಳು ಶರೀಫರನ್ನು ದಟ್ಟವಾಗಿ ಕಾಡಿಲ್ಲ. ಅವರನ್ನು ವೈಯಕ್ತಿಕವಾಗಿ ಹಿಡಿದು ಅವು ಜಗ್ಗಿಲ್ಲ.

ಆದರೆ, ಉರ್ದು ಸಾಹಿತ್ಯ ಹಾಗಲ್ಲ. ಚರಿತ್ರೆಯಲ್ಲಿ ಸಂಭವಿಸುತ್ತಿರುವ ಈ ಬದಲಾವಣೆಗಳು ಬರೀ ಬೀದಿಯಲ್ಲಿ ನಡೆಯುತ್ತಿರುವ ದೊಂಬಿಯಲ್ಲ. ಅದು ಮನೆಯೊಳಗೂ ನುಗ್ಗುವ ಮಾರಿ. ಅಷ್ಟೇ ಅಲ್ಲ, ಕವಿಯನ್ನು ಭಾವುಕವಾಗಿ, ಸಾಮಾಜಿಕವಾಗಿ ಅನಾಥನನ್ನಾಗಿ, ಭಿಕಾರಿಯನ್ನಾಗಿ ಮಾಡುವ ಮಾರಿ. ಈ ಘಟ್ಟದ ಉರ್ದು ಕವಿಗಳು ಭಾರತೀಯ ಸಾಹಿತ್ಯದಲ್ಲಿ ದೊಡ್ಡ ಮಟ್ಟದ ಕವಿಗಳಾಗಿ ಬೆಳೆಯುವುದೂ ಈ ಕಾರಣಕ್ಕಾಗಿಯೇ. ಚರಿತ್ರೆ ಮಾರಿಯ ಹಾಗೆ ಕಾಣತೊಡಗುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಪ್ರೇಮಿಯ ವ್ಯಕ್ತಿತ್ವ ಸುಂದರ ಕನಸಿನಲ್ಲಿ ಹಬ್ಬುತ್ತಾ ಹೋಗುತ್ತದೆ. ವಾಸ್ತವ-ಕನಸುಗಳೆರಡೂ ಒಂದು ಮಟ್ಟದಲ್ಲಿ ಪ್ರತ್ಯೇಕವಾಗಿ ನಿಲ್ಲುತ್ತ ಹೋಗುತ್ತದೆ. ಆದರೆ, ಈ ಕನಸಿನೊಳಗೆ ಕೂಡಾ ವಾಸ್ತವ ಕಾಲಿಡುತ್ತದೆ. ಪ್ರೇಮಿಯ ವ್ಯಕ್ತಿತ್ವ ಕೂಡಾ ಇವನನ್ನು ಆಗಾಗ ಬೆಚ್ಚಿಸಿಬಿಡುತ್ತದೆ. ಪ್ರೇಮಿಯ ಜೊತೆಗೆ ಕನಸಿನ ಲೋಕದಲ್ಲಿ ಇರೋಣವೆಂದರೆ ಅಲ್ಲೂ ಅವನಿಗೆ ಅರಕ್ಷಿತತೆ ಕಾಡತೊಡಗುತ್ತದೆ. ಚರಿತ್ರೆಯ ಕಿಕ್ಕಲುತನ, ಚಾಂಚಲ್ಯ, ವಿಕಟ ಅಟ್ಟಹಾಸ ಅಲ್ಲೂ ಮೆರೆಯತೊಡಗುತ್ತದೆ. ಗಾಲಿಬ್, ಮೀರ್‌ತಖೀಮೀರ್, ದರ್ದ್ ಮುಂತಾದವರ ಕಾವ್ಯದ ಮಹತ್ವ ಇರುವುದು ಇಲ್ಲಿಯೇ. ಇಲ್ಲಿ ಬಳಕೆಯಾಗಿರುವ ಪದಭಾಷೆ, ಪ್ರತಿಮಾ ಸಮುಚ್ಚಯ ಹಳೆಯದಂತೆ ಕವಿಸಮಯದಂತೆ ಕಂಡರೂ ಅವು ತೀವ್ರವಾಗಿ ಉರಿಯುವುದಕ್ಕೆ ಹೀಗೆ ಚರಿತ್ರೆಯ ಮಾರಿ, ಕನಸಿನ ಪ್ರೇಮಿ ಒಬ್ಬರೊಳಗೊಬ್ಬರು ಬೆರೆಯುವುದೇ ಕಾರಣ. ಇದನ್ನು ಓದಿದಾಗ ನನಗೆ ಅನ್ನಿಸಿತು. ಕಾವ್ಯ ಚರಿತ್ರೆಯೊಂದರಲ್ಲಿ ಎಲ್ಲ ಕಾಲಕ್ಕೂ ಹಳಸಲಾಗುವ ಕವಿಸಮಯಗಳು ಎನ್ನುವುದಿಲ್ಲ. ಹಳೆಯದೇ ಸರಕು ಸಮರ್ಥ ಕವಿಯ ಕೈಗೆ ಸಿಕ್ಕಾಗ ಜೀವ ತುಂಬಿ ಕುಣಿಯುತ್ತವೆ. ಕಡೇ ಪಕ್ಷ 18–19ನೇ ಶತಮಾನದ ಉರ್ದು ಕಾವದಲ್ಲಾದದ್ದು ಹೀಗೆಯೇ.

ಚರಿತ್ರೆ ಎನ್ನುವುದು ಮಾರಿಯ ಹಾಗೆ ಕಂಡಿತು ಎಂದೆ. ದೆಹಲಿಯ ವಿನಾಶದ ಬಗ್ಗೆ ಉರ್ದು ಕವಿಗಳು ಬರೆವ ರೀತಿ ಪ್ರಳಯದ ರೂಪಕದಂತೆ ಕಾಣತೊಡಗುತ್ತದೆ, ದೆಹಲಿಯ ಸೋಲು ಎಂದರೆ ಚರಿತ್ರೆಯ ಒಂದು ಯುಗವೇ ಮುಗಿದ ಹಾಗೆ.

ಎಷ್ಟು ಜನ ಕವಿಗಳು ಇಡೀ ಜಗತ್ತಿನಲ್ಲಿ ಇಂಥ ಕಾಲ ಘಟ್ಟಗಳಲ್ಲಿ, ಸಮಾಜಗಳಲ್ಲಿ

ಬದುಕಿದ್ದಾರು? ಇದು ಬರೀ ಕಾಲದ ಪ್ರಶ್ನೆ ಅಲ್ಲ, ದೇಶದ ಪ್ರಶ್ನೆಯೂ ಹೌದು. ಸೃಜನಶೀಲತೆಯ ದೃಷ್ಟಿಯಿಂದ ಚರಿತ್ರೆಯ ಮಹಾ ಉತ್ಪಾತಕರ, ಕ್ರೂರ ಘಟ್ಟಗಳಲ್ಲಿ ಬದುಕುವ ಸಾಹಿತಿಗಳು ಭಾಗ್ಯವಂತರು. 'ಹುಚ್ಚು ಐರ್ಲೆಂಡ್ ನಿನ್ನನ್ನು ಕಾವ್ಯಕ್ಕೆ ಹೊಡೆದು ಹಣ್ಣು ಮಾಡಿತು' ಎಂಬ ಯೇಟ್ಸ್‌ನ ಬಗೆಗಿನ ಮಾತು ಇಂಥ ಕಡೆಗಳಲ್ಲಿ ಮತ್ತಷ್ಟು ಪ್ರಖರವಾಗುತ್ತದೆ. ವರ್ಜಿಲ್ ಅಂಥ ಕಾಲಘಟ್ಟದಲ್ಲಿ ಇದ್ದ ಎನ್ನುತ್ತಾರೆ. ಮಹಾ ಉತ್ಪಾತಕರ ಕಾಲ, ದೇಶ ಘಟ್ಟಗಳಲ್ಲಿ ಶೇಕ್ಸ್‌ಪಿಯರ್ ಬದುಕಿದ್ದ ಎನ್ನುತ್ತಾರೆ.

ಆದರೆ, ಈ ಮಾತು ಸಾಹಿತಿ ವರ್ಗದ ಅಸೂಕ್ಷ್ಮಸ್ಥಿತಿಯ ಸಮರ್ಥನೆಯೂ ಆಗಬಾರದು. 20ನೇ ಶತಮಾನದ ಭಾರತೀಯ ಸಾಹಿತ್ಯ ಅಷ್ಟು ಮಹತ್ವದ್ದಾಗಲಿಲ್ಲ ಎಂಬ ಬಗ್ಗೆ ಮಾತನಾಡುತ್ತ ಬಂಗಾಲಿ ಲೇಖಕರೊಬ್ಬರು ನಮ್ಮಲ್ಲಿ ಮಹಾಯುದ್ಧಗಳ ರೀತಿಯ ಪ್ರಳಯ ರೂಪೀ ಅನುಭವವಾಗಲಿಲ್ಲ ಎಂದಾಗ ಲೋಹಿಯಾ ಅದಕ್ಕೆ ಪ್ರತಿಕ್ರಿಯಿಸಿದ್ದು ನೆನಪಾಗುತ್ತಿದೆ. ಪ್ರತಿಭೆ ದಟ್ಟವಾಗಿದ್ದರೆ ಸೂಕ್ಷ್ಮ ಸಾಮಾಜಿಕ ಅನುಭವಗಳೂ ತುಂಬ ಎತ್ತರಕ್ಕೆ ಬೆಳೆಯಲು ಸಾಧ್ಯ. ಇಷ್ಟಾದರೂ ಚರಿತ್ರೆಯ ಉತ್ಪಾತಕರ ಘಟ್ಟಗಳು ಪ್ರತಿಭೆ ಅಂಥ ದೊಡ್ಡ ಮಟ್ಟದಲ್ಲದ್ದಾದರೂ ಅದಕ್ಕೆ ಅಪಾರ ಶಕ್ತಿಯನ್ನು ನೀಡಿಬಿಡುತ್ತದೆ. ಪ್ರತಿಭೆಯೂ ದೊಡ್ಡ ಮಟ್ಟದ್ದು ಎಂಬಂಥ ಸ್ಥಿತಿ ಇದ್ದಾಗ ಸಾಹಿತ್ಯದಲ್ಲಿ ಸ್ವರ್ಣಯುಗ ನಿರ್ಮಿತವಾಗುತ್ತದೆ.

18–19ನೇ ಶತಮಾನದ ಉರ್ದು ಸಾಹಿತ್ಯದಲ್ಲಿ ಹೀಗೆ ಚರಿತ್ರೆಯ ಉತ್ಪಾತಕರ ಘಟ್ಟ ಹಾಗೂ ಮಹತ್ವದ ಪ್ರತಿಭೆಗಳೆರಡೂ ಮುಖಾಮುಖಿಯಾದವು. ಹೀಗಾಗಿ ಅದು ಉರ್ದು ಸಾಹಿತ್ಯದ ಸುವರ್ಣಯುಗ. ಈ ಅನುಭವಕ್ಕೆ ಮೀರ್ ಹೀಗೆ ಮಾತು ಕೊಡುತ್ತಾ :

ಪ್ರಳಯಾಲಯದ ಕವಿತೆಯೊಂದು
ಎಲ್ಲ ಕಡೆಗೆ ಹರಡಿದೆ.
ನನ್ನ ಎಲ್ಲ ಕೃತಿಗಳಲ್ಲಿ
ಪ್ರಳಯನಾದ ಮಿಡಿದಿದೆ.

— ಮೀರ್‌ತಕೀಮೀರ್

– 2 –

ಉರ್ದು ಭಾಷೆ ಮತ್ತು ಸಾಹಿತ್ಯಗಳ ಪ್ರಾರಂಭ ಯಾವಾಗ?

1193ರಲ್ಲಿ ದೆಹಲಿ ಮುಸ್ಲಿಂ ಸಾಮ್ರಾಜ್ಯದ ಕೇಂದ್ರವಾದಾಗ, ಸುತ್ತ ಮುತ್ತಲಿನ ಶೌರಸೇನಿ, ಬ್ರಿಜ್‌ಭಾಷಾ ಮುಂತಾದವುಗಳಿಗೆ ಪರ್ಶಿಯನ್ ಭಾಷೆಯ ಸಂಪರ್ಕವಾಗಿ ಹೊಸ ಭಾಷೆಯೊಂದು ಹುಟ್ಟಿತು. ಆದರೆ, ದೇಸೀ ಭಾಷೆಯ ಮೂಲ ವ್ಯಾಕರಣ, ಚೌಕಟ್ಟು ಹಾಗೇ ಉಳಿದು ಪದಭಂಡಾರ ಮಾತ್ರ ವಿಸ್ತೃತವಾಯಿತು. ಮುಂದಿನ

ನಾಲ್ಕು ಶತಮಾನಗಳಲ್ಲಿ ಅದು ಹಿಂದಿ, ಹಿಂದವಿ, ಬ್ರಿಜ್‌ಭಾಷಾ ಎಂಬ ಹೆಸರಿನಲ್ಲಿ ಮುಂದುವರೆಯಿತು. ಮೊದಲಿಗೆ ಅದಕ್ಕೆ ದೇವನಾಗರಿ ಲಿಪಿ ಇತ್ತು. ಆದರೆ, ಶಹ ಜಾನನ ಕಾಲದಲ್ಲಿ (1627–58) ಅದಕ್ಕೆ 'ಉರ್ದು' ಎಂಬ ಹೆಸರು ಬಂತು. ಉರ್ದು ಎಂಬುದು ಟರ್ಕಿ ಪದ, ಅರ್ಥ; ಸೈನ್ಯ ಶಿಬಿರ ಎಂದು. ಆಗ ಅದು ಮುಸ್ಲಿಂ ರಾಜ ಮನೆತನಗಳ ಭಾಷೆಯಾಗಿದ್ದರಿಂದ ಅದಕ್ಕೆ ಪರ್ಶಿಯನ್ ಲಿಪಿಯು ಬಳಕೆ ರೂಢಿಗೆ ಬಂತು. 14ನೇ ಶತಮಾನದಲ್ಲೇ ಈ ಭಾಷೆ ದಕ್ಷಿಣಕ್ಕೆ ಹೋಗಿ, ಅಲ್ಲಿಯ ಕನ್ನಡ, ತೆಲುಗು ಗಳೊಡನೆ ಬೆರೆತು ಅದಕ್ಕೆ 'ದಖ್ಖನಿ' ಎಂಬ ಹೆಸರೂ ಬಂತು. ದಕ್ಷಿಣದ ರಾಜ್ಯಗಳಲ್ಲಿ ಇದು ಪರ್ಶಿಯನ್ ಭಾಷೆಯ ಬದಲಿಗೆ ಆಡಳಿತ ಭಾಷೆಯೂ ಆಯಿತು. ಅಲ್ಲಿ ಕಾವ್ಯ ಪರಂಪರೆಯ ಆರಂಭವೂ ಆಯಿತು. ಹೀಗಾಗಿ, ದಖ್ಖನಿ ಅಥವಾ ಉರ್ದು ಸಾಹಿತ್ಯದ ಉಗಮ ದಕ್ಷಿಣದಲ್ಲೇ ಎನ್ನುತ್ತದೆ ಒಂದು ಗುಂಪು.

ಆದರೆ ದೆಹಲಿ, ಇಂಡೋ–ಗಂಗಾಪ್ರಸ್ಥ ಪ್ರದೇಶದಲ್ಲಿ ಈ ಹೊಸ ಭಾಷೆ ದೇವ ನಾಗರಿಯಲ್ಲೇ ಬರೆಯಲ್ಪಡುತ್ತಿತ್ತು ಎಂದು ಉರ್ದುವಿನ ಪ್ರಸಿದ್ಧ ಸಾಹಿತಿ ಅಹ್ಮದ್ ಅಲಿ ಅಭಿಪ್ರಾಯ ಪಡುತ್ತಾರೆ. ಈ ಲಿಪಿಯ ಗೊಂದಲದ ಕಾರಣಕ್ಕಾಗಿ, ಉರ್ದು ಸಾಹಿತ್ಯದ ಮೊದಲ ಕವಿ ಅಮೀರ್ ಖುಸ್ರು (1253–1325) ಎಂಬ ತಪ್ಪು ಕಲ್ಪನೆ ಇದೆ ಎಂದೂ ಅವರು ಹೇಳುತ್ತಾರೆ. (ಖುಷ್ ವಂತ್ ಸಿಂಗ್ ಕೂಡಾ ಅಮೀರ್ ಖುಸ್ರುವೇ ಉರ್ದುವಿನ ಮೊದಲ ಕವಿ ಎಂದು ಹೇಳುತ್ತಾರೆ.) ಆದರೆ, ಅಹ್ಮದ್ ಅಲಿಯವರ ಪ್ರಕಾರ 12ರಿಂದ 16ನೇ ಶತಮಾನದ ತನಕ ಉತ್ತರ ಭಾರತದಲ್ಲಿ ಕಾವ್ಯ ಪರಂಪರೆಯೊಂದು ನಿರಾತಂಕ ಬೆಳೆದು ಬಂದಿತ್ತು. ಅವರಲ್ಲಿ ಕಬೀರ್‌ದಾಸ್ ಮೀರಾಬಾಯಿ, ಗುರುನಾನಕ್, ಮಾಲಿಕ್ ಮುಹಮ್ಮದ್ ಜೈಸಿ ಮುಂತಾದವರು ಸೇರುತ್ತಾರೆ. ಇವೆಲ್ಲ ದೇವನಾಗರಿ ಲಿಪಿಯಲ್ಲಿ ಇದ್ದರೂ ಈ ಭಾಷೆ ಉರ್ದುವೆ ಎಂದು ಅಹ್ಮದ್ ಅಲಿ ಅಭಿಪ್ರಾಯ ಪಡುತ್ತಾರೆ. ಆದರೆ, ಕೆಲವು ಉರ್ದು ಸಾಹಿತ್ಯ ಚರಿತ್ರೆ ಕಾರರ ಪ್ರಕಾರ ದಖ್ಖನಿನ ವಲಿ ಕವಿಯೇ ಉರ್ದು ಕಾವ್ಯದ ಆದಿಕವಿ. ಆತನ ಕಾಲ 1688 ರಿಂದ 1741.

ಇಷ್ಟೆಲ್ಲ ಗೊಂದಲಗಳ ನಡುವೆಯೂ ಮುಖ್ಯವಾಗಿ ನಾವು ಗಮನಿಸಬೇಕಾದದ್ದು ಇಷ್ಟು: ಈಗ ನಾವು ಯಾವುದನ್ನು ಸಾಮಾನ್ಯವಾಗಿ ಉರ್ದು ಸಾಹಿತ್ಯ ಎಂದು ಕರೆಯುತ್ತೇವೆಯೋ ಅದು ರೂಪುಗೊಳ್ಳಲು ಶುರುವಾದದ್ದು 17ನೇ ಶತಮಾನ ದಿಂದಾಚೆಗೆ. ಪರ್ಶಿಯನ್ ಪ್ರಭಾವಗಳು ಅಲ್ಲಿಂದಾಚೆಗೆ ಹೆಚ್ಚು ತೀವ್ರವಾಗತೊಡಗಿದವು. ಉರ್ದು ಸಾಹಿತ್ಯಕ್ಕೆ ವಿಶೇಷ ಲಕ್ಷಣಗಳು ಮೈಗೂಡಿದವು.

ಹದಿನೆಂಟು–ಹತ್ತೊಂಬತ್ತನೆಯ ಶತಮಾನಗಳ ಕಡೆಗೆ ನಡೆದಂತೆಲ್ಲಾ ಮಧ್ಯ ಯುಗೀನ ಸಂವೇದನೆ, ಆಧುನಿಕ ಸಂವೇದನೆಯ ಕಡೆಗೆ ನಡೆಯತೊಡಗಿತು, ಭಾರತೀಯ

ನಾಗರೀಕತೆಯಲ್ಲಿ ಮಧ್ಯಯುಗ ಕಡೆಗೊಳ್ಳುತ್ತ ಬಂತು. ಕನ್ನಡ ಸಾಹಿತ್ಯಕ್ಕೂ ಉರ್ದು ಸಾಹಿತ್ಯಕ್ಕೂ ಇರುವ ಇನ್ನೊಂದು ಮುಖ್ಯ ವ್ಯತ್ಯಾಸ ಇದು. ಕನ್ನಡ ಸಾಹಿತ್ಯದಲ್ಲಿ ಮಧ್ಯಯುಗೀನ ಸಂವೇದನೆಯಿಂದ ಥಟಕ್ಕನೆ ಆಧುನಿಕ ಸಂವೇದನೆಂಗತ್ತ ಹಾರುತ್ತೇವೆ. ಕುಮಾರವ್ಯಾಸ, ರತ್ನಾಕರವರ್ಣಿ ಸಂವೇದನೆಯಿಂದ ನಾವು ಥಟಕ್ಕನೆ ಹೊರಳುವುದು ಕುವೆಂಪು ಸಂವೇದನೆಗೆ. ಮಧ್ಯಯುಗದಿಂದ ಆಧುನಿಕ ಯುಗದ ಕಡೆಗೆ ಚರಿತ್ರೆ ನಡೆಯುವುದು ಎಂದರೆ ಅನೇಕ ಹೊಸ ಸಂಕೀರ್ಣ ಅನುಭವಗಳ ಉಗಮ. ಹಳೆಯ ನಂಬಿಕೆಗಳ ಸಮಾಧಾನ ಸ್ಥಿತಿ ಇಲ್ಲ. ಸಂಪ್ರದಾಯದ ಸಂಕೋಲೆಗಳು ಕಳಚಿ ಬೀಳುವ ಘಟ್ಟ ಅದು. ಸಂದೇಹಗಳು, ಅನುಮಾನಗಳು, ದಂಗೆ, ವೈಚಾರಿಕ ಸ್ಫೋಟ ಎಲ್ಲವೂ ಒಟ್ಟಿಗೆ ನುಗ್ಗುವ ಯುಗ ಅದು. 19ನೇ ಶತಮಾನದ ಉರ್ದುವಿನ ಶ್ರೇಷ್ಠ ಕವಿಗಳಲ್ಲಿ ಈ ಎಲ್ಲ ಅನುಭವವನ್ನು ಸಮೃದ್ಧವಾಗಿ ಕಾಣುತ್ತೇವೆ. ಭಾರತೀಯ ನಾಗರೀಕತೆಯ ಒಂದು ವಿಷಾದಮಯ ರೋಮಾಂಚಕ ಯುಗದ ರೂಪಕವನ್ನು ಗಾಲಿಬ್, ಮೀರ್ ಸೌದಾ, ದರ್ದ್, ಮೊಮಿನ್ ಮುಂತಾದ ಕವಿಗಳಲ್ಲಿ ಕಾಣುತ್ತೇವೆ. ಬಹುಪಾಲು ಉಳಿದ ಭಾರತೀಯ ಭಾಷೆಗಳಲ್ಲಿ ಕಾಣದ ಲೋಕವೊಂದನ್ನು ಈ ಕವಿಗಳು ತುಂಬ ಶಕ್ತವಾಗಿ ಹಿಡಿದಿಡುತ್ತಾರೆ.

– 3 –

ಉರ್ದು ಕಾವ್ಯದ ಪ್ರಧಾನ ಪ್ರಕಾರಗಳು ಮೂರು: ಗಜಲ್, ಖಸೀದಾ ಮತ್ತು ಮರ್ಸಿಯಾ. ಮೊದಲನೆಯದು, ಗಜಲ್, ಉರ್ದು ಕಾವ್ಯದ ರಾಣಿ. ಜನಾಟರು ಮತ್ತು ಜನಸಾಮಾನ್ಯರಿಬ್ಬರಲ್ಲೂ ಅಪಾರ ಜನಪ್ರಿಯತೆ ಪಡೆದಿರುವ ಸಾಹಿತ್ಯ ಪ್ರಕಾರ ಇದು. ಎರಡನೆಯದು, ಅರಿಸ್ಟೋಕ್ರಟಿಕ್ ಎನ್ನಬಹುದಾದ ಗಂಭೀರ ಸ್ತುತಿಕಾವ್ಯ. ಮೂರನೆಯದು, ಶೋಕಗೀತ. ಅದರಲ್ಲೂ ಧಾರ್ಮಿಕ ಪರಂಪರೆಯ ಶೋಕಗೀತ ದೆಹಲಿ ಕಾವ್ಯದ ಯುಗ ಮುಗಿದ ಮೇಲೆ ಲಖನೌನಲ್ಲಿ ವಿಶೇಷವಾಗಿ ಬೆಳೆದು ಬಂತು.

– 4 –

'ಗಜಲ್' ಎಂದರೆ ಒಂದು ಅರ್ಥ ನಲ್ಲೆಯೊಂದಿಗೆ ಸಂವಾದ. ಇನ್ನೊಂದು ಅರ್ಥ, ಸಿಕ್ಕಿಬಿದ್ದ ಜಿಂಕೆಯ ಆಕ್ರಂದನ. ಸ್ವಾರಸ್ಯಕರ ಸಂಗತಿ ಎಂದರೆ, ಈ ಎರಡೂ ಅರ್ಥಗಳ ಭಾವನಾ ವಿಶೇಷಗಳೂ ಗಜಲ್ ಪ್ರಕಾರದೊಳಗೆ ಆಳವಾಗಿ ಬೆರೆತಿವೆ. ಈ ಕಾರಣಕ್ಕಾಗಿಯೇ ಗಜಲ್ ಎಂದರೆ ಪ್ರೇಮಗೀತೆ ಮಾತ್ರ ಎಂಬ ತಪ್ಪು ಕಲ್ಪನೆ ವ್ಯಾಪಕವಾಗಿ ಹರಡಿರುವುದು. ಗಜಲ್‌ಗಳಲ್ಲಿ ಪ್ರೇಮ ಎನ್ನುವುದು ಒಂದು ಭಾಷೆ. ಒಂದು ನಿರ್ದಿಷ್ಟ ಮನಸ್ಥಿತಿ, ಅಲ್ಲಿ ಎಲ್ಲ ವಸ್ತುಗಳು, ತಾತ್ವಿಕ ಸಂಗತಿಗಳು, ಅನುಭವಗಳು ಶೋಧನೆಗೆ ಒಳಗಾಗುತ್ತವೆ. ಗಜಲ್ ಎನ್ನುವುದು ಅರೇಬಿಕ್ ಸಾಹಿತ್ಯದಲ್ಲಿಲ್ಲ.

ಅದು ಪರ್ಶಿಯನ್ ಮೂಲದ್ದು. ನಂತರ ಉರ್ದು ಸಾಹಿತ್ಯದಲ್ಲೂ ವಿಶೇಷ ಸಮೃದ್ಧತೆಗೆ ಬಂದ ಪ್ರಕಾರ ಅದು.

ಪರ್ಶಿಯನ್ ಅಥವಾ ಉರ್ದು ಸಾಹಿತ್ಯ ಪ್ರಕಾರಗಳ ಬಗೆಗೆ ಆಳವಾದ ಪರಿಚಯ ಇರದಿದ್ದರೆ ಗಜಲ್ ಪ್ರಕಾರ ವಿಶೇಷ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಮೊದಲ ಮುಖ್ಯ ಸಂಗತಿ ಎಂದರೆ, ಈಚೆಗೆ ನಾವು ಒಗ್ಗಿಹೋಗಿರುವ ಐಕ್ಯತೆ ಗಜಲ್‌ನಲ್ಲಿ ಇಲ್ಲದಿರುವುದು. ಮೇಲುನೋಟಕ್ಕೆ ಅದು ಚೆಲ್ಲಾಪಿಲ್ಲಿಯಾದಂತೆ ಕಾಣುತ್ತದೆ. ಎರಡು ಸಾಲುಗಳು ಅಲ್ಲಿ ಒಂದು ಘಟಕವಾಗುತ್ತದೆ. ಒಂದು ಘಟಕಕ್ಕೂ, ಇನ್ನೊಂದು ಘಟಕಕ್ಕೂ ನೇರ ನಿರಂತರತೆ ಇರದೇ ಇರುವುದು ಮೇಲುನೋಟಕ್ಕೆ ನಿಜವಾಗಿಯೂ ದೊಡ್ಡ ಸಮಸ್ಯೆಯೇ. ಆದರೆ, ಅಲ್ಲಿರುವುದು ಮೂಲತಃ ಭಾವಪಾತ್ಮಕ ಐಕ್ಯತೆ, ವಾತಾವರಣದ ಐಕ್ಯತೆ. ವಸ್ತುವೊಂದು ತನ್ನ ಬೌದ್ಧಿಕ ತರ್ಕದಲ್ಲಿ ಬೆಳೆಯುತ್ತ ಹೋಗುವುದಿಲ್ಲ. ಬದಲಾಗಿ, ಭಾವನಾ ವಾತಾವರಣದಲ್ಲಿ ಸಾಮ್ಯವಿರುವ, ಪರಸ್ಪರ ಅಖಂಡವಾಗಿ ಬೆಳೆಯಬಲ್ಲ ಭಾವಗಳು ಬೆರೆತು, ಒಂದು ವಿಶಿಷ್ಟ ಅನುಭವ ಸೃಷ್ಟಿಯಾಗುತ್ತದೆ. ಹೀಗಾಗಿ, ಇಲ್ಲಿ ಕವನದಲ್ಲಿ ಸಂಬಂಧಗಳು ರೂಪುಗೊಳ್ಳುವ ಕ್ರಮ ಮೂಲತಃ ಹೃದಯ ಗಮ್ಯವಾದದ್ದು. ವಚನಗಳಲ್ಲಿ ಹರಳುಗಟ್ಟುತ್ತಾ ಹೋಗುವ ಕ್ರಮಕ್ಕೂ ಇದಕ್ಕೂ ಇರುವ ವ್ಯತ್ಯಾಸ ಕುತೂಹಲಕಾರಿ. ಮಾಮರ–ಕೋಗಿಲೆ, ಬೆಟ್ಟದ ನೆಲ್ಲಿಕಾಯಿ–ಸಮುದ್ರದ ಉಪ್ಪುಗಳ ನಡುವಣ ಸಂಬಂಧ ವಿಸ್ಮಯಕಾರಿಯಾದರೂ ಅದು ಸ್ಪಷ್ಟ ತರ್ಕದ ಮೇಲೆಯೇ ನಿಲ್ಲುತ್ತದೆ. ಆದರೆ, ಗಜಲ್ ಹಾಗಲ್ಲ. ತುಂಬ ಚೆದುರಿದಂತೆ ಕಾಣುವ ಘಟಕಗಳನ್ನು ದಾಟಿ ಅದರ ಭಾವ ಸ್ಥಿತಿಗಳಿಗೆ ಸ್ಪಂದಿಸುವ ಪ್ರಯತ್ನ ಮಾಡಿದಾಗ ಗಜಲ್‌ಗಳ ತೀವ್ರಾನುಭವ ಸಾಧ್ಯವಾಗುತ್ತದೆ. ಹೀಗಾಗಿ, ಕನ್ನಡ ಓದುಗರಿಗೆ ಉರ್ದು ಕಾವ್ಯ ಓದುವಾಗ ಸೂಕ್ಷ್ಮ ಸಮಸ್ಯೆಯೊಂದು ಎದುರಾಗುತ್ತದೆ. ನಮ್ಮ ಅನ್ನದ ರುಚಿಯ ಹಾಗೆ ನಮ್ಮ ಕಾವ್ಯದ ಕಲ್ಪನೆ ಕೂಡಾ ಎಂದು ಸ್ಪಷ್ಟವಾಗುವುದು ಇಂಥ ಕಡೆಗಳಲ್ಲಿಯೇ. ಕಾವ್ಯದ ಕಲ್ಪನೆ ಎನ್ನುವುದು ಅಷ್ಟು ಸಂಸ್ಕೃತಿ ವಿಶಿಷ್ಟವಾದದ್ದು. ಸಂಸ್ಕೃತಿ ನಿರ್ದಿಷ್ಟವಾದ ಲೋಕಗ್ರಹಿಕೆಯ ಕ್ರಮಗಳ ದಟ್ಟ ವಿವರಗಳ ಮಧ್ಯೆ ಗಜಲ್ ಇವೆಯಾದ್ದರಿಂದ, ಅದರ ಹಿನ್ನೆಲೆ ಸುಲಭವಾಗಿ ಸಿಕ್ಕದೆ ಇದು ಕೇವಲ ಭಾವನಾವೇಶದ ಕಾವ್ಯ ಎಂದು ಅದನ್ನು ಸುಲಭವಾಗಿ ತಳ್ಳಿಹಾಕುವ ಅಪಾಯವಿದೆ. ಗಜಲ್‌ನ ಸಮಗ್ರ ಅನುಭವ ಒಂದು ಇಡೀ ಸಂಸ್ಕೃತಿಯ ಮುಖ್ಯ ವಿವರಗಳ ತಿಳುವಳಿಕೆಯನ್ನು ಬೇಡುತ್ತದೆ ಎನ್ನುವುದು ಉರ್ದು ಕಾವ್ಯದ ಪ್ರಮುಖ ಸಮಸ್ಯೆಯೂ ಹೌದು.

ಅಹ್ಮದ್ ಅಲಿ ಗಜಲ್‌ನ ಬಗೆಗೆ ಚರ್ಚಿಸುತ್ತಾ ಸ್ವಾರಸ್ಯಕರವಾದ ಇನ್ನೊಂದು ಅಂಶವನ್ನು ಪ್ರಸ್ತಾಪಿಸುತ್ತಾರೆ. ಅವರ ಪ್ರಕಾರ, ಎಲಿಯಟ್‌ನ ವೇಸ್ಟ್‌ಲ್ಯಾಂಡಿನ

ರೂಪಕಕ್ಕೂ ಗಜಲ್‌ನ ಮೂಲರೂಪಕಕ್ಕೂ ಅನೇಕ ಸಾಮ್ಯಗಳಿವೆ. ಎರಡೂ ಕಡೆಗಳಲ್ಲಿ ಮೇಲುನೋಟಕ್ಕೆ ಸಂಬಂಧವಿರದ, ಹೊಂದಿಕೊಳ್ಳದ ವಸ್ತು ಪ್ರತಿರೂಪಗಳ ಸನ್ನಿವೇಶಗಳು ತುಂಬಿರುತ್ತವೆ. ವೆಸ್ಟ್‌ಲ್ಯಾಂಡಿನ ಯಶಸ್ಸು ಇರುವುದೇ ಪಶ್ಚಿಮದ ತಾರ್ಕಿಕ ರೀತಿಯ ಆತ್ಯಂತಿಕ ಯಶಸ್ಸಿನಲ್ಲಿ, ಒಂದು ಪ್ರಬಲ ಬೌದ್ಧಿಕ ತರ್ಕ ವೇಸ್ಟ್‌ಲ್ಯಾಂಡಿನ ಭಿನ್ನದ್ರವ್ಯಗಳನ್ನು ಹಿಡಿದಿಟ್ಟಿದೆ. ಆದರೆ, ಗಜಲ್‌ನ ಕ್ರಮ ಭಾವನಾ ಸಮಗ್ರೀಕರಣ. ಸಾಮ್ಯವಿದ್ದರೂ ಎರಡರ ಸಮಗ್ರೀಕರಣದ ಕ್ರಮಗಳು ಬೇರೆ ಬೇರೆ.

– 5 –

ಹಿಂದೆಯೇ ಹೇಳಿದೆ : ಉರ್ದು ಕಾವ್ಯದ ಬಂಗಾರದ ಪರಂಪರೆ 18-19ನೇ ಶತಮಾನದ್ದು. ಅದರ ಪ್ರಮುಖ ವಸ್ತು ಪ್ರೇಮ. ಅಲ್ಲಿ ಪ್ರೇಮವೊಂದು ಮಾನಸ್ಥಿತಿಯಾಗಿ, ಜೀವನ ದರ್ಶನವಾಗಿ ಅನೇಕ ರೀತಿಯ ಅನುಭವಗಳು ಬಂದು ಹೋಗುತ್ತವೆ. ಕೆಲವು ಸಾಮಾನ್ಯ ರೂಪಕಗಳು ಅಥವಾ 'ಕವಿಸಮಯ'ಗಳು ಮತ್ತೆ ಮತ್ತೆ ಕಾಣಸಿಗುತ್ತವೆ, (ಇವು ಗಜಲ್‌ನ ಚರಿತ್ರೆಯಲ್ಲಿ ಉದ್ದಕ್ಕೂ ಕಾಣಸಿಗುತ್ತವೆ.) ಕೆಲವು ಮುಖ್ಯ ರೂಪಕಗಳು ಹೀಗಿವೆ: ಪ್ರೇಮಿ ಹೃದಯವೊಂದು ಗೂಡು, ವಿಧಿಯೆಂಬ ಸಿಡಿಲು ಹೊಡೆದು ಅದು ಚೂರಾಗುತ್ತದೆ. ಗುಲಾಬಿ ಮತ್ತು ಬುಲ್‌ಬುಲ್. ದೀಪ ಮತ್ತು ಪತಂಗ. ರಣಹದ್ದು ಮತ್ತು ಹಕ್ಕಿ.

ಇಲ್ಲಿ ವಸಂತಮಂತೂ ಎಲ್ಲ ಕಡೆಗೆ ಕರೆಯುತ್ತದೆ. ವಸಂತವೇ ಜೀವನದ ದೊಡ್ಡ ಹಂಬಲ. ಯಾವಾಗಲೂ ವಸಂತ ಋತುವಿನ ಸ್ಥಿತಿಯಲ್ಲೇ ಇರಬೇಕು ಎಂಬುದು ಕವಿಯ ಹಟ. ಆದರೆ, ಅದು ಸಾಧ್ಯವಾಗುವುದಿಲ್ಲ. ಅದು ಎಲ್ಲ ವೈಷಮ್ಯಗಳು ಮಾಯವಾಗಿರುವ ಸ್ಥಿತಿ. ವಸಂತ ಋತುವಿನಲ್ಲಿ ಸುಂದರ ತೋಟದಲ್ಲಿರಬೇಕು ಎನ್ನುವುದೇ ಸ್ವರ್ಗ. ಅದಕ್ಕಾಗಿಯೇ ಕವಿಯೊಬ್ಬ ಹಾಡಿದ: 'ವಸಂತ, ನೀನು ಋತುವಲ್ಲ; ಶಾಶ್ವತ ಕನಸು, ಹಂಬಲ.' ಇದೊಂದು ಭೋಗ ಭೂಮಿ. ಆದರೆ, ಈ ಭೂಮಿಯ ನರಕದ ಮಧ್ಯೆ ವಸಂತಕ್ಕೆ ಹಂಬಲಿಸುವುದರಿಂದ ಹೊಸ ವಿಹ್ವಲತೆ, ಕನಸಿನ ಗುಣ ಅದಕ್ಕೆ ಬಂದುಬಿಡುತ್ತದೆ. ಕವಿಯ ನಲ್ಲೆಯೇ ವಸಂತ. ಬಹುಮುಖೀ ಅರ್ಥಗಳು ಹೊಳೆ ಹೊಳೆಯ ತೊಡಗುತ್ತವೆ.

ಬರೀ ಕಾವ್ಯದಲ್ಲಿ ಮಾತ್ರವಲ್ಲ. ಉರ್ದು ಗದ್ಯ ಸಾಹಿತ್ಯದ ಮೊದಲ ಆಧುನಿಕ ಗದ್ಯಕಥನ 'ಬಾಗ್ ಓ ಬಹಾರ್' (1801)ನಲ್ಲೂ ಉದ್ಯಾನವನ ಮತ್ತು ವಸಂತವೇ.

– 6 –

20ನೇ ಶತಮಾನದ ಉರ್ದು ಸಾಹಿತ್ಯ ಬಹುಮಟ್ಟಿಗೆ ಉಳಿದ ಭಾರತೀಯ

ಸಾಹಿತ್ಯ ರೀತಿಗಳ ಘಟ್ಟಗಳನ್ನೇ ಕಂಡಿದೆ. ಆದರೆ, ಉಳಿದ ಭಾರತೀಯ ಸಾಹಿತ್ಯಗಳಿಗಿಂತ ಹೆಚ್ಚಾಗಿ ಒಂದು ದೊಡ್ಡ ಹಠ ಎಂಬಂತೆ ತನ್ನ ದೇಸಿ ನೆಲೆಗಳನ್ನು ಉಳಿಸಿಕೊಂಡಿತು. ಗಜಲ್ ಅಂತೂ ಮತ್ತೆ ಉಳಿದು, ಬೆಳೆದು ಬಂದ ರೀತಿ ಕೂಡಾ ಆಶ್ಚರ್ಯಕರವಾದದ್ದು. ಇಕ್ಬಾಲ್‌ರಂಥ ನವೋದಯ ಕವಿ ಗಜಲ್ ಅನ್ನು ಹೊಸ ರೀತಿಯ ಅನುಭವಗಳ ಅಭಿವ್ಯಕ್ತಿಗೆ ಬಳಸಿಕೊಂಡರು. ಗಜಲ್ ವಿರೋಧಿ ಪ್ರಯತ್ನಗಳೂ ನಡೆದವು. ನಮ್ಮ ನವೋದಯಕ್ಕೂ ಮತ್ತು ಉರ್ದು ಕಾವ್ಯದ ಇಕ್ಬಾಲ್ ಯುಗಕ್ಕೂ ಅನೇಕ ಸಾಮ್ಯಗಳಿವೆ. ನಂತರ ನಮ್ಮ ಹಾಗೆ ಅಲ್ಲಿಯೂ 'ಪ್ರಗತಿಶೀಲ,' 'ನವ್ಯ' ಚಳುವಳಿಗಳು ಕೂಡಾ ಬೆಳೆದುಬಂದವು. ಅದಕ್ಕೆ ಸಾಕ್ಷಿಗಳನ್ನು ಈ ಸಂಕಲನದೊಳಗೇ ಕಾಣಬಹುದು. ಭಾರತೀಯ ಪ್ರಗತಿಶೀಲ ಸಾಹಿತ್ಯದ ಮುಖ್ಯ ಕಥಾ ಸಂಕಲನ 'ಅಂಗಾರೆ' ಕೂಡಾ ಉರ್ದುವಿನದೇ.

– 7 –

ಉರ್ದು ಸಾಹಿತ್ಯದ ಇನ್ನೊಂದು ಪ್ರಮುಖ ಸಮಸ್ಯೆ ಕನ್ನಡ ಸಾಹಿತ್ಯದ ಜೊತೆಗೆ ಸಾಮ್ಯ ಹೊಂದಿರುವಂಥದ್ದು. ಸ್ವಂತಿಕೆ ಮತ್ತು ಅನ್ಯದ ನಡುವಣ ಸಂಘರ್ಷ ಅಲ್ಲಿ ಕೂಡಾ ದೊಡ್ಡ ಸಮಸ್ಯೆ. ಕನ್ನಡದ ಸನ್ನಿವೇಶದಲ್ಲಿ ಸಂಸ್ಕೃತ, ಪಾಶ್ಚಾತ್ಯ ಪರಂಪರೆಗಳು ಕನ್ನಡ ಪ್ರತಿಭೆಯ ಸ್ವಂತಿಕೆಗೆ ದೊಡ್ಡ ಸವಾಲೆಸೆದರೆ, ಉರ್ದುವಿನ ಸನ್ನಿವೇಶದಲ್ಲಿ ಪರ್ಶಿಯನ್ ಮತ್ತು ಪಾಶ್ಚಾತ್ಯ ಪರಂಪರೆಗಳು ಅದೇ ಬಗೆಯ ಸವಾಲನ್ನು ಎಸೆದವು. (ಇಲ್ಲಿ ತಮಾಷೆಯ ಸಂಗತಿ ಎಂದರೆ, ಉರ್ದುವಿನ ಅತಿಯಾದ ಪರ್ಶಿಯನೀಕರಣ ನಡೆದದ್ದು ಮೊಘಲ್ ಆಳ್ವಿಕೆಯಲ್ಲಿ ಕೆಲಸ ಮಾಡುತ್ತಿದ್ದ ಹಿಂದೂ ಅಧಿಕಾರಿಗಳಿಂದ ಎಂಬ ಅಭಿಪ್ರಾಯವೂ ಇದೆ ಎನ್ನುವುದು.)

ಪಾಶ್ಚಾತ್ಯ ಪರಂಪರೆಗಳ ಪ್ರಶ್ನೆ ಬಂದಾಗ ಮಾತ್ರ ಉರ್ದು ಸಾಹಿತ್ಯ ಹೆಚ್ಚು ಸಂಕೀರ್ಣವಾದ, ವರ್ಣರಂಜಿತವಾದ ಪ್ರಕ್ರಿಯೆಗಳನ್ನು ಪ್ರಕಟಿಸಿದೆ. ಪಾಶ್ಚಾತ್ಯ ಪ್ರಭಾವದ ಪ್ರವಾಹಕ್ಕೆ ಅನೇಕ ಸಾಹಿತ್ಯ ಸಂಸ್ಕೃತಿಯ ನದಿಗಳು ತಮ್ಮ ಗತಿಗಳನ್ನೇ ಬದಲಿಸಿಬಿಟ್ಟವು. ಆದರೆ, ಉರ್ದು ಮಾತ್ರ ಹಠ ಹಿಡಿದು ತನ್ನ ಮೂಲರೂಪ, ಗ್ರಹಿಕೆಯ ಕ್ರಮಗಳನ್ನು ಕಾಪಾಡಲು ಪ್ರಯತ್ನಪಟ್ಟದ್ದು ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ತುಂಬ ಮುಖ್ಯ ಸಂಗತಿ. ಪಶ್ಚಿಮದ ಆಕರ್ಷಣೆ ಅಲ್ಲಿ ಎಷ್ಟು ತೀವ್ರವಾಗಿದೆಯೋ, ಅಷ್ಟೇ ಅದರ ಬಗ್ಗೆ ಗಾಢ ವಿರೋಧವೂ ಇದೆ. ಸಾಹಿತ್ಯ ಮತ್ತು ವಸಾಹತೀಕರಣದ ಸಮಸ್ಯೆಯನ್ನು ಉರ್ದು ಸಾಹಿತ್ಯದ ಸಂದರ್ಭದಲ್ಲಿ ಕೊಂಚ ಬೇರೆಯೇ ಆದ ರೀತಿಯಲ್ಲಿ ನೋಡಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಪಶ್ಚಿಮದ ಮನಸ್ಸು ಉರ್ದು ಸಾಹಿತ್ಯದ ಮೂಲರೂಪಕ್ಕೆ ಪ್ರತಿಕ್ರಿಯಿಸಿದ ರೀತಿ, ನಿಧಾನಕ್ಕೆ ಪಶ್ಚಿಮದ ಪ್ರಕಾರಗಳು ಉರ್ದುವಿನಲ್ಲೂ ಬೆಳೆದು ಬಂದ ರೀತಿಗಳು ಆಳವಾದ

ಶೋಧ

ಅಭ್ಯಾಸಕ್ಕೆ ಅರ್ಹ. ಕಾರಣ, ಪಾಶ್ಚಿಮಾತ್ಯರ ಆ ಪ್ರಕ್ರಿಯೆ ಒಟ್ಟು ಭಾರತೀಯ ಅಥವಾ ಪೌರ್ವಾತ್ಯ ಸಾಹಿತ್ಯಕ್ಕೂ ಅನ್ವಯವಾಗುವಂಥವು.

1813 ರಲ್ಲಿ ಉರ್ದುವಿನ ಮೊದಲ ತಲೆಮಾರಿನ ಆಧುನಿಕ ಕಥನ, ಕಾದಂಬರಿಯಾದ 'ಬಾಗ್ ಓ ಬಹಾರ್' ಅನ್ನು ಅನುವಾದಿಸಿದ ಇಂಗ್ಲಿಷ್ ಲೇಖಕಿಯೊಬ್ಬಾಕೆ ಆ ಕೃತಿಯ ಬಗ್ಗೆ ಹೇಳುವ ಮಾತುಗಳು ಇಡೀ ಸಮಸ್ಯೆಯನ್ನು ನಿರ್ದಿಷ್ಟವಾಗಿ ವಿವರಿಸುತ್ತವೆ. ಆಕೆ ಹೇಳಿದ್ದು ಹೀಗೆ: ಈ 'ಬಾಗ್ ಓ ಬಹಾರ್' ಕೃತಿಯಲ್ಲಿ ಒಂದು ಕಥೆ ಇನ್ನೊಂದರೊಳಗೆ ಬೆರೆತುಹೋಗುತ್ತದೆ. ಎಲ್ಲಾ ಕಥೆಗಳೂ ಒಂದೇ ಥರ ಕಾಣುತ್ತವೆ. ಸಮಸ್ಯೆ ಇರುವುದು ಪ್ಲಾಟ್‌ನ ಸಂಕೀರ್ಣತೆಯಲ್ಲಿ ಅಲ್ಲ. ಪಾತ್ರ, ಉದ್ದೇಶ, ಘಟನೆಗಳ ಸಂಬಂಧದ ಬಗ್ಗೆ ದೊಡ್ಡ ಗೊಂದಲವಿದ್ದು ಎಲ್ಲಾ ಅಯೋಮಯ. 'ಓರಿಯಂಟಲ್ ಕಥನ'ದ ಸಂಕೀರ್ಣ ಗೋಜಲು ಇದು. ಅದೇ ಕೃತಿಯನ್ನು ಅನುವಾದಿಸಿದ ಇನ್ನೊಬ್ಬ ಲೇಖಕನೂ ಅದೇ ಸುಮಾರಿನಲ್ಲಿ 'ಓರಿಯಂಟಲ್ ಕಥನ' ಸ್ವರೂಪದ ಬಗ್ಗೆ ಇದೇ ಮಾತು ಹೇಳುತ್ತಾನೆ.

ಸಾಹಿತ್ಯ ಸಂಸ್ಕೃತಿಯಲ್ಲಿ ಪಶ್ಚಿಮ ಗೆಲುವು ಸಾಧಿಸಿದ್ದೇ ಈ ರೀತಿಯ ಓರಿಯಂಟಲ್ ಕಥನಗಳನ್ನು ಪೂರ್ಣವಾಗಿ ನಿರ್ನಾಮ ಮಾಡುವಲ್ಲಿ. ಮೀರ್ ಉಮನ್ ಎಂಬ ಲೇಖಕನ ಕಥನ ತನ್ನೆಲ್ಲ ಅತಿಮಾನುಷ, ಅಲೌಕಿಕ ಘಟನೆಗಳೊಂದಿಗೂ ತುಂಬ ಆಕರ್ಷಕವಾಗಿ ಕಾಣುತ್ತದೆ. ಕನ್ನಡದಲ್ಲೂ ಕಾದಂಬರಿ ಪೂರ್ವದ ಕಥಾನಕಗಳು ಹೀಗೆಯೇ ಇದ್ದವು ಎಂಬುದನ್ನು ನಾವು ಗಮನಿಸಬೇಕು. ಎರಡೂ ಕಡೆಗಳಲ್ಲಿ ಮುಂದೆ 'ಓರಿಯಂಟಲ್ ಕಥನ'ಗಳೇ ಕಣ್ಮರೆಯಾದವು. ವಸಾಹತುಶಾಹಿಯ ಅಂತಿಮ ದಿಗ್ವಿಜಯ ಇದು.

– 8 –

ಚಿಕ್ಕ ಮುನ್ನುಡಿಯಲ್ಲಿ ಸಾಹಿತ್ಯ ಪರಂಪರೆಯೊಂದರ ಮುಖ್ಯ ಸತ್ತ್ವವನ್ನು ವಿವರವಾಗಿ ಹಿಡಿದಿಡುವುದು ಕಷ್ಟ. ಅದರಲ್ಲೂ ಹತ್ತಿರವಿದ್ದೂ ದೂರವಿರುವ ಉರ್ದು ಸಾಹಿತ್ಯದ ಬಗ್ಗೆ ಈ ಕೆಲಸ ಇನ್ನೂ ಕಷ್ಟ. ಉರ್ದು ಕಾವ್ಯದೊಂದಿಗಿನ ತೀವ್ರ ಅನುಸಂಧಾನ ಕಾವ್ಯದ ಬಗೆಗಿನ ನನ್ನ ಅನೇಕ ಕಲ್ಪನೆಗಳನ್ನು ಬದಲಿಸುವಂತೆ ಮಾಡಿತು. ಎಷ್ಟರ ಮಟ್ಟಿಗೆ ನಮ್ಮ ಕಾವ್ಯ ಕಲ್ಪನೆಯಲ್ಲಿ ಪಶ್ಚಿಮ ಬಂಧಿಯಾಗಿ ಬಿಟ್ಟಿದ್ದೇವೆ ಎಂದು ಯೋಚಿಸುವಂತೆ ಮಾಡಿತು.

ಫೆಬ್ರವರಿ 1990ರ ಅನುವಾದ ಶಿಬಿರ ನನ್ನ ವೈಯುಕ್ತಿಕ ಬೆಳವಣಿಗೆಯಲ್ಲಿ ಕೂಡಾ ತುಂಬ ಮುಖ್ಯವಾಗಿ ಬಿಟ್ಟಿತು. ಫೆಬ್ರವರಿ ತಿಂಗಳಿನ ಹದವಾದ ಬಿಸಿಲಿನಲ್ಲಿ ಉರ್ದು ಕಾವ್ಯದ ಮನಸ್ಥಿತಿಗಳಿಗೆ ನಾನು ಪ್ರವೇಶಿಸಿದ್ದು ತುಂಬ ಪ್ರಿಯವಾಗಿ ಉಳಿದು ಬಂದಿದೆ.

ನನಗಿನ್ನೂ ನೆನಪಿದೆ: ಫೆಬ್ರವರಿ 22ರ ಮಧ್ಯಾಹ್ನ ಉರ್ದು ಕಾವ್ಯದ ಮೂಲರೂಪಕವಾದ ವಸಂತದ ಅರ್ಥ ಥಟ್ಟನೇ ಎದುರಾದಾಗ ಹುಟ್ಟಿದ ಗೊಂದಲ, ಸಂಭ್ರಮ!

– 9 –

ಈ ಮುನ್ನುಡಿ ಕಲ್ಕತ್ತ ನ್ಯಾಷನಲ್ ಲೈಬ್ರರಿಯ ಗೆಳೆಯ ಕುಮಾರಪ್ಪನವರಿಂದಲೇ ಸಾಧ್ಯವಾದದ್ದು. ಕಲ್ಕತ್ತೆಯ ಆ ಹಳೆಯ ಮೋಹಕ ಕಟ್ಟಡದಲ್ಲಿ ಉರ್ದು ಸಾಹಿತ್ಯದ ತುಂಬ ಅಪರೂಪದ ಇಂಗ್ಲಿಷ್ ಅನುವಾದಗಳನ್ನು ಕುಮಾರಪ್ಪ ನನಗೆ ಒದಗಿಸಿ ಹೊಸಲೋಕವನ್ನೆ ತೆರೆದಿದ್ದರು. ಅಲ್ಲಿಯ ತನಕ ಅಸ್ಪಷ್ಟ ಭಾವುಕ ಅನುಭವವಾಗಿದ್ದದ್ದಕ್ಕೆ ಸ್ಪಷ್ಟ ಮಾಹಿತಿಯ, ಜ್ಞಾನದ ಚೌಕಟ್ಟು ಸಿಕ್ಕಿತು. ಜೊತೆಗೆ, ಕಲ್ಕತ್ತಕ್ಕೆ ಉರ್ದು ಸಾಹಿತ್ಯದಲ್ಲಿ ತುಂಬ ವಿಶಿಷ್ಟ ಸ್ಥಾನವೂ ಇದೆ. ಗಾಲಿಬ್ ಬಂದು ಈ ಮಹಾನಗರದ ಬೀದಿಗಳಲ್ಲಿ ವ್ಯಾಮೋಹಿಯಾಗಿ, ಆರ್ತನಾಗಿ ಅಲೆದಾಡಿದ್ದ! ಕಲ್ಕತ್ತೆಯ ಭೇಟಿ ಅವನ ಜೀವನದ ದೊಡ್ಡ ತಿರುವು ಎನ್ನುತ್ತಾರೆ, ಉರ್ದುವಿನ ಆಧುನಿಕ ಗದ್ಯ ರೂಪುಗೊಂಡಿದ್ದೇ ಫೋರ್ಟ್‌ವಿಲಿಯಂ ಕಾಲೇಜಿನಲ್ಲಿ. ಆ ಎಲ್ಲ ನೆನಪುಗಳು ಕಲ್ಕತ್ತೆಯಲ್ಲಿ ಮುತ್ತತೊಡಗಿದವು.

ಮುಂದೆ ಈ ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ಕಲ್ಕತ್ತ, ಧಾರಾ, ಬೆಂಗಳೂರುಗಳಲ್ಲಿ ಈ ಮುನ್ನುಡಿ ಬರೆದೆ. ಈ ತಿಂಗಳುಗಳ ಪ್ರಳಯದಂಥ ಕೋಮು ಹಿಂಸೆಯಲ್ಲಿ ಉರ್ದು ಕಾವ್ಯದ ಅನುಭವ ಮತ್ತಷ್ಟು ತೀವ್ರವಾಗಿ, ಆತ್ಮೀಯವಾಗಿ ಕಾಡತೊಡಗಿತು. ಅದಕ್ಕೆಂದೇ ಉರ್ದು ಕಾವ್ಯ ಎಂದರೆ "ಪ್ರಳಯದ ನಡುವಿನ ವಸಂತ" ಎನ್ನಿಸಿತು!

ಕೆಲವು ಸಹಾಯಕ ಗ್ರಂಥಗಳು:

1) ಅಹ್ಮದ್ ಅಲಿ, ದಿ ಗೋಲ್ಡನ್ ಟ್ರೆಡಿಷನ್, (ಕೊಲಂಬಿಯಾ ಯುನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, 1973).

2) ಮುಹಮ್ಮದ್ ಸಾದಿಕ್, ಎ ಹಿಸ್ಟರಿ ಆಫ್ ಉರ್ದು ಲಿಟರೇಚರ್ (ಆಕ್ಸ್‌ಫರ್ಡ್ ಯುನಿವರ್ಸಿಟಿ ಬುಕ್ ಹೌಸ್, ದೆಹಲಿ, 1984).

3) ಶಾಯಿಸ್ತಾ ಅಖ್ತರ್ ಖಾನು, ಕ್ರಿಟಿಕಲ್ ಸರ್ವೆ ಆಫ್ ದಿ ಡೆವಲಪ್‌ಮೆಂಟ್ ಆಫ್ ದಿ ಉರ್ದು ನಾವೆಲ್ (ಲಾಂಗ್‌ಮನ್ಸ್, ಲಂಡನ್ 1945).

4) ಸರ್ದಾರ್ ಜಾಫ್ರಿ, ಕುರತುಲೈನ್ ಹೈದರ್, ಗಾಲಿಬ್ ಅಂಡ್ ಹಿಸ್ ಪೊಯೆಟ್ರಿ (ಪಾಪ್ಯುಲರ್ ಪ್ರಕಾಶನ, ಬಾಂಬೆ, 1970).

ಶೂದ್ರ

5) ಬ್ರೈದರ್ ಬಖ್ತ್ ಮತ್ತು ಕ್ಯಾಥಲೀನ್ ಗ್ರಾಂಟ್, ಆ್ಯನ್ ಆ್ಯಂಥಾಲಜಿ ಆಫ್ ಮಾಡರ್ನ್ ಉರ್ದು ಪೊಯಿಟ್ರಿ (ದೆಹಲಿ, 1984).

6) ಫಜಲ್ ಮಹಮೂದ್ ಆಸಿರಿ, ಸ್ಟಡೀಸ್ ಇನ್ ಉರ್ದು ಲಿಟರೇಚರ್ (ವಿಶ್ವಭಾರತಿ, ಕಲ್ಕತ್ತ, 1954).

7) ಅಬ್ದುಲ್ ಖಾದಿರ್, ಫೇಮಸ್ ಉರ್ದು ಪೊಯೆಟ್ಸ್ ಅಂಡ್ ರೈಟರ್ಸ್ (ನ್ಯೂ ಬುಕ್ ಸೊಸೈಟಿ ಲಾಹೋರ್, 1947).

8) ಶೇಕ್ ಅಬ್ದುಲ್ ಖಾದಿರ್, ಉರ್ದು ಲ್ಯಾಂಗ್ವೇಜ್ ಅಂಡ್ ಲಿಟರೇಚರ್ (ಯೂನಿವರ್ಸಿಟಿ ಆಫ್ ಅಲಹಾಬಾದ್ 1942)

9) ಎಸ್. ಎನ್. ಫರೀದಿ, ಹಿಂದೂ ಹಿಸ್ಟರಿ ಆಫ್ ಉರ್ದು ಲಿಟರೇಚರ್ (ರಾಮಪ್ರಸಾದ್ ಅಂಡ್ ಸನ್ಸ್, ಆಗ್ರಾ, 1966).

10) ಎನ್.ಎಸ್. ಗೋರೆಕರ್, ಗ್ಲಿಂಪ್ಸಸ್ ಆಫ್ ಉರ್ದು ಲಿಟರೇಚರ್ (ಜೈಕೊ, ಬಾಂಬೆ, 1961).

11) ಆನ್ ಮೇರಿ ಷಿಮೆಲ್, ಇಸ್ಲಾಮಿಕ್ ಲಿಟರೇಚರ್ ಆಫ್ ಇಂಡಿಯಾ (ಆ್ಯಟೊ ಹಾರೊಸೊವಿಟ್ಜ್, ಲಿಸ್‌ಬೆಡನ್, 1973).

12) ಎಡಿತ್ ಎಫ್. ಪ್ಯಾರಿ, ದಿ ಸ್ಟೋರೀಸ್ ಆಫ್ ದಿ ಬಾಗ್ ಒ ಬಹಾರ್ (ಅಲೆನ್ ಅಂಡ್ ಕೊ., ಕಲ್ಕತ್ತ, 1890).

(ಈ ಮುನ್ನುಡಿಯು ಮಹತ್ವಪೂರ್ಣವಾಗಿರುವುದರಿಂದ
'ಉರ್ದು ಸಾಹಿತ್ಯ' ಎಂಬ ಕೃತಿಯಿಂದ ತೆಗೆದುಕೊಂಡಿದೆ)

ಎಚ್ಚರಿಕೆ

ಸಮುದ್ರದಲ್ಲಿ ಕಳೆದೆರಡು ದಿನದಿಂದ
ಚಂಡಮಾರುತ
ಅಸಡ್ಡೆಯಲ್ಲಿ ಮಲಗಿ ಅವಳು ಕೊಟ್ಟ
ಪುಸ್ತಕದ ಪುಟಗಳನ್ನು ತಿರುವಿದರೆ
ರಪ್ ರಪ್ಪೆಂದು ನಗರದ ತುಂಬೆಲ್ಲಾ
ಬೀಸುತ್ತಿದ್ದ ಗಾಳಿ ಬಿರುಸಿ-
ಗೆ ಎಂದೆಂದೋ ಹೆಕ್ಕಿ ಒಳಗೆ ಇರಿಸಿದ್ದ
ಪುರಾಣ ಪಾರಿವಾಳದ ಪುಕ್ಕ
ಬೇಕಾಬಿಟ್ಟಿ ಹಾರಿಹೋದವು ಎಲ್ಲೆಂದರಲ್ಲಿ!

ಎಚ್.ಎಂ. ಕನಕ, ಡಿ-409, ಇನ್‌ಲಾಕ್ಸ್ ಪಾರ್ಕ್, ಯಾರಿ ರೋಡ್, ವರಸೋವ,
ಅಂಧೇರಿ (ವೆಸ್ಟ್), ಬಾಂಬೆ-61

ಪುನಃ ಹಿಡಿಯುವ ಗೋಜಿಗೂ ಹೋಗದ
ಶಿಲಾಪ್ರತಿಮೆಗೆ ಅಮಾವಾಸ್ಯೆ
ಮರುದಿನ ಬೆಳ್ಳಂಬೆಳಿಗ್ಗೆ ಕೆಲಸದಾಕೆ ಒಂದು
ಗುಡಿಸಿ ಹೋದರೆ ಡಸ್ಟ್‌ಬಿನ್ನಿನ ತುಂಬಾ ಹಕ್ಕಿ ಪುಕ್ಕ...

* * * * * *

ಪ್ರತಿಮೆಗಳು ಹೊಳೆಯುವುದಿಲ್ಲ
ಮರಳಿ ತೊಳೆಯದೆ ಬೆಳಗಲಿಲ್ಲ
ಮಳೆಗಾಲದಲ್ಲೂ ಬಿಸಿಲು ಸೂರು ಬಾರದೆ
ಸೂರ್ಯನಿಗೆ ಕಾರ್ಮುಗಿಲ ಕೇಲುನೋಟ
ಹನಿ ಜಿನುಗಿದರೂ ಕೆರಳಿ ತೊಯ್ಯು
ತೊಪ್ಪೆಯಾಗುವ ಬಯಕೆ ಗೂಡಲ್ಲ
ಅಪೂರ್ಣ ಸಾಲು ಗಜಿಬಿಜಿಯು ನಾಡು

* * * * * *

"ನೀನೊಂದು ಶತ ಪುಕ್ಕಲು" ನಿರ್ದೇಶಕನ ಗತ್ತಿನನುಡಿ
"ಕೆಲವೊಮ್ಮೆ ಹೆದರುವುದೇ ಒಳಿತು" ಅವಳು ಸೂಕ್ಷ್ಮ
ಸಂಸ್ಕೃತಿಗೆ ಹೊಸತು ಬೇಕಿಲ್ಲ, ಪ್ರತಿದಿನ
ಅರ್ಧರಾತ್ರಿಗೆ ಫೋನಿಸಿದರೆ ಏನು ಹೇಳಬೇಕು?
ಹೀಗೆಲ್ಲಾ ಸಂಬಂಧ ಅರಸಬೇಡಿ
ದುಂಬಾಲು ಬೀಳಬೇಡಿ.

— ಎಚ್. ಎಂ. ಕನೆ!

ಜೀವಕ್ರಿಯೆ

ಅಗೆದು ಒಗೆಯದೇ ಕೆದಕಿ
ಒಳವು ಕೊಡುವುದಿದ್ದರೆ
ಅಳಕ್ಕೆ ಸೆಲೆಯಾಗಿ ಉಕ್ಕಿ ತಂಪೆರೆಯುತ್ತೇನೆ
ತಿಳಿದೆಯಾ?

ಉತ್ತನೂರು ರಾಜಮ್ಮ ಪಿ. ಶೆಟ್ಟಿ, ಕೋ. ಎಸ್. ವಿಶ್ವನಾಥಶೆಟ್ಟಿ, ವಕೀಲರು,
ಚಿಂತಾಮಣಿ-563 125

ಗಿರಿ ಕಂದರವೆಲ್ಲಾ ಜಗ್ಗದೇ ಬೆಸೆದ
ನಾರು ಬೇರಿನ ಬಸಿರ ಸಾಂದ್ರವಲ್ಲವೆ ನಾನು;

ಕಾಲಿನುಂಗುರು ಕೆರೆದು ನಂಜಾಗಿಸದೆ
ನನೆಯ ಮೊನೆಯನ್ನು ಅಕ್ಕುಲತೆ
ಎರೆದು ನೇವರಿಸಿದರೆ, ಬೆರಳು
ಪುಲಕಕ್ಕೆ ಸಿಕ್ಕಿ ಚೆಲ್ಲುತ್ತೇನೆ
ಮರೆತೆಯಾ ?
ನೆಲದೊಳದಿನ ಕಡಲು ಅವಿತಿಟ್ಟ
ಸಿರಿ ಒಡಲ ಮಡಿಲು
ಹೊತ್ತಿಲ್ಲ ಹೇಳು;

ತೊಳೆಯದೇ ಬಳೆದು ಸುರಿಯದೆ
ಒಳಲೋಳೆ ಮುರುಗಿಸಿ ಬದುಕಲು
ಸಾರ ಒಗ್ಗರಿಸಿ ಬತ್ತಿಕೊಟ್ಟರೆ
ಬುಡವಾಗಿ ಕಾಂಡಕೆಡೆಯಾಗಿ
ತಳಮಣ್ಣ ಕಣ್ಣಾಗಿ
ಹಸಿರ ಉಸಿರಾಡುತ್ತಲೇ ಇರುತ್ತೇನೆ
ಮುಟ್ಟಿನೋಡು ಮನಸ ತಟ್ಟಿನೋಡು
ಹಿಗ್ಗಾಗಿ, ಹಬ್ಬುತ್ತೇನೆ ಅರಳುತ್ತೇನೆ
ಸುತ್ತಲ್ಲಾ ಸೆರಗ ಹೊಚ್ಚುತ್ತೇನೆ
ದಿಕ್ಕುದೆಸೆ ಕಟ್ಟಿಕುಳಿತ
ಮುಸುರು ಕತ್ತಲ ಮೌನಕ್ಕೆಲ್ಲಾ
ಕಕ್ಷಿಯಾಗಿ ಸಾಕ್ಷಿಯಾಗಿ
ಅಂಟು ಒಸರುತ್ತಲೆ
ಇರುತ್ತೇನೆ.

— ಉತ್ತನೂರು ರಾಜಮ್ಮ ವಿ. ಶೆಟ್ಟ

ನವೀನಕುಮಾರರ ಎರಡು ಕವಿತೆಗಳು

"ಆಳದ ಅಳಲು"

ಮನದಾಳದಲ್ಲೆಲ್ಲೋ ಮೊಳಕೆಯೊಡೆದ
ಭಾವನೆಯ ಬೀಜ....
ಹಬ್ಬಿ, ಹಬ್ಬಿ, ಹೆಮ್ಮರವಾಗಿ
ಹೊರ ಚಾಚುತ್ತದೆ, ಕೊಂಬೆ-ರೆಂಬೆಗಳ
ನನ್ನ ನರನಾಡಿಗಳನೊಡೆದು!

ಹೀರಿಯೇ ತೀರುತ್ತದೆ,
ಯಾವ ಪುರುಷಾರ್ಥಕ್ಕಾಗಿಯೋ
ನಾನರಿಯೆ....
ನನ್ನ ಧಮನಿಗಳಲಿ ಹರಿವ ಕೆಂಪು ನೆತ್ತರನ್ನು!

ನನ್ನ ಕಣ್ಣುಗಳಲ್ಲಿ ಕಣ್ಣುಹಚ್ಚಿ
ಕನಸು ಕಾಣುತ್ತದೆ,
ನನ್ನುಸಿರು ಕುಡಿದು,
ನಿಟ್ಟುಸಿರು ಬಿಡುತ್ತದೆ!

ಹೀಗೆ ಎಲ್ಲೆಂದರಲ್ಲಿ
ಮುಳ್ಳನ್ನ ಬಿಸಿನಿಂತ ಈ ಗೋಜಲಲ್ಲಿ,
ತಡಕುತ್ತೇನೆ....
ನನ್ನನ್ನು ನಾನೇ ಹುಡುಕುತ್ತೇನೆ!

"ಹೆಸರಿಲ್ಲದ ಕವಿತೆ"

ನನ್ನ ಕನಸಲ್ಲಿ ಬಂದ
ಗೆಳತಿ....
ಉಸುರಿದಳು ಕಿವಿಯಲ್ಲಿ
"ಬರೆ ಒಂದು ಕವಿತೆ"

ಎಚ್. ಎಸ್. ನವೀನಕುಮಾರ್, ಅಡಯಾರ್, ಮದ್ರಾಸ್-600 020

"ಹೆಸರನಿಡದಿರು ಅದಕೆ
ಅದರ ಉಸಿರು ಹಬ್ಬಲಿ
ಅನವರತಕೆ"

"ಗಾಳಿಯಲಿ ಅದು
ಗುಂಗಾಡಿಕೊಂಡಿರಲಿ
ಮೇಘದೊಡಲು ಸೇರಿ
ಮಳೆಯಾಗಿ ಮಣ್ಣಸೇರಲಿ!"

"ಹೂವ ದಳವಾಗಲಿ ಅದು
ಬೇಸರಿಸಬೇಡ, ಮುದುಡಿದಾಗ!
ಮತ್ತೆ ಅರಳುವುದು....
ತಿರು ತಿರುಗಿ ರವಿಗೆ ಮೊಗಮಾಡಿ ನಿಲ್ಲುವುದು".

— ಎಚ್. ಎಸ್. ನವೀನಕುಮಾರ್

ಓಲೆನೋಟ

ಪ್ರಿಯ ಶೂದ್ರ,

ಈಗ್ಗೆ ಮೂರು-ನಾಲ್ಕು ವರ್ಷಗಳ ಹಿಂದೆ ಪರಿಸರವಾದಿಗಳ ಗುಂಪುಗಳು 'ಚರ್ನೊಬೈಲ್ ದಿನ'ವನ್ನು ಮಲ್ಲೇಶ್ವರಂ ಛಾಪ್ಸ್ಯಾಂಪಾರ್ಕ್‌ನಲ್ಲಿ ಆಚರಿಸಿದರು. ಆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಒಬ್ಬ ಹಿರಿಯ ಕವಿ, ಒಬ್ಬ ಯುವ ಸಾಹಿತ್ಯ

ಈ ಪತ್ರವನ್ನು ನಮ್ಮ ನಡುವಿನ ಚರ್ಚೆ ಆರೋಗ್ಯಪೂರ್ಣವಾಗಿರಲಿ ಎಂದು ಪ್ರಕಟಿಸುತ್ತಿದ್ದೇವೆ. ಹಾಗೆಯೇ ನಮ್ಮೆಲ್ಲ ಹೋರಾಟದ ಭಿನ್ನಾಭಿಪ್ರಾಯಗಳು ಕೇವಲ ಖಾಸಗಿಯಾಗಿ ಮಾತ್ರ ಇರಬೇಕಾಗಿಲ್ಲ. ಓದುಗರ ಪ್ರತಿಕ್ರಿಯೆಗೆ ಸ್ವಾಗತವಿದೆ.

— ಸಂ.

ವಿಮರ್ಶಕರು ಬಂದಿದ್ದರು. ಅವರಿಬ್ಬರೂ ಪ್ರಬಂಧವಾಗಿ ಪರಿಸರವಾದಿ ಚಳುವಳಿ ಒಳಗೊಳ್ಳಬೇಕಾದ ಸಾಮಾಜಿಕ ಆಯಾಮದ ಬಗ್ಗೆ ಮಾತನಾಡಿದರು. ಭಾಷಣಗಳ ನಂತರ ಕೈಗಾ ಅಣುಸ್ಥಾವರದ ಬೆಂಗಳೂರು ಕಛೇರಿಗೆ ನಾವೆಲ್ಲಾ ಬಿಸಿಲಿನಲ್ಲಿ ಒಣಗಿಕೊಂಡು, ಘೋಷಣೆ ಕೂಗುತ್ತ ಮೆರವಣಿಗೆ ಹೋದೆವು. ಈ ಇಬ್ಬರು ಬುದ್ಧಿಜೀವಿ ಸಾಹಿತಿಗಳು ಮಾತ್ರ ಭಾಷಣ ಮುಗಿದ ನಂತರ ನಾಪತ್ತೆಯಾಗಿದ್ದರು. ಮೆರವಣಿಗೆಯಲ್ಲಿ ಬರಲಿಲ್ಲ!

ಶೂದ್ರ, ಈ ಪೀಠಿಕೆಯೊಂದಿಗೆ ನೀನು ಇತ್ತೀಚೆಗೆ ಸಿಕ್ಕಾಗ ನಿನ್ನೊಂದಿಗೆ ಆಡಿದ ಜಗಳವನ್ನು ಈಗ ಮುಂದುವರೆಸುತ್ತಿದ್ದೇವೆ.

'ಬೋಧಿವೃಕ್ಷ'ದ ವಿಚಾರ ಸಂಕಿರಣಕ್ಕೆ ನಾವು ಬರದಿರುವ ಬಗ್ಗೆ ಪ್ರೀತಿಯಿಂದಲೇ ನೀನು ಜಗಳವಾಡಿದೆ. ಅಂತಹ ವಿಚಾರ ಸಂಕಿರಣಗಳಿಗೆ ಬರಬೇಕೆಂದು ಇಷ್ಟವಿದ್ದರೂ, ಈಚೆಗೆ ಅಂತಹ ಸಂಕಿರಣಗಳಿಗೆ ಹೋಗಬಾರದೆಂದು ನಾವು ಏಕೆ ನಿರ್ಧಾರಿಸಿದ್ದೇವೆಂದು ನಿನಗೆ ಸಿಟ್ಟಿನಿಂದಲೇ ವಿವರಿಸಿದೆವು.

ಹಿಂದೆ ಬ್ರಾಹ್ಮಣರು 'ಜ್ಞಾನ'ವಲಯದಲ್ಲೂ, ಶೂದ್ರರು 'ಶ್ರಮ' ವಲಯದಲ್ಲೂ ತೊಡಗಿಸಿಕೊಂಡರೆಂದೂ, 'ಶ್ರಮ'ವು 'ಜ್ಞಾನ'ದಷ್ಟು ಮುಖ್ಯವಾದರೂ, ಬ್ರಾಹ್ಮಣರು ತಮ್ಮ ಜ್ಞಾನಬಲದಿಂದ ನಮ್ಮ ಇಡೀ ಸಂಸ್ಕೃತಿ, ಮೌಲ್ಯ ಮತ್ತು ಮನಸ್ಸುಗಳನ್ನು ವಶಹತೀಕರಿಸಿಕೊಂಡರು ಎಂಬ ಪ್ರಾಥಮಿಕ ಪಾಠ ನಮಗೆಲ್ಲ ಗೊತ್ತಿದೆ. ಇದನ್ನು ವಿರೋಧಿಸುತ್ತಲೇ ಬಂದಿರುವ ನಮ್ಮ ಅನೇಕ ಸಾಹಿತಿ ಮಿತ್ರರು, ತಮ್ಮ ಸಾಹಿತ್ಯದ ಬಲದಿಂದಲೇ ಬುದ್ಧಿಜೀವಿಗಳು ಎನಿಸಿಕೊಂಡು ಆಗ ಬ್ರಾಹ್ಮಣರು ಮಾಡಿದ್ದನ್ನೇ ಈಗ ತಾವು ಮಾಡುತ್ತಿದ್ದಾರೆ. ಹಾಗೆ ನೋಡಿದರೆ, ಸಾಹಿತಿಗಳೆಂದರೆ ಬುದ್ಧಿಜೀವಿಗಳೆಂಬ ಅರ್ಥರಹಿತ ಕಲ್ಪನೆ ನಮ್ಮ ಪರಿಸರಕ್ಕೆ ವಿಶೇಷವೇನೋ. ನವೋದಯದ ಸಾಹಿತಿಗಳೇ ಮೇಲು. ನಾವು ಸಾಹಿತಿಗಳು ಮಾತ್ರ ಎಂದು ಗುರುತಿಸಿಕೊಂಡು, ತಮ್ಮ ಮಿತಿ ಅರಿತುಕೊಂಡು, ಅಹಂಭಾವದಿಂದ ಎಲ್ಲದರಲ್ಲೂ ತಮ್ಮ ಮೂಗುತೂರಿಸದೇ ತಮ್ಮಷ್ಟಕ್ಕೆ ತಾವು ಇರುತ್ತಿದ್ದರು. ಈಗಿನ ಸಾಹಿತಿಗಳಂತೆ ತಮ್ಮ ಸಾಹಿತ್ಯದ ಭಾರವನ್ನು ಎಲ್ಲ ಕ್ಷೇತ್ರಗಳಲ್ಲೂ ತೂಗಿಹಾಕಲು ಪ್ರಯತ್ನಿಸುತ್ತಿರಲಿಲ್ಲ. ಕಳೆದ ಹದಿನೆಂಟು ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ, ಸಂಸ್ಥೆಗಳಲ್ಲಿ—ತುರ್ತು ಪರಿಸ್ಥಿತಿ ಜೆ.ಪಿ. ಯುವ ಸಂಘಟನೆ, ಆಮ್‌ನೆಸ್ಟಿ ಇಂಟರ್‌ನ್ಯಾಷನಲ್, ಮಾನವಹಕ್ಕು ಚಳುವಳಿ, ಸಮಾಜವಾದಿ ಚಳುವಳಿ, ಮಹಿಳಾ ಚಳುವಳಿ, ಶಿಕ್ಷಣ ಹಾಗೂ ಅಧ್ಯಾಪಕರ ಚಳುವಳಿ-ಇತ್ಯಾದಿಗಳೊಂದಿಗೆ ನಮ್ಮದೇ ಆದ ರೀತಿಯಲ್ಲಿ ಸಣ್ಣದಾಗಿ, ಕಾರ್ಯಕರ್ತರಾಗಿ ತೊಡಗಿಕೊಂಡಿರುವ ನಮಗೆ ಹೋರಾಟ ಹಾಗೂ ರಚನಾತ್ಮಕ ಕ್ಷೇತ್ರಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡಿರುವ ಹತ್ತಾರು ಸಾಮಾಜಿಕ ಕಾರ್ಯಕರ್ತರ ಪರಿಚಯವಿದೆ. ದಿನ

ಪೂರ್ತಿ ಇಂತಹ ಚಳುವಳಿಗಳಲ್ಲಿ ತೊಡಗಿದವರು ಇವರು. ಕೆಲವರನ್ನು ಹೆಸರಿಸಬಹುದಾದರೆ– ಎಪ್ಪತ್ತರ ಇಳಿವಯಸ್ಸಿನಲ್ಲೂ ಹುಮ್ಮಸ್ಸಿನಿಂದ ಸ್ವದೇಶಿ ಚಳುವಳಿ ಎಂದು ಯುವಕರನ್ನು ಕಲೆಹಾಕುವ ಗಾಂಧಿವಾದಿ ಎಚ್. ಎಸ್. ದೊರೆಸ್ವಾಮಿ, ಸೈಕಲ್ ತುಳಿಯುತ್ತಾ ಮಾನವ ಹಕ್ಕುಗಳು, ಕೋಮು ಸೌಹಾರ್ದವೆಂದು ಬೆಂಗಳೂರಿನ ಮೂಲೆ ಮೂಲೆ ಸುತ್ತುವ ಪ್ರೊ॥ ಹಸನ್ ಮನ್ಸೂರ್, ಮೇಲುಕೋಟೆಯಲ್ಲಿ ವಿಕಲಾಂಗ ಮಕ್ಕಳನ್ನು 25 ವರ್ಷಗಳಿಂದ ಲಾಲನೆ-ಪಾಲನೆ ಮಾಡುತ್ತಿರುವ ಸರ್ವೋದಯದ ಹಿರಿಯ ಸುರೇಂದ್ರ ಕೌಲಗಿ, ಅನಾಥ ಮಕ್ಕಳೊಂದಿಗೆ ಆಟವಾಡುತ್ತ, ಪಾಠ ಹೇಳಿ ಕೊಡುತ್ತ ಅವರನ್ನು ಬೆಳೆಸುತ್ತಿರುವ 'ಶಿಶುಮಂದಿರ'ದ ಡಾ॥ ಹೆಲ್ಗ ಮುಂದ್ರ, ಹೆಗ್ಗಡದೇವನ ಕೋಟೆಯಲ್ಲಿ ಬುಡಕಟ್ಟು ಜನರನ್ನು ಸಂಘಟಿಸಿ ಹೋರಾಡುತ್ತಿರುವ ಶ್ರೀಕಾಂತ, ಯಾವುದೇ ಸಾಮಾಜಿಕ ಚಳುವಳಿಗೆ ಎಲ್ಲರಿಗೂ ಸುಲಭವಾಗಿ ದೊರಕುವ ಆದರೆ ವೇದಿಕೆ ಏರಲೊಲ್ಲದ ಅನಿಲ್ ಪ್ರಸಾದ್ ಹೆಗ್ಡೆ, ಎಲ್ಲ ರಾಷ್ಟ್ರೀಯ ಸಮಸ್ಯೆಗಳಿಗೂ ತೀವ್ರವಾಗಿ ಸ್ಪಂದಿಸುತ್ತ, ವಿಜಿಲ್ ಇಂಡಿಯಾ ಚಳುವಳಿ ನಡೆಸುತ್ತಿರುವ ಹಣ್ಣು ಹಣ್ಣು ಮುದುಕ ರೆವರೆಂಡ್ ಎಂ. ಎ. ಥಾಮಸ್, ಸಮಾಜವಾದಿ ಸಾಹಿತ್ಯವನ್ನು ಮನೆ ಮನೆಗೆ ಮುಟ್ಟಿಸಲು ದಶಕಗಳ ಕಾಲ ಕೆಲಸ ಮಾಡಿದ ಗೆಳೆಯ ಹನುಮಂತ–ಹೀಗೇ ನಾವೇ ನೇರವಾಗಿ ಬಲ್ಲ ಹತ್ತಾರು ಸಾಮಾಜಿಕ ಕಾರ್ಯಕರ್ತರ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಅಕ್ಷರಶಃ ಇಂತಹ ನೂರಾರು ಜನರು ನಮ್ಮ ಸುತ್ತಮುತ್ತಲೇ ಇದ್ದಾರೆ. ಆದರೆ ಇವರಾರನ್ನೂ ನಾವಾಗಲೀ, ಸುದ್ದಿ ಮಾಧ್ಯಮಗಳಾಗಲೀ ಸಮಾಜದ ನಾಯಕರೆಂದು ಗುರುತಿಸುವುದಿಲ್ಲ, ಗೌರವಿಸುವುದಿಲ್ಲ. ಸ್ಥಾನಮಾನ, ಮನ್ನಣೆ ನೀಡುವುದಿಲ್ಲ. ಇಂದು ಗುರುತಿಸಲ್ಪಡಬೇಕಾದರೆ ಒಂದು ಅಧಿಕಾರ ಸ್ಥಾನದಲ್ಲಿರಬೇಕು, ಇಲ್ಲ ಸಾಹಿತಿಯಾಗಿರಬೇಕು.

ಸೇವಾವ್ರತಿಗಳಂತೆ ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕ್ರಿಯಾಶೀಲರನ್ನು ಬದಿಗೊತ್ತಿ, ಸಾಹಿತ್ಯಿಕವಾಗಿ ಸ್ಥಾನಮಾನ ಪಡೆದವರನ್ನೇ ಸಾಮಾಜಿಕ-ರಾಜಕೀಯ ಪ್ರಶ್ನೆಗಳ ಬಗ್ಗೆ ನಾವು ನಿರ್ಮಿಸುವ ವೇದಿಕೆಗಳಲ್ಲಿ ವಿಜೃಂಭಿಸುತ್ತೇವೆ. ಸಾಹಿತಿಗಳಾಗಿ ಪ್ರಸಿದ್ಧರಾದ್ದರಿಂದಲೇ ಎಲ್ಲ ವಿಷಯಗಳ ಬಗ್ಗೆ ಮಾತನಾಡಬಲ್ಲರು, ಎಲ್ಲ ಕ್ಷೇತ್ರಗಳಲ್ಲೂ ಸಲ್ಲುವವರು ಎಂಬ ಭ್ರಮೆ ಹುಟ್ಟಿಸುತ್ತೇವೆ. ಸಾಮಾಜಿಕ-ರಾಜಕೀಯ ಕ್ರಿಯಾಶೀಲರಾಗಿ 'ಶೂದ್ರ'ರಾಗಿ 'ಶ್ರಮ' ವಿನಿಯೋಗಿಸುವವರದೇ ಒಂದು ಗುಂಪು, ಸಾಮಾಜಿಕ-ರಾಜಕೀಯ ಕ್ಷೇತ್ರಗಳ ಬಗ್ಗೆ ವೇದಿಕೆಗಳಲ್ಲಿ ಭಾಷಣ ಕುಟ್ಟುವ 'ನವಬ್ರಾಹ್ಮಣ'ರದ್ದೇ ಇನ್ನೊಂದು ಗುಂಪು. ಹೀಗೆ 'ಬ್ರಾಹ್ಮಣ' 'ಶೂದ್ರ' ತತ್ವಗಳು ಈಗಲೂ ಸಾಂಸ್ಕೃತಿಕ-ಸಾಮಾಜಿಕ ಕ್ಷೇತ್ರದಲ್ಲಿ ನಮ್ಮ ಮಧ್ಯೆ ಹೊಸರೂಪದಲ್ಲಿ ಮುಂದುವರೆಯುತ್ತಿದೆ.

ಇತ್ತೀಚೆಗೆ ನಿನ್ನ 'ಬೋಧಿವೃಕ್ಷ'ದ ಸಮಾರಂಭಕ್ಕೆ ಬರದಿದ್ದುದಕ್ಕೆ ಈ ನಮ್ಮ ಸಿಟ್ಟೇ ಕಾರಣ. ಪ್ರಿಯ ಶೂದ್ರ, ನಿನ್ನನ್ನು ಈ 'ಬ್ರಾಹ್ಮಣ' ಗುಂಪಿಗೆ ಸೇರಿಸುತ್ತಿಲ್ಲ. ನೀನು ಹತ್ತಾರು ಚಳುವಳಿ, ಸಂಸ್ಥೆಗಳು ಹಾಗೂ ಕಾರ್ಯಕರ್ತರೊಂದಿಗೆ ಬೆರೆತು, ಸಾಧ್ಯವಾದ ಕೆಲಸ ಮಾಡುವವನು ಆದರೆ, 'ಶೂದ್ರ'ನಾಗಿಯೂ ಈ 'ನವಬ್ರಾಹ್ಮಣ'ರಿಗೆ ವೇದಿಕೆಗಳನ್ನು ನಿರ್ಮಿಸಿಕೊಡುವವನು ಎಂದೇ ನಮ್ಮ ಸಿಟ್ಟು.

ಈಗ ಹೇಳು, ನಿನ್ನ ವೇದಿಕೆಗಳಲ್ಲಿ ಮೊದಲ ಪಂಕ್ತಿಯಲ್ಲಿ ನೀನು ಮುಂದೊಡ್ಡುವ ಎಷ್ಟು ಸಾಹಿತಿಗಳು, ಸಾಂಸ್ಕೃತಿಕ ವಲಯದ ಪ್ರಸಿದ್ಧರು, ಯಾವುದಾದರೂ ಒಂದು ಸಾಮಾಜಿಕ ಸಂಸ್ಥೆಯಲ್ಲಿ, ರಚನಾತ್ಮಕ ಅಥವಾ ಹೋರಾಟದ ಚಳುವಳಿಯಲ್ಲಿ ಗಮನಾರ್ಹ ಕಾಲ ವಿನಿಯೋಗಿಸುತ್ತಾ ಕೆಲಸ ಮಾಡುತ್ತಿದ್ದಾರೆ? ಅವರುಗಳು ಸಾಹಿತಿಗಳು, ಕಲಾವಿದರು. ತಮ್ಮ ಕ್ಷೇತ್ರಗಳಲ್ಲಿ ಅತ್ಯುತ್ತಮ ಕೆಲಸ ಮಾಡುತ್ತಿದ್ದಾರೆ. ಅಭಿನಂದನೆಗಳು. ಸಾಹಿತ್ಯಕ ಸಂಸ್ಥೆ-ವೇದಿಕೆಗಳಲ್ಲಿ ಅವರೇ ನಾಯಕರಾಗಿ ವಿಜೃಂಭಿಸಬೇಕು, ಅದು ಸರಿ. ಆದರೆ ತಮ್ಮ ಸಾಹಿತ್ಯಿಕ ಪ್ರಭಾವಳಿಯನ್ನು ದುರುಪಯೋಗಪಡಿಸಿಕೊಂಡು, ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ವೇದಿಕೆಗಳಲ್ಲೂ ನಾಯಕರಾಗಿ ವಿಜೃಂಭಿಸಲು ನೀನು ವೇದಿಕೆಗಳನ್ನು ನಿರ್ಮಿಸಿಕೊಡಬಾರದು: ಸಾಹಿತಿಗಳಿಗೊಂದು 'ಪ್ರಭಾವಳಿ' ಇದೆ. ಅವರನ್ನು ಆಶ್ಚರ್ಯ ಚಕಿತರಾಗಿ ನೋಡುವ ಮರಿಸಾಹಿತಿಗಳ, ಓದುಗರ ಗುಂಪೇ ಇದೆ. ಅವರು 'ಸುದ್ದಿ ಮಾಧ್ಯಮ'ಗಳಲ್ಲೂ ಚೆನ್ನಾಗಿ ಸಲ್ಲುತ್ತಾರೆ. ಆದರೆ ಇವು ಅವರನ್ನು ಸಾಮಾಜಿಕ ಕ್ಷೇತ್ರಗಳ ವೇದಿಕೆಗಳ ಮುಂಚೂಣಿಯಲ್ಲಿಡುವುದಕ್ಕೆ ಸರಿಯಾದ ಕಾರಣಗಳಲ್ಲ. ಸಾಮಾಜಿಕ ಸಂಸ್ಥೆ-ವೇದಿಕೆಗಳಲ್ಲಿ ತನ್ನ ಮೈಕೈ ಮಣ್ಣು ಮಾಡಿಕೊಂಡು ದುಡಿಯುವ ಕ್ರಿಯಾಶೀಲರಿಗೇ ಪ್ರಥಮ ಪ್ರಾಶಸ್ತ್ಯ ಸಲ್ಲಬೇಕು. ಬೌದ್ಧಿಕ ಚಿಂತನೆ ಶ್ರಮದೊಳಗಿಂದ ಚಿಗುರೊಡೆಯಬೇಕು ಎಂದು ಹೇಳುವ ನಮ್ಮ ಅನೇಕ ಸಾಹಿತಿ-ವಿಮರ್ಶಕರೇ ನಿಜವಲ್ಲ ಬೌದ್ಧಿಕ ವಲಯದಲ್ಲೇ ವಿಹರಿಸುತ್ತ, ಸಾಮಾಜಿಕ ಕ್ರಿಯಾಶೀಲರಿಗೆ ಮೀಸಲಾಗಬೇಕಾದ ವೇದಿಕೆಗಳನ್ನೇರಿ ನವಮಠಾಧಿಪತಿಗಳ ರೀತಿಯಲ್ಲಿ ಅಣಿಮುತ್ತುಗಳನ್ನು ಉದುರಿಸುತ್ತಿರುತ್ತಾರೆ—ಯಾವ ನೇರ ಸಾಮಾಜಿಕ ಕ್ರಿಯಾಶೀಲತೆಯ ಅನುಭವವಿಲ್ಲದೆಯೇ.

ಈಗ ಹೇಳು, ಈ ಸಾಮಾಜಿಕ ಅರಿವಿನ ಸಾಹಿತಿ ಮಿತ್ರರು ಯಾವ ಒಂದು ಸಮಸ್ಯೆ ತೆಗೆದುಕೊಂಡು ಒಂದಿಷ್ಟು ದೀರ್ಘಕಾಲವಾದರೂ ಅದಕ್ಕಾಗಿ ಕೆಲಸ ಮಾಡಿದ್ದಾರೆಂದು? ಕೆಲವು ವರ್ಷಗಳ ಹಿಂದೆ, ಸಾಹಿತ್ಯ ಪರಿಷತ್ತಿನ ಸಮ್ಮೇಳನಕ್ಕೆ ಸಮಾನಾಂತರವಾಗಿ, 'ಸಾಹಿತ್ಯದಲ್ಲಿ ಶ್ರೇಷ್ಠತೆ' ಎಂಬ ಸಮ್ಮೇಳನ ನಡೆಯಿತಷ್ಟೇ. ಬಹಳ ಮುಖ್ಯ ಸಾಹಿತ್ಯಕ ಪ್ರಶ್ನೆ ಇದು. ಆದರೆ ಈ ಸಮ್ಮೇಳನದ ಹಿಂದೆ ಸ್ಪಷ್ಟ ರಾಜಕೀಯವಿತ್ತು. ಡಾ॥ ಬರೇಮಂತರ ಬದಲು ಡಾ॥ ಕೆ. ಎಸ್. ನ. ಸಾಹಿತ್ಯ ಪರಿಷತ್ ಸಮ್ಮೇಳನದ

ಅಧ್ಯಕ್ಷರಾಗಿದ್ದರೆ ಈ ಸಮ್ಮೇಳನ ನಡೆಯುತ್ತಲೇ ಇರಲಿಲ್ಲ. ಬೇಕಂತಲೇ, ಸಾಹಿತ್ಯ ಪರಿಷತ್ ಸಮ್ಮೇಳನದ ದಿನಗಳಂದೇ ಈ ಸಮ್ಮೇಳನವನ್ನು ಛಾಲೆಂಜಾಗಿ ನಡೆಸಿದರು. ಕೆ.ಎಸ್.ನ. ರನ್ನೇ ಅಧ್ಯಕ್ಷತೆಗೆ ಕರೆತಂದು ದಿಗ್ವಿಜಯ ನಡೆಸುವ ಪ್ರಯತ್ನ ಸಹ ನಡೆಯಿತು. ಪಾಪ, ಹಳೆಯ ಕಾಲದ ಕೆ.ಎಸ್.ನ. ಈ ರಾಜಕೀಯದಲ್ಲಿ ದಾಳವಾಗಲು ಒಪ್ಪಲಿಲ್ಲ. ಅಧಿಕಾರದ ಚಿತ್ಪಾಟದಲ್ಲಿ ಎಂ.ಎಲ್.ಎ. ಗಳ ತಲೆಗಳನ್ನು ಎಣಿಸುವಂತೆ, ಯಾವ ಯಾವ ಸಮ್ಮೇಳನದಲ್ಲಿ ಯಾವ ಯಾವ ಸಾಹಿತಿಗಳಿದ್ದಾರೆ ಎಂಬ ತಲೆ ಎಣಿಕೆ ಸಹ ನಡೆಯಿತು. ಆದರಿಲ್ಲಿ ನಮ್ಮ ಪ್ರಶ್ನೆ ಎಂದರೆ, 'ಸಾಹಿತ್ಯದಲ್ಲಿ ಶ್ರೇಷ್ಠತೆ'ಯ ಪ್ರಶ್ನೆ ಅಷ್ಟೊಂದು ಮುಖ್ಯವಾಗಿರುವಾಗ ಒಂದೇ ಸಮ್ಮೇಳನದಲ್ಲಿ ಈ ಪ್ರಶ್ನೆಯ ಉದ್ಭಗಲ-ಆಳಗಳಲ್ಲಿ ಇತ್ಯರ್ಥವಾಗಿ ಹೋದವೆಲ್ಲಿ? ಈ ಬಹು ಮುಖ್ಯ ಸಾಹಿತ್ಯಿಕ ಪ್ರಶ್ನೆ ಎತ್ತಿಕೊಂಡು, ನಾಲ್ಕಾರು ವರ್ಷಗಳಾದರೂ ಸಾಹಿತಿ ಸಮೂಹದ ಮಟ್ಟದಲ್ಲಿ ಚಳುವಳಿಯಾಗಿ ನಡೆಸಿ, ಮಂಥನ ನಡೆಯಬೇಕಿತ್ತಲ್ಲವೇ? ಅಥವಾ ಕನ್ನಡ ಎಂ.ಎ. ವಿದ್ಯಾರ್ಥಿಗಳು ಮುಂದೊಂದು ದಿನ ಓದಲಿರುವ ಸಾಹಿತ್ಯ ಚರಿತ್ರೆಯಲ್ಲಿ ಈ ಶ್ರೇಷ್ಠತೆಯ ಪ್ರಶ್ನೆಯನ್ನೂ ಎತ್ತಲಾಯಿತು ಎಂದು ದಾಖಲಾಗಲು ಕೆಲವು ಸಾಹಿತಿಗಳು ಈ ಪ್ರಶ್ನೆ ಎತ್ತಿದರೇ? ಸಾಹಿತ್ಯಿಕ ಸಂವಾದವನ್ನೇ ಮೂರ್ನಾಲ್ಕು ವರ್ಷ ಮುಂದು ವರೆಸಲಾರದ ಸಾಹಿತಿಗಳು ಯಾವುದಾದರೂ ಸಾಮಾಜಿಕ ಸಮಸ್ಯೆಗೆ ಬೆವರು ಸುರಿಸು ವರೇ? 'ಪ್ರಗತಿರಂಗ'ದ ಶಾಖೆಗಳು ಹತ್ತಾರು ಸಣ್ಣ ಪಟ್ಟಣಗಳಲ್ಲಿ ಹುಟ್ಟಿದವಷ್ಟೇ. ಪ್ರಗತಿಪರ ಯುವಕರಿಗೆ ಕೇಂದ್ರ ಬಿಂದುಗಳಾಗಿ 'ಪ್ರಗತಿರಂಗ'ದ ಶಾಖೆಗಳು ಬೆಳೆದವು. ಹಾಗೇ ಬೆಳೆದಿದ್ದರೆ ಆರೆಂಟು ವರ್ಷಗಳಲ್ಲಿ ಪ್ರಗತಿಪರ ಯುವಕರ ಭಾರೀ ವೇದಿಕೆ ಯೊಂದೇ ಕರ್ನಾಟಕದಲ್ಲಿ ನಿರ್ಮಾಣವಾಗುತ್ತಿತ್ತು. ಸಾಮಾಜಿಕ ಪರಿವರ್ತನೆಯ ಯುವ ಮಾಧ್ಯಮವಾಗಿ ದೊಡ್ಡ ರೀತಿಯಲ್ಲಿ ಕೆಲಸ ಮಾಡುವ ಸಾಧ್ಯತೆ 'ಪ್ರಗತಿರಂಗಕ್ಕಿತ್ತು. ಆದರೆ ದಿಢೀರನೆ 'ಪ್ರಗತಿರಂಗ' ಇಲ್ಲವಾಯಿತು. ಏಕೆಂದರೆ ಇಂತಹ ಸಾಮಾಜಿಕ ರಾಜಕೀಯ ಸಂಸ್ಥೆ ಕಟ್ಟಲು ಬೇವರು ಸುರಿಸಬೇಕು, ಹಗಲು-ರಾತ್ರಿ ಎನ್ನದೆ ಓಡಾಡ ಬೇಕು. ಸಂಘಟಿಸುವ ಯಾತನೆಯ ಕೆಲಸ. ಇದನ್ನು ಹುಟ್ಟುಹಾಕಿದ ಸಾಹಿತಿ ಮಿತ್ರರಿಗೆ ಇಂತ 'ಶ್ರಮ' ಸಾಧ್ಯವಿರಲಿಲ್ಲವೇನೋ. ಕೈಬಿಟ್ಟರು. ಆದರೂ ಲಂಕೇಶರು ತಮ್ಮ ಪತ್ರಿಕೆಯ ಮೂಲಕ-ಅದರ ದೌರ್ಬಲ್ಯಗಳೇನೇ ಇರಲಿ-ಒಂದು ಪ್ರಮುಖ ಸಾಮಾಜಿಕ ಕೆಲಸ ಮಾಡುತ್ತಿದ್ದಾರೆ.

ನಮ್ಮ ಮೇಲಿನ ವಾದದ ಅರ್ಥ ಬೌದ್ಧಿಕತೆ ಮತ್ತು ಬುದ್ಧಿಜೀವಿಗಳ ಪಾತ್ರ ಸಾಮಾಜಿಕ-ರಾಜಕೀಯ ಕ್ಷೇತ್ರದಲ್ಲಿ ಇಲ್ಲವೆಂದಲ್ಲ. ನಿಜವೆಂದರೆ, ಬೌದ್ಧಿಕತೆಯು ಹರಿತವಾಗಿ ವಿಶ್ಲೇಷಣೆಗೆ ಗುರಿಪಡಿಸದಿದ್ದರೆ, ಸಾಮಾಜಿಕ ಚಳುವಳಿ ನಿಂತ ನೀರಾಗುವ ಅಥವಾ ದಾರಿ ತಪ್ಪುವ ಸಂಭವವೇ ಹೆಚ್ಚು. ರಚನಾತ್ಮಕ ಚಳುವಳಿಗೂ ಈ ಮಾತು

ಅನ್ವಯಿಸುತ್ತದೆ. ಹಾಗೆ ನೋಡಿದರೆ ಬಂಡಾಯ ಸಾಹಿತಿಗಳು, ಇತರ ಎಡಪಾದಿ ಸಾಹಿತಿಗಳಂತಲ್ಲದೆ, ಬೀದಿಗಿಳಿದು ಒಂದಷ್ಟು ಕೆಲಸ ಮಾಡಿದರು. ಅಲ್ಲಾದರೂ, ಅವರಿಗೆ ಸುದ್ದಿ ಮಾಧ್ಯಮಗಳಲ್ಲಿ ಪ್ರಾಮುಖ್ಯತೆ ದೊರೆತಿದ್ದು, ಅಕ್ಷರಸ್ಥರ ವಲಯಗಳಲ್ಲಿ ಪರಿಚಿತರಾದದ್ದು ಅವರು ಸಾಹಿತಿಗಳು ಎಂಬ ಕಾರಣದಿಂದ.

ನಮಗಿಂದು ಬೇಕಾಗಿರುವುದು 'ಕ್ರಿಯಾಶೀಲ ಬುದ್ಧಿಜೀವಿಗಳು.' ಕೇವಲ ಬುದ್ಧಿ ಜೀವಿಗಳದಷ್ಟೇ ಇರಲು ಬಯಸುವವರಲ್ಲ. ವ್ಯಕ್ತಿ ಪೂಜೆ ಮಾಡಿಕೊಳ್ಳದೆ ಇರುವ ಸಾಹಿತಿಗಳು, ಸಾಮಾಜಿಕ ಸಮಸ್ಯೆಗಳ ಬಗ್ಗೆ ಬಡಬಡಿಸದೆ, ತಮ್ಮಷ್ಟಕ್ಕೆ ತಾವು ಸಾಹಿತ್ಯ ಕೃಷಿಯಲ್ಲಿ ಮೌನವಾಗಿ ತೊಡಗಿಕೊಳ್ಳಲಿ. ಅವರು ನಮಗೆ ಮಾನ್ಯರು.

ಎಲ್. ಎನ್. ಗೋಪಾಲಕೃಷ್ಣ ಮತ್ತು ವಿ. ಎಸ್. ಶ್ರೀಧರ
ಇಂಗ್ಲೀಷ್ ಅಧ್ಯಾಪಕರು, 176, 6ನೇ ಕ್ರಾಸ್, 6ನೇ ಬ್ಲಾಕ್,
3ನೇ ಸ್ಟೇಜ್, 3ನೇ ಫೇಸ್, ಬನಶಂಕರಿ, ಬೆಂಗಳೂರು–560 085.

●

ಪ್ರಿಯ ಶ್ರೀನಿವಾಸ್,

ನಿಮ್ಮ ಪತ್ರಿಕೆಯ ಅಂಬೇಡ್ಕರ್ ಸಂಚಿಕೆ ತುಂಬಾ ಮನೋಜ್ಞವಾಗಿದೆ. ಶ್ರೀ ಚಂದ್ರಶೇಖರ್ ಯಶಸ್ವಿಯಾಗಿ ಚಿಂತನಧಾರೆಯೊಂದನ್ನು ಸಂಪಾದಿಸಿಕೊಟ್ಟಿದ್ದಾರೆ, ಅಭಿನಂದನೆಗಳು. ಅತ್ಯಂತ ಅವಶ್ಯಕವಾಗಿ ಈ ದೇಶ ತೊಡೆದುಹಾಕಬೇಕಾಗಿರುವ ಅಸ್ಪೃಶ್ಯತೆಯ ಘೋರ ಸಮಸ್ಯೆಯನ್ನು ಕುರಿತು ಈ ಶತಮಾನದಲ್ಲಾದಷ್ಟು ಗಂಭೀರ ಚಿಂತನೆ ಮತ್ತು ಚಳುವಳಿಗಳು ಹಿಂದೆ ಸಾವಿರಾರು ವರ್ಷಗಳಲ್ಲಿ ಆಗಿರಲಿಕ್ಕಿಲ್ಲ. ಎಲ್ಲವೂ ಒಂದು ಚಾರಿತ್ರಿಕ ಸಂದರ್ಭವನ್ನನುಸರಿಸಿ ಹರಳುಗೊಳ್ಳುತ್ತದೆ. ಒಂದು ರೀತಿಯ ಪಾಪಪ್ರಜ್ಞೆ ನಮ್ಮೊಳಗಿನ ಹಲವು ರೀತಿಯ 'ಅಸ್ಪೃಶ್ಯತಾ ಮನೋಧರ್ಮ'ವನ್ನು ಇಂದೂ ಪ್ರಬಲವಾಗಿ ಕಾಡುತ್ತಿದೆ. ನಾಳಿನ ಶತಮಾನ ನಿಜವಾದ ಮಾನವೀಯ ಮೌಲ್ಯಗಳ ಆಧಾರದ ಮೇಲೆ ಇತಿಹಾಸ ಸೃಷ್ಟಿಸಲು ಭಾರತೀಯರು ಅಗತ್ಯವಾಗಿ ಅರಗಿಸಿಕೊಳ್ಳಬೇಕಾದ ಧೀಮಂತ ಆತ್ಮಪ್ರಜ್ಞೆಯನ್ನು ಈ ದೇಶದ ವಿಶಿಷ್ಟ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಚೇತನಗಳು ಪ್ರಜ್ವಲಿಸಿವೆ. ಆಧ್ಯಾತ್ಮಿಕ ಪುನರುತ್ಥಾನದಿಂದ ಹಿಡಿದು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಆಗಬೇಕಾಗಿರುವ ಸಂಪೂರ್ಣ ಕ್ರಾಂತಿ ಯಾವುದೇ ಆಂಶಿಕ ಪರಿವರ್ತನೆಯಿಂದ ಸಾಧ್ಯವಾಗದು ಎಂದು ಅರಿವು ಮಾಡಿಕೊಟ್ಟ ಒಬ್ಬೊಬ್ಬ ನಾಯಕನೂ ತಮ್ಮ ಅಮೋಘ ಕಾಣಿಕೆ ಸಲ್ಲಿಸಿದ್ದಾರೆ. ಇವೆಲ್ಲವುಗಳ ಮೊತ್ತವಾಗಿ ಇಂದಿನ ಯುವಪೀಳಿಗೆ ಸಮಗ್ರ ಪುನರುತ್ಥಾನದ ಕನಸು ಕಾಣುವ ನಿಟ್ಟಿಗೆ ಬರುವ ನಿಲ್ಲುತ್ತದೆ, ಚಿಂತನಶೀಲರಾದವರು ಕೇವಲ ಭಾವಾವೇಶಗಳ

ಚಾಲನೆಗಳಿಗೆ, ರಾಜಕೀಯ ಆಶೋತ್ತರಗಳಿಂದ ನಾಯಕರು ಒಡಿದೆಬ್ಬಿಸುವ ತಾತ್ಕಾಲಿಕ ಪ್ರತಿಭಟನೆಗಳಿಗೆ, ಪ್ರಬಲ ಘಟನೆಗಳ ಒತ್ತಡದಿಂದ ಹುಟ್ಟುವ ರಾಗದ್ವೇಷಗಳಿಗೆ ಎಡೆಗೊಡದೆ ತಟಸ್ಥ ಮನೋವೃತ್ತಿಯಿಂದ ವಿಚಾರ ಮಾಡಿ ಮುಂದಿನ ನಿರ್ಣಾಯಕ ಹೆಜ್ಜೆ ಇಡಬೇಕಾಗಿದೆ. ಈ ದಿಸೆಯಲ್ಲಿ 'ಶೂದ್ರ' ಪತ್ರಿಕೆ ಶ್ಲಾಘನೀಯ ಕೆಲಸ ಮಾಡುತ್ತಿದೆ.

ಶ್ರೀ ಚಂದ್ರಶೇಖರ್ ಬರೆದಂತೆ 1980ರ ವರೆಗೂ ಅಂಬೇಡ್ಕರ್ ಬಗ್ಗೆ ಚಕಾರ ವೆತ್ತದಿದ್ದ ಪಕ್ಷ ರಾಜಕಾರಣಿಗಳು, ಒಮ್ಮೆಲೆ ಅವರನ್ನು ಹಾಡಿ ಹೊಗಳುವ ಪರಿಪಾಠ ವಾಯಿತು, ಅಂದರೆ ಮೊದಲು ಪೂರ್ಣ ತಿರಸ್ಕಾರ, ನಂತರ ಒಮ್ಮೆಲೆ ಆರಾಧನೆ. ಈ ಎರಡೂ ಸರಿಯಲ್ಲ. ಅಂಬೇಡ್ಕರರನ್ನು ಅವರು ಬದುಕಿ ಹೋರಾಡಿದ ಚಾರಿತ್ರಿಕ ಸಂದರ್ಭದಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಿಸುವ ಅಗತ್ಯವಿದೆ.

ಡಾ॥ ಗೈಲ್ ಒಮ್‌ವೆಡ್ತ್ ಅವರ ಧೀರ್ಘವಾದ ಮೊದಲ ಲೇಖನ ಒಬ್ಬ ಸಮಾಜಶಾಸ್ತ್ರಜ್ಞನ ತೀಕ್ಷ್ಣ ವಿಶ್ಲೇಷಣೆಯಿಂದ ಲಭ್ಯವಾಗುವ ಪರಂಪರಾನುಗತ ಹಿನ್ನೆಲೆಯನ್ನು ನೀಡಿದೆ. ಹಾಗೆಯೇ ರಾಷ್ಟ್ರೀಯ ವಿಮೋಚನೆಯ ಚಳುವಳಿಯ ಹಿನ್ನೆಲೆಯಲ್ಲಿ ಶ್ರೀ ಚಂದ್ರಶೇಖರ್ ಅಂಬೇಡ್ಕರ್ ಅವರ ಜೀವನ ಕಾರ್ಯಗಳನ್ನು ವಿಶ್ಲೇಷಿಸಿದ್ದಾರೆ. "ಅಂಬೇಡ್ಕರರಿಗೆ ಸಮಾಜದಲ್ಲಿ ತೀರ ಕೆಳಹಂತದಲ್ಲಿರುವ ವ್ಯಕ್ತಿಗೂ ಸ್ವಾತಂತ್ರ್ಯ ಸವಿಯುವುದು ಸಾಧ್ಯವಾಗಿಸಬಲ್ಲದ್ದು ಮಾತ್ರ ನಿಜವಾದ ರಾಷ್ಟ್ರೀಯತೆ" ಎನಿಸಿತ್ತು ಎಂದಿದ್ದಾರೆ. ವೆಲೇರಿಯನ್ ರೋಡ್ರಿಗ್ಸ್, ಗಾಂಧಿ ಅಂಬೇಡ್ಕರ್ ಮತ್ತು ಭಾರತೀಯ ಕಮ್ಯುನಿಸ್ಟರ ನಿಲುವುಗಳನ್ನು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಅಂಬೇಡ್ಕರರ 'ಲಿಬರಲ್ ದರ್ಶನ'ವನ್ನು ಪರಿಚಯ ಮಾಡಿಸಿದ್ದಾರೆ. ಡಾ॥ ಜೆ. ಎಸ್. ಸದಾನಂದ್ ಅಂಬೇಡ್ಕರರ ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಹಾಗೆಯೇ ಮುಂದೆ ನಿಮ್ಮ ಪ್ರಶ್ನೆಗಳಿಗೆ ಉತ್ತರವಾಗಿ ಡಾ॥ ಅನಂತಮೂರ್ತಿ, ಡಾ॥ ಡಿ.ಆರ್. ನಾಗರಾಜ್, ಡಾ॥ ಸಿದ್ಧಲಿಂಗಯ್ಯ, ಮರಿಸ್ವಾಮಿ ಇವರ ಚುಟುಕು ಉತ್ತರಗಳಲ್ಲಿ ಗಾಢಚಿಂತನೆ ತುಂಬಿಸಿದ್ದಾರೆ.

ಇವೆಲ್ಲವನ್ನೂ ಪರಿಶೀಲಿಸಿದ ಬಳಿಕವೂ ಒಂದು ವಿಷಯ ನನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ಏಳುತ್ತದೆ. ಭಾರತದ ರಾಜಕೀಯ ಬೆಳವಣಿಗೆಯಲ್ಲಿ ಬ್ರಿಟಿಷರ ಕಾಲ ಹೇಗೆ ಸತತವಾಗಿ ಜನತೆಯನ್ನು ಪ್ರತ್ಯೇಕ ಪ್ರತ್ಯೇಕ ಹಿತಾಸಕ್ತಿಗಳನ್ನಾಗಿ ವಿಂಗಡಿಸಿ ಒಂದರ ಹಿತ ಮತ್ತೊಂದಕ್ಕೆ ಅಹಿತ ಎಂಬ ತೀವ್ರ ಮನೋಧರ್ಮವನ್ನು ರೂಢಿಸಿತು ; ಇದರಿಂದ ಹೇಗೆ ಸ್ವಾತಂತ್ರ್ಯ ಚಳುವಳಿಯನ್ನು ಮುರಾಬಟ್ಟೆಗೊಳಿಸಿ ಗಾಂಧಿ ಪ್ರಭಾವವನ್ನು ಮೂಲೆಗುಂಪಾಗಿಸುವ ಕುಟಿಲ ಮಾರ್ಗಗಳನ್ನವರು ಅನುಸರಿಸಿದರು ;

ಜಿನ್ನಾ, ಅಂಬೇಡ್ಕರ್, ರಾಜಮಹಾರಾಜರುಗಳು, ಅನೇಕ ವಿಖ್ಯಾತ ಬುದ್ಧಿಜೀವಿಗಳು ಬ್ರಿಟಿಷರ ಸರ್ವಾಧಿಕಾರದ ಅಡಿಯಲ್ಲಿ ಮಾತ್ರ ತಮ್ಮ ತಮ್ಮ ವಿಶೇಷ ಹಕ್ಕುಗಳಿಗೆ ರಕ್ಷಣೆ ಸಿಗಬಲ್ಲದು ಎಂದು ತಿಳಿದರು; ಸ್ವತಂತ್ರ ಭಾರತದಲ್ಲಿ ಒಂದು ವರ್ಗ ಮಾತ್ರ ಅಧಿಕಾರದ ಗದ್ದುಗೆಯನ್ನೇರಿ ಜಿುಕ್ಕ ಹಿತಗಳನ್ನೆಲ್ಲ ಅವ್ಯಾಹತವಾಗಿ ತುಳಿದುಬಿಡುತ್ತದೆ. ಎಂಬ ಭಾವನೆ ಬೆಳೆಸಿದ್ದರು. ಈ ಚಾರಿತ್ರಿಕ ಸಂದರ್ಭದ ವಿಶ್ಲೇಷಣೆಯೂ ಮುಖ್ಯ ವಾಗಿ ಆಗಬೇಕು. ಏಕೆಂದರೆ ಸ್ವಾತಂತ್ರ್ಯನಂತರದ ರಾಜಕಾರಣದಲ್ಲಿ ಗಾಂಧಿ-ಜಿನ್ನಾ-ಅಂಬೇಡ್ಕರ್ ಇವರೆಲ್ಲರ ಆಸೆ ಆಕಾಂಕ್ಷೆಗಳೂ ಮೂಲೆಗುಂಪಾಗಿ ಮಂತ್ರ ಬ್ರಿಟಿಷ್ ರಾಜಕಾರಣದ ಪಡಿಯಚ್ಚು ಮರುಕಳಿಸಿರುವುದನ್ನೂ ನಾವು ಕಾಣುತ್ತಿದ್ದೇವೆ. ರಾಜಕಾರಣದಲ್ಲಿ ಅಧಿಕಾರದ ಸ್ಪರ್ಧೆ ತೀವ್ರವಾದಾಗ ಸಿದ್ಧಾಂತಗಳೆಲ್ಲ ಅಳಿಸಿಹೋಗು ತ್ತವೆ. ಈಗ ರಾಷ್ಟ್ರೀಯ ಸಂದರ್ಭದಲ್ಲಿ ಯಾವ ಮುಹಾನಾಯಕರು ಮೇಲೇರಿ ಗದ್ದುಗೆಗಳನ್ನಾಕ್ರಮಿಸಿರುವರೋ ಅಥವ ಆಕ್ರಮಿಸಲು ಬಯಸುತ್ತಿರುವರೋ ಅವ ರೆಲ್ಲರೂ ಪ್ರಧಾನವಾಗಿ ಪ್ರತ್ಯೇಕತಾವಾದಿಗಳೇ ಆಗಿದ್ದಾರೆ.

1930–40ರ ಮಧ್ಯೆ ಭಾರತದ ಜನಜೀವನದಲ್ಲಾದ ಪ್ರಚಂಡ ವಿಚಾರ ಮಂಥನ; ರಾಷ್ಟ್ರಶಕ್ತಿ ಕ್ರೋಢೀಕರಿಸಿ ದಾಸ್ಯ ಶೃಂಖಲೆಗಳನ್ನೆಲ್ಲ ತೊಡೆದುಹಾಕುವ ನಿಸ್ಸೀಮ ಪ್ರಯತ್ನಕ್ಕೆ ಗಾಂಧಿ ಕೊಟ್ಟ ಹೊಸತಿರುವು; ಅದೇ ಕಾಲಕ್ಕೆ ನಡೆದ ದಂಡಿ ಸತ್ಯಾಗ್ರಹದ ಅತ್ಯದ್ಭುತ ಪ್ರಭಾವ; ಕುಸಿದುಬೀಳುವುದು ಖಂಡಿತ ಎಂದು ತೋರಿದಾಗ ಬ್ರಿಟಿಷರು ಹೂಡಿದ ದುಂಡು ಮೇಜಿನ ತಂತ್ರ; ಅವರು ಎತ್ತಿಕಟ್ಟಿದ ಶಕ್ತಿಗಳು ಇವುಗಳ ವಸ್ತುನಿಷ್ಠ ವಿಶ್ಲೇಷಣೆಯಿಂದ ಪಾಠ ಕಲಿಯಬೇಕಾದುದು ಅಗತ್ಯ. ಮೊದಲನೇ ದುಂಡು ಮೇಜಿನ ಪರಿಷತ್ತನ್ನು ರಾಷ್ಟ್ರೀಯ ಕಾಂಗ್ರೆಸ್ ಬಹಿಷ್ಕರಿಸಿದಾಗ ಭಾರತವನ್ನು ಪ್ರತಿನಿಧಿಸಿದ ಗುಂಪುಗಳನ್ನು ಸಂಘಟಿಸಿದ ನಾಯಕರ ವಾದಗಳು ವಿಚಿತ್ರ ವಾಗಿದ್ದವು. ಬ್ರಿಟಿಷರ ಆಶ್ರಯದಲ್ಲೇ ಸೀಮಿತ ಸ್ವಾತಂತ್ರ್ಯ ಬಯಸಿದ್ದ ಹೋಮ್-ರೂಲ್ ಚಳುವಳಿ, ಉದಾರವಾದೀ ಚಳುವಳಿ, ಅಲ್ಪಸಂಖ್ಯಾತರ ಹಿತರಕ್ಷಣೆಯ ಚಳುವಳಿ, ರಾಜರು, ಜಮೀನ್ದಾರರುಗಳ ಪರವಾದ ತರ್ಕ; ಬ್ರಿಟಿಷ್ ವ್ಯಾಪಾರೀ ಸಂಸ್ಥೆಗಳ ಭಾರತೀಯ ಪ್ರತಿನಿಧಿಗಳಾಗಿ ಶ್ರೀಮಂತರಾಗಿದ್ದ ಒಂದು ವರ್ಗದ ಹಿತ ರಕ್ಷಣೆಯ ಪ್ರಯತ್ನ: ಇವೆಲ್ಲವೂ ಕಾಂಗ್ರೆಸ್ಸನ್ನು ಬಗ್ಗುಬಡಿಯುವ ರಾಜಕೀಯ ಧಾಳಿಗಳಾಗುವ ಪ್ರಬಲ ಪ್ರಯತ್ನವನ್ನು ಸಾಮ್ರಾಜ್ಯಶಾಹಿ ರಾಜಕಾರಣಗಳಲ್ಲಿ ಮಾಡಲು ಆ ದಶಕದಲ್ಲಿ ಪ್ರಾರಂಭಿಸಿದವು. ಪಾಕಿಸ್ತಾನದ ಬೇಡಿಕೆ, ನಿಮ್ನವರ್ಗ ದವರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳು, ದೇಶೀಯ ಸಂಸ್ಥಾನಗಳು ಸ್ವತಂತ್ರವಾಗಿ ಉಳಿಯುವ ವಿಚಾರ, ಧಾರ್ಮಿಕ ಮುಠಾಧಿಪತಿಗಳು ಜಾತೀಯ ಪ್ರತ್ಯೇಕತೆಯನ್ನು ಪ್ರಬಲಗೊಳಿಸುವ ಹುನ್ನಾರ: ಈ ಬೆಳವಣಿಗೆಯನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದರೆ

ಹೇಗೆ ಸ್ವಾತಂತ್ರ್ಯ ಸಂಗ್ರಾಮದ ವಿರುದ್ಧ ಪ್ರತಿಗಾಮೀ ಶಕ್ತಿಗಳು ಸಂಘಟಿಸುವ ಪ್ರೇರಣೆ ಸಿಕ್ಕಿತು ಎನ್ನುವುದು ಅರ್ಥವಾದೀತು.

ಸ್ವಾತಂತ್ರ್ಯಾನಂತರ ನಾಲ್ಕು ದಶಕಗಳ ನಂತರ 1980 ರಿಂದೀಚೆಗೆ ಈ ಎಲ್ಲ ಪ್ರತಿಗಾಮೀ ಶಕ್ತಿಗಳಿಗೆ ಹೊಸ ಚಾಲನೆ ಸಿಕ್ಕಿದಂತಿದೆ. ಕಾರಣ ಒಂದು ಹೊಸ ಸಾಮ್ರಾಜ್ಯಶಾಹೀ ಮತ್ತು ವಸಾಹತುಶಾಹೀ ಮನೋಧರ್ಮ ಈಗ ಜಗತ್ತನ್ನೆಲ್ಲ ಆವರಿಸಿ ನಿಲ್ಲುತ್ತದೆ. 'ಅಭಿವೃದ್ಧಿ' ಎಂಬ ಘೋಷಣೆ ಕೇವಲ ಸಮಾಜದ ಕೆನೆ (ಕ್ರೀಮ್ ಆಫ್ ಸೊಸೈಟಿ) ಎನಿಸಿಕೊಳ್ಳುವ ಇಂದ್ರಭೋಗದ ಶ್ರೀಮಂತ ಅಲ್ಪಸಂಖ್ಯಾತ ವರ್ಗದ ಎಗ್ಗಿಲ್ಲದ ಅಭಿವೃದ್ಧಿ ಎಂಬ ವ್ಯಾಖ್ಯಾನಕ್ಕೆ ಹೊಸ ಹೊಸ ಸೈದ್ಧಾಂತಿಕ ತತ್ವಗಳು ತಲೆಯೆತ್ತುತ್ತಿವೆ. ಯುವಪೀಳಿಗೆ ನಿಜವಾಗಿ 'ಕಟ್ಟಕಡೆಯವನಿಗೆ ನ್ಯಾಯ' (ಅನ್‌ಟು ದಿಸ್ ಲಾಸ್ಟ್) ಎಂಬ ಮನೋಧರ್ಮದಿಂದ ಜನಜಾಗೃತಿಯನ್ನು ರೂಢಿಸಬೇಕಾದರೆ ಗಾಂಧಿ ಮಾರ್ಗದ ಮೂಲಚಿಂತನೆಗಳನ್ನು ಮತ್ತೆ ಮೈಗೂಡಿಸಿಕೊಳ್ಳಬೇಕಾಗಿದೆ. ಸಾಂಪ್ರದಾಯಿಕ ಸಿದ್ಧಾಂತಗಳೆಲ್ಲ ನುಚ್ಚುನೂರಾಗುತ್ತಿರುವ ಭೂಮಿಕೆಯಲ್ಲಿ ಹೊಸ ಚಿಂತನೆ ಚಿಗುರಬೇಕಾಗಿದೆ. ಈ ದಿಸೆಯಲ್ಲಿ ಭಗೀರಥ ಪ್ರಯತ್ನ ನಡೆಯಲಿ ಎಂದು ಆಶಿಸುತ್ತೇನೆ,

ನಿಮ್ಮ ವಿಶ್ವಾಸಿ,

—ಕೆ. ಎಸ್. ನಾರಾಯಣಸ್ವಾಮಿ
ಗಾಂಧಿಭವನ
ಬೆಂಗಳೂರು–560 001

ಅಂಬೇಡ್ಕರ್ ಸಂಚಿಕೆಯನ್ನು ಮೆಚ್ಚಿಕೊಂಡು ತುಂಬಾ ಪತ್ರಗಳು ಬಂದಿವೆ. ಅವೆಲ್ಲವನ್ನೂ ಪ್ರಕಟಿಸಲಾಗದ್ದಕ್ಕೆ ವಿಷಾದಿಸುತ್ತೇವೆ.

— ಸಂ.

ಕನಸಿಗೊಂದು ಕಣ್ಣು

ಯಾವುದೊ ಊರು? ಆ ಊರು!

"ನಿನ್ನ ಮೊಗದಲಿ ಮಾಸದಿಹ ಮುಗುಳು ನಗೆಯೊಂದು
ಸರ್ವದಾ ಸವಿಲಂಕೆ ನಲಿಯುತಿಹುದು
ನಿನ್ನ ಮೌನದ ಅರ್ಥವೇನಿಹುದೊ ಅದನರಿಯೆ
ನಮ್ಮ ತಾವರೆ ಕೇರು ಕೇಳುತಿಹುದು!"

— ಕುವೆಂಪು

ಎತ್ತನೋಡಿದರೂ ಹಸಿರು, ದೂರ, ಬಹುದೂರ ಹರಡಿಕೊಂಡಿರುವ ಮಲೆನಾಡು. ಒಂದೇ ಸಮನೆ ಬಿಟ್ಟು ಬಿಟ್ಟು 'ಧೋ' ಎಂದು ಸುರಿಯುವ ಮಳೆ, ಇದರ ಮಧ್ಯೆ ನಾನಾ ರೀತಿಯ ಹಕ್ಕಿಪಕ್ಕಿಗಳ ಧ್ವನಿ. ಎತ್ತರದ ಮರಗಳಿಂದ ಕೆಳಕ್ಕೆ ಬಿತ್ತರಿಸುವ ಧ್ವನಿ. ಹಾಗೆಯೇ ಅಲ್ಲಲ್ಲಿ ರೂಪುಗೊಂಡ ಪುಟ್ಟ ಪುಟ್ಟ ಝರಿಗಳು, ಪ್ರಕೃತಿ ಸೃಷ್ಟಿಸಿದ ಎಷ್ಟೊಂದು ಅದ್ಭುತ ಲೋಕ. ಲಕ್ಷಾಂತರ ಕ್ರಿಮಿಕೀಟಗಳಿಗೆ, ಮೃಗಗಳಿಗೆ ಮತ್ತು ಪಶುಪಕ್ಷಿಗಳಿಗೆ ಜೀವಧಾತುವಾದಿರುವ ಕಾಡು. ಇಂಥ ಅದ್ಭುತದಿಂದ ಹೊರ ಬಂದ ಕವಿ ಕುವೆಂಪುರವರನ್ನು ಒಂದು ಕ್ಷಣ ನೆನಪು ಮಾಡಿಕೊಂಡೆ. ಮೂರು ನಾಲ್ಕು ವರ್ಷಗಳ ಹಿಂದೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಮಾರಂಭದ ಸಮಯದಲ್ಲಿ ನಾವೆಲ್ಲ ಕುವೆಂಪುರವರ ಮನೆಗೆ ಲಗ್ಗೆ ಹಾಕಿದ್ದೆವು. ಉದ್ದನೆಯ ಬದುಕಿನಲ್ಲಿ ಏನೇನೋ ಕಂಡು ಸೃಷ್ಟಿಸಿದ ಕವಿ ಸುಸ್ತಾಗಿದ್ದರು. ಆದರೂ ನಮ್ಮ ಆಸೆಗಾಗಿ ಹತ್ತಾರು ಬಾರಿ ಕ್ಯಾಮರಾ ಕಣ್ಣಿನಲ್ಲಿ ಕ್ಲಿಕ್ಕಾದರು. 'ಯಾವುದು ಸತ್ಯ, ಯಾವುದು ಮಿಥ್ಯ' ಎಂದು ಸಾಗಿದ ಎತ್ತರಕ್ಕೆ ಅನುಭವದ ಕವಲುಗಳು. ಅದೇ ಮಿಣ ಮಿಣ ಮಿಂಚುವ ಬೆಳ್ಳನೆಯ ಕೂದಲು. ತೊಂಬತ್ತರ ಗಡಿಯಲ್ಲೂ ತಲೆ ತುಂಬ ದಟ್ಟವಾದ ಕೂದಲು. ಮೌನಿಯಾದರೂ ಕಣ್ಣಿನೊಳಗೆ ಕಾಂತಿಯನ್ನುಳಿಸಿಕೊಂಡ ಕುವೆಂಪು ಮಲೆನಾಡಿನಲ್ಲಿ ಸಾಗಿದಷ್ಟು ನೆನಪಾಗಿ ಉಳಿದರು. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನನ್ನ ಅಣ್ಣ ನಂಜಪ್ಪರೆಡ್ಡಿ ವೀಳೆದೆಲೆಯ ತೋಟದಲ್ಲಿ 'ಕಾನೂರು ಸುಬ್ಬಮ್ಮನ ಹೆಗ್ಗಡತಿ'

ಓದುವಾಗ ಮುಸಿ ಮುಸಿ ನಗುತ್ತಿದ್ದರು. ಆಗ ನಾನು ತುಂಬ ಚಿಕ್ಕವನಾದ ಕಾರಣ, ಯಾಕೆ ಹೀಗೆ ನಗುತ್ತಿದ್ದಾನೆ ಅನ್ನಿಸಿತ್ತು. ಇದಾದ ಒಂದೆರಡು ವರ್ಷಗಳಲ್ಲಿ ಅದನ್ನು ಓದಲು ಗುರುಗಳಾದ ರಾಮಸ್ವಾಮಿ ಅಯ್ಯಂಗಾರ್ ಅವರು ಕೊಟ್ಟಿದ್ದರು. ಅದ್ಭುತವಾದ ಜಗತ್ತು. ನನ್ನ ವೀಳೆದೆಲೆಯ ತೋಟದ ಪರಿಸರವನ್ನು ಮೀರಿದ ಲೋಕ.

"ನುಗ್ಗಿದೆ ನಾನಾ ಹಳುವಿನಲಿ,
ಆ ಕನಸಿನ ಹೆಗ್ಗಾಡಿನಲಿ,
ಅಲ್ಲಿದ್ದುದು ಬೆಳಕುಬಂದಲ್ಲ,
ಕತ್ತಲು ಅಲ್ಲ!
ಬೆಳಕೋ ಕತ್ತಲೋ ಶಿವನೇ ಬಲ್ಲ!" ಎಂದು ನೋಡಿದ ಕುವೆಂಪುರವರು ಮಾರ್ಮಿಕವಾದರು.

ನಾವು ಒಂದಷ್ಟು ಗೆಳೆಯರು ತಹಶೀಲದಾರ್ ಚಂದ್ರೇಗೌಡರ ಜೀಪಿನಲ್ಲಿ ಹಿರೇಕೊಡಿಗೆಗೆ ಹೋದಾಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು. ಹಿರೇಕೊಡಿಗೆ ಮತ್ತು ಕುಪ್ಪಳ್ಳಿಯನ್ನು ಒಂದುಗೂಡಿಸಿರುವ ಕಾಡಿನ ಸಂಬಂಧಗಳು. ಅದರ ಮಧ್ಯೆ ನಾಲ್ಕು ಗೋಡೆಗಳು. ಅಲ್ಲೊಂದು ಕುವೆಂಪುರವರ ಪ್ರತಿಮೆ. ಅವರ ಜೀವನ ಸಿದ್ಧಾಂತಗಳನ್ನು ಸಾರುವ ಸಾಲುಗಳು, ಎರಡೂ ಕಡೆಯೂ ಸಗಣಿ ವಾಸನೆಯಿಂದ ಆವರಿಸಿದ ತಿಪ್ಪೆಗುಂಡಿಗಳು. ಗೋಡೆಗಂಟಿಸಿದ ಕಪ್ಪುಕಲ್ಲು. ಅದರ ಮೇಲೆ ಅರ್ಹತೆ ಇಲ್ಲದವರೆಲ್ಲರ ಹೆಸರುಗಳು, ಒಂದು ಕ್ಷಣ "ಇವರೆಲ್ಲ ಇಲ್ಲಿ ಸಲ್ಲಲು ಆಜ್ಞೆ ಕೊಟ್ಟವರು ಯಾರು?" ಎಂದು ನಾವು ನಾವೇ ಮಾತಾಡಿಕೊಂಡೆವು. ಅತ್ಯಂತ ಕೆಟ್ಟದಾಗಿಟ್ಟುಕೊಂಡಿರುವ ಸ್ಥಳ. ಅಲ್ಲಿಂದ ಸುಮಾರು ನೂರಡಿಯಷ್ಟು ಮೇಲಕ್ಕೆ ಹೋದಾಗ ಕುವೆಂಪುರವರು ಬಾಲ್ಯದಲ್ಲಿ ಇಲ್ಲೆಲ್ಲ ಹೇಗೆ ನಲಿದಾಡಿರಬಹುದು ಅನಿಸಿತು. ಉದ್ದನೆಯ ಅಡಿಕೆಮರಗಳನ್ನು ನೋಡಿ ಖುಷಿಗೊಂಡೆ. ಒಮ್ಮೆ ಪಂದ್ಯಕಟ್ಟಿಕೊಂಡು ಒಂದು ಮರದಿಂದ ನಾಲ್ಕೈದು ಮರಗಳಿಗೆ ತೂಗುತ್ತ ಜಂಪ್ ಮಾಡಿದಾಗಿನ ಉತ್ಸಾಹ ಇರಲಿಲ್ಲ. ಯಾಕೆಂದರೆ ಅಪ್ಪ ಆಗಸೆ ಕಡ್ಡಿಯಿಂದ ಎರಡು ಬಾರಿಸಿದ್ದ.

ಒಂದು ರೀತಿಯ ವಿಷಾಧ ಆವರಿಸಿತ್ತು. ಕುವೆಂಪು ಲೋಕವನ್ನು ನೋಡಿದಂತೆಲ್ಲ ಈಗ ಮಾತನ್ನು ಕಳೆದುಕೊಂಡ ಅವರು ಜನನಿಬಿಡ ಜನಾರಣ್ಯದಲ್ಲಿ ಹೇಗಿರಬಹುದೆಂದು ಮಾತು ಮಾತಿನ ಮಧ್ಯೆ ಒಂದು ಹೋಗುತ್ತಿದ್ದರು. ಇಲ್ಲಿಂದ ಕುಪ್ಪಳ್ಳಿಗೆ ಹೊರಟಾಗ ರಸ್ತೆ ಮಧ್ಯೆ ಸಿಕ್ಕಿದ ಮಲೆನಾಡು ಹೋಟೆಲ್, ಬಿಸಿಬಿಸಿ ತಿಂಡಿ, ಕಾಫಿ ವಾಪಸ್ಸು ಬರುವಾಗ ನಮಗೆ ಚಿತ್ರಾನ್ನ ಬೇಕು ಎಂದು ಆಜ್ಞೆ ಮಾಡಿದೆವು. ಅದು ನನಗೆ ಪ್ರಿಯವಾಗಿದ್ದರಿಂದ ಒಂದು ರೀತಿಯಲ್ಲಿ ಒತ್ತಾಯ ತಂದಿದ್ದೆ. ಗೆಳೆಯ ವಿಜಯಕುಮಾರ್ ಸದಾ ಮಾತಾಡುವ ವ್ಯಕ್ತಿ. ಒಂದು ಲಕ್ಷ ಕೊಟ್ಟರೂ ಮಾತು

ನಿಲ್ಲಿಸದಂತಹವನು. "ನೀನು ತರಲೆ ಕಣೋ, ಲೋಫರ್ ಕಣೋ" ಎಂದು ಪ್ರೀತಿಯಿಂದ ಗೊಣಗುತ್ತಿದ್ದ. ಅವನ ಸಹ ಅಧ್ಯಾಪಕರಾದ ಚಂದ್ರಶೇಖರ ದೀಕ್ಷಿತ್, ಪ್ರೊ॥ ಪುಟ್ಟಯ್ಯ ಮತ್ತು ಸತ್ಯನಾರಾಯಣ ಅವರು ವಿಜಯಕುಮಾರ್ ಮಾವಂಖಲಿ ಮನುಷ್ಯ ಎಂದು ಮೌನಿಯಾಗಿದ್ದರು. ಚಂದ್ರೇಗೌಡ ಅವರು "ನಾನು ತಾಲ್ಲೂಕು ಮಾಜಿಸ್ಟ್ರೇಟ್, ನನ್ನ ಮುಂದೆ ಹೀಗೆ ಮಾತಾಡಬಾರದು" ಎಂದು ತುಂಟತನದಿಂದ ನಗುತ್ತ ಜೀಪ್ ಓಡಿಸುತ್ತಿದ್ದರು.

ನಾವು ಕುಪ್ಪಳ್ಳಿ ಮನೆಗೆ ತಲುಪುವ ಸಮಯಕ್ಕೆ ನಮ್ಮ ಅನುಕೂಲಕ್ಕೆಂಬಂತೆ ಮಹೇಶ್ ಸಿಕ್ಕಿದ್ದರು. ಆತ ಇಂಗ್ಲೀಷ್ ಅಧ್ಯಾಪಕ, ಅಜ್ಜಂಪುರಕ್ಕೆ ಹೊರಟಿದ್ದರು. ಅವರನ್ನು ಜೀಪಿನಲ್ಲಿ ಕೂರಿಸಿಕೊಂಡು ಕುವೆಂಪುರವರ ಮನೆಗೆ ಬಂದೆವು. ಮನೆಯನ್ನು ನೋಡುತ್ತಿದ್ದಂತೆ ಬಿಸಿಬಿಸಿ ಟೀ ಬಂತು. ಟೀ ಕುಡಿಯುತ್ತ ಮನೆಯನ್ನು ಎಷ್ಟು ನೋಡಿದರೂ ತೃಪ್ತಿಯಾಗಲಿಲ್ಲ. ಅದನ್ನು ನೋಡುತ್ತಿದ್ದಂತೆ 'ಹೆಗ್ಗಡತಿ' ಕಾದಂಬರಿಯನ್ನು ಓದುತ್ತಿದ್ದೇವೆ ಅನ್ನಿಸಿತು. ಯಾಕೆಂದರೆ ಬಹುಪಾಲು ವಿವರಗಳು ನಮ್ಮ ಮುಂದೆ ಬಿಚ್ಚಿಕೊಳ್ಳುತ್ತಿದ್ದುವು. ಎಷ್ಟೊಂದು ವಿಶಾಲವಾದ ಮನೆ, ಅಷ್ಟೇ ವಿಶಾಲವಾದ ಕೊಟ್ಟಿ, ಲಕ್ಷಾಂತರ ರೂಪಾಯಿ ಆಗುವ ಮರದ ತೊಲೆಗಳು, ಸುತ್ತಲೂ ರಹಸ್ಯವನ್ನು ಬೇಧಿಸುವ ಎರಡನೆಯ ಅಂತಸ್ತಿನ ಮನೆ. ಒಂದು ಕ್ಷಣ ಭಾವನಾತ್ಮಕವಾಗಿ ಜಗತ್ತಿನ ಯಾವನೇ ಲೇಖಕನಿಗೆ ಈ ರೀತಿಯ ಪರಿಸರವಿರಲಾರದೇನೋ ಅನ್ನಿಸಿತು. ಅಲ್ಲಿಂದ ಹೊರಬಂದು ಛತ್ರಿಗಳನ್ನು ಬಿಚ್ಚಿ ಕವಿಶೈಲವನ್ನು ನೋಡಲು ಹೋದೆವು. ಸುತ್ತಲೂ ದಟ್ಟವಾದ ಕಾಡು. ಹಾದಿಯುದ್ದಕ್ಕೂ ನಾನಾ ರೀತಿಯ ಬಳ್ಳಿಗಳು. ಒಂದೊಂದನ್ನೇ ಪಕ್ಕಕ್ಕೆ ಸರಿಸಿ ಮುಂದೆ ಸಾಗುತ್ತಿದ್ದೆವು. ಶೀತದ ಬಳ್ಳಿಗಳು. ಎಲೆ ಸೋಂಕಿದರೆ ಸಾಕು ಬೊಬ್ಬೆ ಬರಿಸುವ ಎಲೆ. ಚಿಕ್ಕಂದಿನಲ್ಲಿ ಆಗದ ಗೆಳೆಯರಿಗೆ ಎಲೆ ಸೋಂಕಿಸಿ ಮಜಾ ತೆಗೆದುಕೊಳ್ಳುತ್ತಿದ್ದ ದಿನಗಳು ನೆನಪಿಗೆ ಬಂದುವು. ಹಾಗೆಯೇ ಬೊಬ್ಬೆ ಬರಿಸಿಕೊಂಡವರು ಮೋಸಗೇ ಅಥವಾ ತಂದೆ ತಾಯಿಯವರಿಗೆ ಹೇಳಿ ಪೆಟ್ಟು ಕೊಡಿಸುತ್ತಿದ್ದುವು. ಮಜಾದ ಸಂಗತಿಗಳಲ್ಲಿ ಸೇರಿಕೊಂಡಿದ್ದುವು.

ಕಪ್ಪು ನೆಲ, ಮಳೆಬಿದ್ದು ಪಾಚಿಕಟ್ಟಿ ಮತ್ತಷ್ಟು ಕಪ್ಪು ಗೊಂಡಂಥದ್ದು. ಸುತ್ತಲೂ ಬಹು ಎತ್ತರಕ್ಕೆ ಗಿಡಮರಗಳಿಂದ ಆವೃತ್ತಿಗೊಂಡಿರುವ ಬೆಟ್ಟಗಳು. ಅದರಿಂದ ಮುಂಜನಾಕಾರದ್ದು ಕಪಿಚಿಕೊಂಡಿರುವುದನ್ನು ನೋಡುತ್ತಲೇ ಇರುವ ಎಂಬ ಅಭಿಮಾನ ಉಕ್ಕಿ ಬರುತ್ತಿತ್ತು. ಇದರ ಮಧ್ಯೆ ಕವಿಶೈಲ. ಕುವೆಂಪುರವರನ್ನು ರೂಪಿಸಿದ ವಿಶಾಲವಾದ ಶಿಲೆ. ಅವರು ಬರೆಯುತ್ತಿದ್ದ, ಚಿಂತಿಸುತ್ತಿದ್ದ ಎರಡು ಸಂಸ್ಕೃತಿಗಳ ಗೊಂದಲಗಳ ಮಧ್ಯೆ ಮನುಷ್ಯ ಸಂಬಂಧಗಳು ಇದ್ದರೆ ಎಲ್ಲಿ ಎಂದು ಪ್ರಶ್ನಿಸಿಕೊಂಡ

ಕವಿಶೈಲ, ಅಲ್ಲಿಯೇ 1936ರಲ್ಲಿ ಕುವೆಂಪು, ಬಿ. ಎಂ. ಶ್ರೀ ಮತ್ತು ವೆಂಕಣ್ಣಯ್ಯನವರು ಶಿಲೆಯ ಮೇಲೆ ತಮ್ಮ ಹೆಸರುಗಳನ್ನು ಬರೆದಿರುವುದು, ಇದಾದ ಮೇಲೆ ಎಂದೋ ತೇಜಸ್ವಿಯವರು ಪೂಚಂತೆ ಎಂದು ಬರೆದಿರುವುದು, ಬಿಸಿಲು ಮಳೆ, ಗಾಳಿಗೆ ಅದು ನಶಿಸುತ್ತ ಹೋಗುತ್ತಿರುವುದು ನಮ್ಮ ಮತ್ತೆ ಕೆಲವು ಎಡಬಿಡಂಗಿಗಳು ತಮ್ಮ ಹೆಸರುಗಳನ್ನು ಬರೆಯಲು ಹೋಗಿರುವುದು ನಮ್ಮ ಚರ್ಚೆಗೆ ವಿಷಯವಾಯಿತು. ಆಗ ಮಹೇಶರವರನ್ನು ಕುರಿತು "ನಿಮ್ಮ ಅನುಭವದ ದೃಷ್ಟಿಯಿಂದ ಕುವೆಂಪುರವರ ಬಗ್ಗೆ ಹೇಳಿ" ಅಂದಾಗ ಆತ ಸಂಕೋಚಗೊಂಡ. ಹೀಗೆಯೇ ಮಾತಿನ ಮಧ್ಯೆ 1974 ರಲ್ಲಿ ಕೆ.ಎಂ, ಶಂಕರಪ್ಪ, ಬೆಸಗರಹಳ್ಳಿ ರಾಮಣ್ಣ ಮತ್ತು ಹೆಚ್. ಎಲ್. ಕೇಶವಮೂರ್ತಿ ಜೊತೆ ಕುವೆಂಪುರವರನ್ನು ನೋಡಲು ಹೋಗಿದ್ದೆ. ಆಗ ಅವರೊಡನೆ ಚರ್ಚಿಸಿದ ಮಾತುಗಳನ್ನು ಲೇಖನ ಮಾಡಿ ತೋರಿಸಿದಾಗ "ಬ್ರಾಹ್ಮಣರ ರೀತಿಯಲ್ಲಿ ಬರೆಯಬಾರದು" ಎಂದು ಬೈದಿದ್ದನ್ನು ನೆನಪುಮಾಡಿದೆ.

ಭಾರವಾದ ಮನಸ್ಸಿನಿಂದ ಗಿಡ ಮತ್ತು ಬಳ್ಳಿಗಳನ್ನು ಸರಿಸುತ್ತ ಮತ್ತೆ ಮನೆಗೆ ಬಂದೆವು. ಕುವೆಂಪುರವರ ಚಿಕ್ಕಪ್ಪ ರಾಮಣ್ಣಗೌಡರ ಮಗ ಶೇಷಪ್ಪ (ಮಹೇಶರವರ ತಂದೆ) ಮಳೆಯಲ್ಲಿ ತೊಯ್ದು ಬಂದರು. ಅವರ ತಲೆಯ ಮೇಲೆ ಮುದ್ದಾದ ಅಡಿಕೆ ಪಟ್ಟೆಯಿಂದ ಮಾಡಿದ ಟೊಪ್ಪಿಗೆ ಇತ್ತು. ಅದನ್ನು ಆ ಮನೆಯ ನೆನಪಿಗೆ ಕೇಳಿದೆ. ಶೇಷಪ್ಪನವರು ನಗುತ್ತ ಕೊಟ್ಟರು. ತೆಗೆದು ತಲೆಗೆ ಧರಿಸಿಕೊಂಡೆ. ಮಿಕ್ಕಗೆಳೆಯರು ನಾವೇ ಕೇಳಿ ತೆಗೆದುಕೊಳ್ಳಬಹುದಾಗಿತ್ತು ಎಂದು ಮನಸ್ಸಿನಲ್ಲಿ ಪರದಾಡಿರಬೇಕು. ಆದರೆ ಗೆಳೆಯ ವಿಜಯಕುಮಾರ್ "ಬಲೇ ನನ್ಮಗ ಕಣೋ" ಎಂದು ಉದ್ಗಾರ ತೆಗೆದ. ನಾವು ಆ ಮನೆಯನ್ನು ಬಿಟ್ಟು ಹೊರಬಂದೆವು. ಮನಸ್ಸಿನೊಳಗೆ ಕುವೆಂಪುರವರ

"ಯಾವುದೋ ಊರು ? ಆ ಊರು!

ಬರಿಮಾಯಂದ ಊರು !"

ಸಾಲುಗಳು ಮನಸ್ಸಿನೊಳಗೆ ಕಾಡುತ್ತಿದ್ದವು.

18–9–93

— ಶೂದ್ರ ಶ್ರೀನಿವಾಸ್

ಕೇಂದ್ರ ಸಾಹಿತ್ಯ ಅಕಾಡೆಮಿ

(ಇತ್ತೀಚಿನ ಕೆಲವು ಕನ್ನಡ ಪ್ರಕಟಣೆಗಳು)

* ಕತ್ತಲೆಯಿಂದ ಕಗ್ಗತ್ತಲೆಗೆ (ಪಂಜಾಬಿ ಕಾದಂಬರಿ) ನರೇಂದ್ರಪಾಲ್‌ಸಿಂಗ್
ಅನು: ಪಿ. ಶಶಿಕಲಾ ಬೆಲೆ: 40 ರೂ
* ಜನಪದ ಗೀತಾಂಜಲಿ (ಕನ್ನಡ ಜಾನಪದ ಹಾಡುಗಳು) ಸಂ: ದೇ. ಜವರೇಗೌಡ
ಬೆಲೆ: 25 ರೂ
* ಕೆಂಪುಮೀನು (ಮಲಯಾಳಂ ಕಾದಂಬರಿ) ತಕ್ಕಜಿ ಶಿವಶಂಕರಪಿಳ್ಳೆ
ಅನು: ನಾ. ಕಸ್ತೂರಿ ಬೆಲೆ: 30 ರೂ
* ಜನಪದ ಮತ್ತು ಗಿರಿಜನರ ಕಥೆಗಳು ಸಂ: ಎಲ್.ಆರ್. ಹೆಗಡೆ ಬೆಲೆ: 65 ರೂ
* ಯುಗಾಂತ (ಮರಾಠಿ) ಐರಾವತಿ ಕರ್ವೆ ಅನು: ಸರಸ್ವತಿ ಗಜಾನನ ರಿಶಬುಂದ್
ಬೆಲೆ: 30 ರೂ
* ಭಾರತದ ಸಾಹಿತ್ಯ ನಿರ್ಮಾಣಕಾರರು (ಪ್ರತಿಯೊಂದರ ಬೆಲೆ: 15 ರೂ)
* ಪ್ರೇಮಚಂದ್ ಲೇ: ಪ್ರಕಾಶಚಂದ್ರ ಗುಪ್ತ ಅನು: ಎಸ್.ಕೆ. ದೇಸಾಯಿ
* ಈಶ್ವರಚಂದ್ರ ವಿದ್ಯಾಸಾಗರ ಲೇ: ಹಿರಣ್ಮಯ ಬ್ಯಾನರ್ಜಿ ಅನು: ಪಿ. ನರೇಗಲ್
* ಗಾಲಿಬ್ ಲೇ: ಎಂ. ಮುಜೀಬ್ ಅನು: ಪಂಚಾಕ್ಷರಿ ಹಿರೇಮಠ್
* ತಾರಾ ಶಂಕರ ಬಂದ್ಯೋಪಾಧ್ಯಾಯ ಲೇ: ಮಹಾಶ್ವೇತದೇವಿ ಅನು: ವಿಜಯಾ
* ಕಲ್ಹಣ ಲೇ: ಸೋಮನಾಥ ಧರ್ ಅನು: ಬನ್ನಂಜೆ ಗೋವಿಂದಚಾರ್ಯ
* ಬುದ್ಧದೇವ ಬೋಸ್ ಲೇ: ಅಲೋಕರಂಜನ್ ದಾಸಗುಪ್ತ
ಅನು: ರಾಮಚಂದ್ರಶರ್ಮ
* ಶ್ರೀರಂ ಲೇ: ಎಸ್.ಕೆ. ಕುಲಕರ್ಣಿ
* ತಿರುವಳ್ಳುವರ್ ಲೇ: ಎಸ್. ಮಹಾರಾಜನ್, ಅನು: ಪಿ. ಎಸ್. ಶ್ರೀನಿವಾಸ್
* ಹೆಚ್.ಎನ್. ಆಪ್ಟೆ ಲೇ: ಆರ್.ಬಿ. ಜೋಶಿ, ಅನು: ಎನ್. ಎಸ್. ಗಡಗ್‌ಕರ್

* ರಾಧಾನಾಥರೇ ಲೇ: ಗೋಪಿನಾಥ ಮೊಹಂತಿ, ಅನು: ಸುಮತೀಂದ್ರ ನಾಡಿಗ್
* ರಾಜಾಮೋಹನರಾಯ್ ಲೇ: ಸೌಮೇಂದ್ರನಾಥ ಠಾಕೂರ್
ಅನು: ಎಂ. ರಾಮರಾವ್
* ರಾಹುಲ ಸಾಂಕೃತ್ಯಾಯನ ಲೇ: ಪ್ರಭಾಕರ ಮಾಚ್ವೆ
ಅನು: ಲಕ್ಷ್ಮೀನಾರಾಯಣ ಅರೋರ
* ವಲ್ಲತೋಲ್ ನಾರಾಯಣ ಮೆನನ್ ಲೇ: ಬಿ. ಹೃದಯಕುಮಾರಿ
ಅನು: ಕೆ.ವಿ. ನಾರಾಯಣ
* ನಾಮದೇವ ಲೇ: ಎಂ.ಜಿ. ದೇಶ್‌ಮುಖ್
ಅನು: ಜಯತೀರ್ಥ ರಾಜಪುರೋಹಿತ್ ಮತ್ತು ಎಸ್.ಪಿ. ಪಾಟೀಲ
* ಜಯಶಂಕರ್ ಪ್ರಸಾದ್ ಲೇ: ರಮೇಶ್‌ಚಂದ್ರ ಷಾ ಅನು: ಎಸ್. ಪಟ್ಟಣಶೆಟ್ಟಿ
* ಫಣೀಶ್ವರನಾಥ ರೇಣು ಲೇ: ಸುರೇಂದ್ರ ಚೌದರಿ ಅನು: ಹೆಚ್.ಎಸ್. ಪಾರ್ವತಿ
* ನಾಮಕ್ಕಲ್ ರಾಮಲಿಂಗಂ ಪಿಳ್ಳೈ ಲೇ: ಕೆ.ಆರ್. ಹನುಮಂತನ್
ಅನು: ವಿ. ಗೋಪಾಲ ಕೃಷ್ಣ
* ಯಶಪಾಲ್ ಲೇ: ಕಮಲಪ್ರಸಾದ್ ಅನು: ಹೆಚ್.ಎ. ರಾಮಚಂದ್ರರಾವ್
* ಶಿಶುನಾಳ ಷರೀಫ್ ಸಾಹೇಬರು ಲೇ: ಶಿವಾನಂದ ಗುಬ್ಬಣ್ಣನವರ್
* ಬಾಬಾ ಫರೀದ್ ಲೇ: ಬಲವಂತಸಿಂಗ್ ಆನಂದ್ ಅನು: ಚೆನ್ನವೀರ ಕಣವಿ
* ಪಮ್ಮಾಳ ಸಂಬಂಧ ಮೊದಲಿಯಾರ್ ಲೇ: ಎ.ಎನ್. ಪೆರುಮಾಳ್
ಅನು: ಕೆ. ಜಯರಾಮನ್

ಸಾಹಿತ್ಯ ಅಕಾಡೆಮಿ

ನವದೆಹಲಿ-1 ಕಲ್ಕತ್ತ-53 ಮುಂಬಯಿ-14 ಬೆಂಗಳೂರು-2 ಮದ್ರಾಸ್-18

ದಕ್ಷಿಣ ಭಾರತ ಪ್ರಾದೇಶಿಕ ಕಛೇರಿ: 109, ಜೆ.ಸಿ. ರಸ್ತೆ, ಬೆಂಗಳೂರು-560 002

ದೂರವಾಣಿ: 221412

47ನೇ ಸ್ವಾತಂತ್ರ್ಯೋತ್ಸವ

"ರಾಷ್ಟ್ರೀಯತೆ, ಧಾರ್ಮಿಕತೆಗಿಂತ ಶ್ರೇಷ್ಠ. ಈ ಅರ್ಥದಲ್ಲಿ ನಾವು ಮೊಟ್ಟ ...ದಲಿಗೆ ಭಾರತೀಯರು, ಅನಂತರ ಹಿಂದೂಗಳು, ಮುಸಲ್ಮಾನರು, ಪಾರ್ಸಿಗಳು ...ತ್ತು ಕ್ರಿಶ್ಚಿಯನ್ನರು" 47ನೇ ಸ್ವಾತಂತ್ರ್ಯ ವರ್ಷ. — ಮಹಾತ್ಮ ಗಾಂಧಿ

ನಲವತ್ತಾರು ವರ್ಷಗಳ ಹಿಂದೆ ಇಡೀ ರಾಷ್ಟ್ರಪಿತನ ಹಿಂದೆ ಒಂದಾಗಿ ನಿಂತ ...ರತ ಸ್ವಾತಂತ್ರ್ಯ ಜ್ಯೋತಿಗೆ ನಮಿಸಿತು. ನಮಗೆ ಸ್ವಾತಂತ್ರ್ಯ ಗಳಿಸಿಕೊಟ್ಟ ಮಹಾನ ...ತ್ಯಾಗಿಗಳೆಲ್ಲರಿಗೂ ನಾವಿಂದು ಶಿರಬಾಗಿ ವಂದಿಸೋಣ.

"ಮೈಸೂರು ಹುಲಿ" ಟಿಪ್ಪುಸುಲ್ತಾನ್ 1799 ರಲ್ಲಿ ತಾಯ್ನಾಡಿನ ರಕ್ಷಣೆಗಾಗಿ ...ೋರಾಡಿ ಜೀವತೆತ್ತ ದಿನದಿಂದಲೂ, ವೀರರಾಣಿ ಕಿತ್ತೂರ ಚೆನ್ನಮ್ಮ 1824 ರಲ್ಲಿ ...ವಾತಂತ್ರ್ಯ ಸಂಗ್ರಾಮಕ್ಕೆ ಕರೆಗೊಟ್ಟ ದಿನದಿಂದ ಹಿಡಿದು, 1942ರ "ಕ್ವಿಟ್ ಇಂಡಿಯಾ" ...ಳುವಳಿಯವರೆಗೆ ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿತ್ತು.

ಜನಮನಕ್ಕೆ ಸ್ಪಂದಿಸುವ ಸ್ವಚ್ಛ ಆಡಳಿತ: ಪ್ರಗತಿಪರ ಕಾರ್ಯಕ್ರಮ ...ಳ ಫಲ ಸಮಾಜದ ಪ್ರತಿ ಹಂತಕ್ಕೂ ತಲುಪುವುದನ್ನು ಖಾತರಿಪಡಿಸಿಕೊಳ್ಳಲು, ...ರ್ಕಾರ ತನ್ನ ಆಡಳಿತ ಯಂತ್ರವನ್ನು ಸಬಲಗೊಳಿಸಿ, ಸಿಬ್ಬಂದಿಗೆ ಅಗತ್ಯವಿರುವ ...ಧಿಕಾರವನ್ನಿತ್ತು, ಅದರ ಪ್ರತಿ ಕಾರ್ಯಾಚರಣೆಗೂ ಹೊಣೆಗಾರಿಕೆ ಹಚ್ಚಿ, ಕಾರ್ಯ ...ಧನೆಯೇ ಏಕರೆಯನ್ನು ಅಳೆಯುವ ಅಳತೆಗೋಲನ್ನಾಗಿಸುವ ವಿನೂತನ ವ್ಯವಸ್ಥೆ ...ದೀಗ ಜಾರಿಗೆ ಬಂದಿದೆ.

ಆದ್ಯತಾ ಕ್ಷೇತ್ರಗಳು: ಕೈಗಾರಿಕೆ: ಕರ್ನಾಟಕ ಹೊಸ ಕೈಗಾರಿಕಾ ...ೀತಿಯಂತೆ 1995ರ ವೇಳೆಗೆ ರಾಜ್ಯವನ್ನು ದೇಶದಲ್ಲಿ 4ನೇ ಸ್ಥಾನಕ್ಕೂ, ಈ ...ತಮಾನದ ಅಂತ್ಯದ ವೇಳೆಗೆ ಮೊದಲನೇ ಸ್ಥಾನಕ್ಕೂ ತರಲು ರೂ. 45,000 ಕೋಟಿ ...ೊತ್ತ ಹೂಡಿಕೆಯ ವಿಸ್ತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದರಲ್ಲಿ ...ಸ್ತುತ ರೂ. 16,000 ಕೋಟಿಗಳಷ್ಟು ಬಂಡವಾಳ ಹೂಡಿಕೆಯಾಗುತ್ತಿದೆ. ನಮ್ಮ ...ೇಶದ ಹಾಗೂ ಹೊರದೇಶಗಳ ಹೆಸರಾಂತ ಕೈಗಾರಿಕಾ ಘಟಕಗಳಿಗೆ ರಾಜ್ಯದಲ್ಲಿ ...ೈಗಾರಿಕಾ ದ್ವಾರ'ವೊಂದು ರೂಪುಗೊಂಡಿದೆ. ಯುವಜನರಲ್ಲಿ ಕುಡಿತದ ಚಟವನ್ನು ...ತ್ತಿಕ್ಕಲು ಕಾರ್ಯಕ್ರಮ. 21 ವರ್ಷ ವಯಸ್ಸಿನೊಳಗಿನವರಿಗೆ ಮದ್ಯಪಾನ ಮಾರಾಟ ...ಷೇಧ. ಶಾಲಾ ಕಾಲೇಜುಗಳ ಸಮೀಪ ಮತ್ತು ಹೆದ್ದಾರಿಗಳ ಆಸುಪಾಸಿನಲ್ಲಿ ಬಾರ್ ...ಳ ನಿಷೇಧ. ಬಾರ್ ಮತ್ತು ಪಬ್‌ಗಳು ರಾತ್ರಿ 10–30ರೊಳಗೆ ಮುಚ್ಚಲು ಕಟ್ಟಾಜ್ಞೆ.

ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಬಲಿದಾನ–
ಸರ್ವತ್ಯಾಗ ಮಾಡಿದ ಹುತಾತ್ಮರ ಕನಸನ್ನು ನನಸಾಗಿಸಲು ಕರ್ನಾಟಕ ಬದ್ಧ.
ಕರ್ನಾಟಕ–ಸ್ವರಾಜ್ಯದ ನಿಜ ಅರ್ಥವನ್ನು ಸಾಧಿಸುವ ಯತ್ನದಲ್ಲಿ

"ಕರ್ನಾಟಕ ವಾರ್ತೆ"

...ರ: 11೬೯3.

FNP/KRNU/72 No. M (2) PRB 211/73/74

SHOODRA Kannada Monthly

ಶೂದ್ರ

ಅಕ್ಟೋಬರ್ 1993ರ ಸಂಚಿಕೆಯಲ್ಲಿ :

ಡಾ|| ಡಿ. ಆರ್. ನಾಗರಾಜ್ – ಎಸ್. ಆರ್. ವಿಜಯಶಂಕರ – ಶಾಂತಲಕ್ಷ್ಮಿ ವೇಣುಗೋಪಾಲ ಸೊರಬ – ಹ. ಸೋಮಶೇಖರ್ – ಡಾ|| ಸಂಧ್ಯಾರೆಡ್ಡಿ ಮಹಾಬಲಮೂರ್ತಿ ಕೊಡ್ಲೆಕೆರೆ – ಹಾರೋಗೊಳಿಗೆ ಪ್ರಮೀಳ – ಎಲ್. ಎನ್. ಮುಕುಂದರಾಜ್ – ಪುಸ್ತಕ ವಿಮರ್ಶೆ – ಕನಸಿಗೊಂದು ಕಣ್ಣು – ಇತ್ಯಾದಿ

M. Srinivas, Editor for Shoodra, Printed at :
Pallavi Printers, 261/3, Muniyappa Building
Jaraganahalli, Kanakapura Road, Bangalore-560 078